9. ಶಾಸನ ರಚನೆ

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ, 2000.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ''2000ದ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಸಹಕಾರಿ ಕ್ಷೇತ್ರದಲ್ಲಿ ಇನ್ನೂ ಉತ್ತಮ ಫಲಿತಾಂಶಗಳನ್ನು ಸಾಧಿಸುವುದಕ್ಕೋಸ್ಕರ ಕರ್ನಾಟಕ ಸಹಕಾರಿ ಸಂಘ ಕಾಯಿದೆಯಡಿಯ ಏಟಂನಲ್ಲಿ ಈಗ ಇರುವ ಒಪ್ಪಂದಿತ ಪರಿಣಾಮವಾಗಿ ಕೆಲವು ಗೊಂದಲಗಳನ್ನು ನಿವಾರಣೆ ಮಾಡುವ ಸಲುವಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಈಗಾಗಲೇ ಸದನದ ಮುಂದೆ ಮಂಡಿಸಿದ್ದೇನೆ. ನಾವು ತಿದ್ದುಪಡಿಯನ್ನು ಸೆಕ್ಷನ್ 2ನೇ ಪ್ರಕರಣ, 12ನೇ ಪ್ರಕರಣ, 18ನೇ ಪ್ರಕರಣ, 20ನೇ ಪ್ರಕರಣ, 22ನೇ ಪ್ರಕರಣ, 29ನೇ ಪ್ರಕರಣ, 29(ಸಿ) ಪ್ರಕರಣ, 29(ಎಫ್) ಪ್ರಕರಣ, 30ನೇ ಪ್ರಕರಣ, 39(ಎ) ಪ್ರಕರಣ, 31ನೇ ಪ್ರಕರಣ, 30(ಎ) ಪ್ರಕರಣ, 63ನೇ ಪ್ರಕರಣ, 69ನೇ ಪ್ರಕರಣ, 106ನೇ ಪ್ರಕರಣ, 121ನೇ ಪ್ರಕರಣ ಎಂದು ಹೊಸ ಪ್ರಕರಣ ಸೇರಿಸಿದ್ದೇವೆ. ಅದೇ ರೀತಿ ತಿದ್ದುಪಡಿಗಳನ್ನು 124ನೇ ಪ್ರಕರಣ, 120(ಎ), 126(ಎ), 129ನೇ ಪ್ರಕರಣಕ್ಕೆ ತಂದಿದ್ದೇವೆ. ಇಲ್ಲಿ ಮುಖ್ಯವಾಗಿ ಕೆಲವು ಅಸಿಸ್ಟೆಡ್ ಸೊಸೈಟೀಸ್ ಎಂದು ಕೇವಲ ಶೇರ್ ಹೋಲ್ಡಿಂಗ್ ಪಡೆದಂಥವುಗಳು ಎಂದು ಇತ್ತು. ಆದರೆ ಈಗ ನಾವು ಯಾರಿಗೆ ಸಾಲವನ್ನು ಕೊಟ್ಟಿದ್ದೇವೆ ಮತ್ತು ಯಾರಿಗೆ ಸರ್ಕಾರ ಗ್ಯಾರಂಟಿಯಾಗಿದೆಯೋ ಅಂಥಾದ್ದನ್ನು ಈಗ ಸೇರಿಸಿದ್ದೇವೆ. ಈ ಹಿಂದೆ ಇದ್ದ ಸರ್ಕಾರ ಡೈರೆಕ್ಟರ್ ಆಫ್ ಆಡಿಟ್ ಮತ್ತು ಆರ್.ಸಿ.ಎಸ್.ನ್ನು ಒಂದೇ ಮಾಡಿತ್ತು. ಈಗ ಅವೆರಡನ್ನೂ ಬೇರೆ ಬೇರೆ ಎಂದು ಮಾಡಲಾಗಿದೆ. ಈ ಹಿಂದೆ ಅಫೆಕ್ಸ್ ಬ್ಯಾಂಕ್‌ನಲ್ಲಿ ಇದ್ದ 25 ಡೈರೆಕ್ಟರ್‌ಗಳ ಸಂಖ್ಯೆಯನ್ನು ಹೊಸ ಏಳು ಜಿಲ್ಲೆಗಳಾದ ಕಾರಣ ಈಗ ಅದನ್ನು 32ಕ್ಕೆ ಏರಿಸಿದ್ದೇವೆ. ಇನ್ನು ಅವಧಿಯನ್ನು ಮೂರು ವರ್ಷ ಇದ್ದುದನ್ನು ಐದು ವರ್ಷಕ್ಕೆ ಏರಿಸಿದ್ದೇವೆ. ಇನ್ನು ಪದಾಧಿಕಾರಿಗಳ ಚುನಾವಣೆಯನ್ನು ಹಿಂದೆ ಇದ್ದ ಎರಡೂವರೆ ವರ್ಷಗಳನ್ನು ತೆಗೆದುಹಾಕಿ ಒಂದೂವರೆ ವರ್ಷಕ್ಕೆ ಈ ಚುನಾವಣೆಯನ್ನು ಮಾಡಬೇಕು ಎಂದು ತಿದ್ದುಪಡಿ ಮಾಡಿದ್ದೇವೆ. ರಿಜಿಸ್ಟ್ರಾರ್‌ರವರ ವರದಿ ಮೇಲೆ ಸರ್ಕಾರವು ಒಂದು ಸಂಘಕ್ಕೆ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ, 31ನೇ ಪ್ರಕರಣದಡಿಯಲ್ಲಿ ಒಬ್ಬ ವಿಶೇಷಾಧಿಕಾರಿಯ ಒಂದು ವರ್ಷದ ಅವಧಿಯನ್ನು ಸ್ವಲ್ಪ ಹೆಚ್ಚು ಮಾಡುವ ವಿಚಾರ, ನೈಸರ್ಗಿಕ ವಿಕೋಪದಿಂದ ಏನಾದರೂ ತೊಂದರೆಯಾದಲ್ಲಿ 6 ತಿಂಗಳೋ,

ಅಥವಾ ಒಂದು ವರ್ಷವೋ ಚುನಾವಣೆಯನ್ನು ಮುಂದೂಡುವ ವಿಚಾರ, ಸರ್ಕಾರ ನಾಮನಿರ್ದೇಶನ ಮಾಡುವಂಥಾದ್ದನ್ನು ಸರ್ಕಾರಕ್ಕೆ ಸೀಮಿತವಾಗಿ ದಿ ಪ್ಲೆಷರ್ ಆಫ್ ದಿ ಗೌವರ್ನ್‌ಮೆಂಟ್ ಎಂದು ಮಾಡಿದ್ದೇವೆ. ಸೆಕ್ಷನ್ 30(ಎ) ಪ್ರಕರಣದನ್ವಯವಾಗಿ ಮಾರ್ಪಟ್ಟು ಆಧುನಿಕ ಉಪಬಂಧದನ್ವಯ ಸಂಘ ವಿನಾಯಿತಿ ನೀಡುವುದಕ್ಕೆ ಹಿಂದಕ್ಕೆ ಪುನರ್ ಜಾರಿಗೆ ತಂದಿದ್ದೇವೆ. ಮುಖ್ಯ ಕಾರ್ಯನಿರ್ವಾಹಕರ ನಿರ್ಣಯ ಅಥವಾ ಆದೇಶ ಪ್ರತಿಗಳನ್ನು ರಿಜಿಸ್ಟ್ರಾರ್ ಸಲ್ಲಿಸುವ ಮತ್ತು ಇದರ ಸಮ್ಮತ ಉದ್ದೇಶಗಳನ್ನು ಹಿಂದೆ ತೆಗೆದುಕೊಳ್ಳುವುದಕ್ಕೆ ಅಥವಾ ರದ್ದು ಮಾಡುವುದಕ್ಕೆ ಅವಕಾಶ ನೀಡಲಾಗಿದೆ. ತಾವು ದಯವಿಟ್ಟು ಇದಕ್ಕೆ ಸಹಮತಿಯನ್ನು ಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯರಾದ ರಂಗನಾಥ್‌ಜೀಯವರು ಇಲ್ಲಿ ಇದ್ದಾರೆ," ಬಹುಶಃ ಅವರ ಅಧ್ಯಕ್ಷತೆಯೊಳಗೆ ಒಂದು ಕಮಿಟಿ ಮಾಡಿ ಹಿಂದೆ ಇದನ್ನು ಮಂಡನೆ ಮಾಡುವುದನ್ನು ಮುಂದಕ್ಕೆ ಹಾಕಬೇಕು ಮತ್ತು ಮುಂದೆ ಇದರ ಬಗ್ಗೆ ಎಲ್ಲರೂ ಕೂಡಿಕೊಂಡು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದು ನಂತರ ಈ ಬಿಲ್‌ನ್ನು ತರಬೇಕು ಎಂದು ಹೇಳಿದ್ದರು. ಅವರು ಹಿಂದೆ ಈ ಸಹಕಾರಿ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಮಾಡಿದಂಥ ಹಿರಿಯ ಸಚಿವರು ಆಗಿದ್ದಾರೆ. ಮಾನ್ಯ ಅಧ್ಯಕ್ಷರೆ, ಮಹಾತ್ಮ ಗಾಂಧಿಯವರು ಆಫ್ರಿಕಾದಲ್ಲಿ ವಕೀಲರಾಗಿ ಸೇವೆ ಮಾಡುತ್ತಿದ್ದಾಗ 'ಕಾನೂನು ಮತ್ತು ವಕೀಲರು' ಎಂಬ ಪುಸ್ತಕವನ್ನು ಬರೆದಿದ್ದಾರೆ. ಅವರು ಈ ಪುಸ್ತಕದಲ್ಲಿ ಒಂದು ಮಾತನ್ನು ಏನು ಹೇಳಲಾಗಿದೆ ಎಂಬ ಬಗ್ಗೆ ಮಾನ್ಯ ರಂಗನಾಥ್‌ರವರೇ ಹಿಂದೊಮ್ಮೆ ಹೇಳಿದಾಗ ನಾನು ನೋಟ್ ಮಾಡಿಕೊಂಡಿದ್ದೇನೆ. ಆ ಪುಸ್ತಕದಲ್ಲಿ ಏನು ಹೇಳಲಾಗಿದೆ ಎಂದರೆ ಯಾವುದೇ ಕಾಯಿದೆಗೆ ತಿದ್ದುಪಡಿ ಮಾಡಬೇಕಾದರೆ ಆ ಕಾಯಿದೆಯಿಂದ ಬಹಳಷ್ಟು ವರ್ಷ ಜನರಿಗೆ ಅನಾನುಕೂಲವಾಗಿದೆಯೆಂದು ಕಂಡುಬಂದಾಗ ಮಾತ್ರ ಆ ಕಾಯಿದೆಗೆ ತಿದ್ದುಪಡಿ ಮಾಡಲು ಪ್ರಯತ್ನ ಮಾಡಬೇಕೆಂದು ಇದೆ. ನಮ್ಮ ತಪ್ಪಿಗೆ ನೀವು ಸರ್ಕಾರಕ್ಕೆ ಬಂದಿರಿ, ನಾವು ಗುದ್ದಾಡಿ, ಚಿನ್ನಿಗಪ್ಪ ಆ ಕಡೆ ಕುಳಿತುಕೊಂಡರು. ನಾವು ಈ ಕಡೆ ಕುಳಿತುಕೊಂಡಿದ್ದೇವೆ. ಈಗ ಸ್ವಲ್ಪ ಹೊತ್ತಿಗೆ ಮುಂಚಿ ಸದನದಿಂದ ಹೊರಗೆ ಹೋಗಿದ್ದರಲ್ಲಾ ಈ ಬಿಜೆಪಿಯವರು, ಇವರು ನಾವು ಸುಮ್ಮಸುಮ್ಮನೆ ಸರ್ಕಾರ ಹಂಚಿಕೊಳ್ಳುವುದಕ್ಕೆ ಹೋಗಿ ಕಡೆಗೆ ಏನೇನೋ ಆಗಿ ಬಂದೆವು.

ಶ್ರೀ ಎಸ್.ಸುರೇಶ್‌ಕುಮಾರ್: ನಾವು ಸುಮ್ಮನೇ ಹೊರಗೆ ಹೋಗಿರಲಿಲ್ಲ. ನಾವು ವಾಕ್-ಔಟ್ ಮಾಡಿದ್ದೆವು.

ಶ್ರೀ ಎಸ್.ಎಸ್.ಪಾಟೀಲ್: ನೀವು ಹಂಚಿಕೊಳ್ಳುವುದಕ್ಕೆ ಹೋಗಿಲ್ಲ. ನೀವು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದನ್ನು ಕೇಳಿದ್ದರೆ ಖಂಡಿತವಾಗಿ ನೀವು ವಾಕ್-ಔಟ್ ಮಾಡುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಉತ್ತರವನ್ನು ಹೇಳಿದ್ದಾರೆ. ಪ್ರಾಮಾಣಿಕವಾಗಿ ನಾನು ಹೇಳುವುದೇನೆಂದರೆ ಆ ಉತ್ತರ ಕೇಳಿದ್ದರೆ ನೀವು ಹೊರಗೆ

ಹೋಗುತ್ತಿರಲಿಲ್ಲ. ಆದರೆ ಆ ಮಾತು ಬೇರೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಜೆ.ಹೆಚ್.ಪಟೇಲ್‌ರು ಯಾವುದೇ ಕಾರಣಕ್ಕೂ ಸುಮ್ಮಸುಮ್ಮನೆ ವಾಕ್‌ಔಟ್ ಮಾಡಬೇಡಿ ಎಂದು ಹೇಳಿದ್ದರು. ಈ ವಿಷಯ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೂ ಗೊತ್ತಿದೆ. ಅಧ್ಯಕ್ಷರೆ, ಈ ತಿದ್ದುಪಡಿಯನ್ನು ಏಕೆ ತಂದರು? ಅಂಥ ಕಾರಣ ಏನಿತ್ತು ಎಂಬ ಬಗ್ಗೆ ನಾನು ಹೇಳುತ್ತಾ ಹೋದರೆ ಅದು ಒಂದು ದಿವಸದಲ್ಲಿ ಮುಗಿಯುವುದಿಲ್ಲ. ಬಹುಶಃ ಇವರೆಲ್ಲಾ ತಿದ್ದುಪಡಿ ತರುವುದನ್ನು ನೋಡಿದರೆ ಈ ಸಹಕಾರಿ ಕಾಯಿದೆ ಹೇಗೆ ಬಂತು? ಯಾವ ಕಾರಣದಿಂದ ಇದು ಹುಟ್ಟಿತು? ಏಕೆ ಬಂತು? ಮುಂದೆ ಇದರಲ್ಲಿ ಏನೇನೋ ತಪ್ಪಾಯಿತು. ಏಕೆ ಇದನ್ನು ಸರ್ಕಾರ ಹಸ್ತಕ್ಷೇಪ ಮಾಡಿ ಸಹಕಾರ ಸಂಘಗಳು ಹಾಳಾಯಿತು? ಇದೆಲ್ಲಾ ಹೇಳಬೇಕಾಗುತ್ತದೆ. ಇದು ತಮ್ಮ ಚೇಂಬರ್‌ನಿಂದ ಬಂದಿರುವುದರಿಂದ ನಾನು ಬಹಳ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲದಿದ್ದರೆ ನಾನು ಹೇಳುತ್ತಿದ್ದೆ. ತಾವು ಹೇಳಿದ ಹಾಗೆ ಒಂದು ಕನ್‌ಕ್ಲೂಷನ್‌ಗೆ ಬಂದಿರಿ, ಈಗ ಅವರು ಅದನ್ನು ಒಪ್ಪಿಕೊಂಡರೆ ಸರಿಯಾಯಿತು. ಅದನ್ನು ಒಪ್ಪುತ್ತೇನೆ ಎಂದು ತಮ್ಮ ಎದುರಿಗೆ ಹೇಳಿದ್ದಾರೆ. ಅವರು ಈ ರೀತಿ ಹೇಳಿದಾಗ ನಾವೂ ಕೂಡ ಇದ್ದೆವು. ಆದರೆ ಕೆಲವು ಮಾತುಗಳನ್ನು ಮಾನ್ಯ ಸಚಿವರಿಗೆ ಹೇಳುತ್ತೇನೆ, ತಮ್ಮ ಮನಸ್ಸು ಬದಲಾವಣೆ ಆಗಬೇಕಾಗಿದೆ. ಏನೋ ಒಂದು ಹಠ ಹಿಡಿದು ಮಾಡುವುದಲ್ಲ. ತಾವು ಯುವಕರು ಬಹಳ ಮುಂದೆ ಹೋಗತಕ್ಕಂಥವರು ಈ ರಾಜ್ಯ ನಡೆಸುವುದಕ್ಕೆ ಇನ್ನೂ ಮುಂದೆ ಹೋಗಬೇಕಾಗಿದೆ. ಆದುದರಿಂದ ಇಂತಹ ಸ್ಥಿತಿಯಲ್ಲಿ ಯಾವುದೇ ಒಂದು ಹಠಕ್ಕೆ ಬಿದ್ದು ಮಾಡುವುದು ಸರಿಯಾಗುವುದಿಲ್ಲ. ಪೂಜ್ಯ ಗಾಂಧೀಜಿಯವರು ಹೇಳಿದಂತಹ ಮಾತು ತಾವೇ ನೆನಪು ಮಾಡಿದಿರಿ, ಆ ಕಾರಣದಿಂದ ನಾನು ಒಂದು ಪುಸ್ತಕ ತೆಗೆದು ನೋಡಿದೆ. ಅವರು ಏನು ಹೇಳಿದ್ದಾರೆಂದರೆ, 'ಯಾವುದೇ ಒಂದು ಕಾಯಿದೆ ಮಾಡಿದಮೇಲೆ ಅದರ ತಿದ್ದುಪಡಿ ಮಾಡಬೇಕಾದರೆ ಕೆಲವು ವರ್ಷ ನೋಡಬೇಕಾಗುತ್ತದೆ. ಅದರಿಂದ ಜನರಿಗೆ ಏನಾದರೂ ತೊಂದರೆಯಾದರೆ, ತಿದ್ದುಪಡಿ ಮಾಡಿ' ಎಂದು ಹೇಳುತ್ತಾರೆ. ಕಾಯಿದೆ ಇದೆ ಎಂದು ತಿದ್ದುವುದು ಅಲ್ಲ. ಈ ಸಹಕಾರಿ ಕಾಯಿದೆ ತಿದ್ದುಪಡಿಯಾದಷ್ಟು ಇನ್ನಾವುದೇ ಕಾಯಿದೆ ತಿದ್ದುಪಡಿಯಾಗಿಲ್ಲ. ಒಂದು ಸರಕಾರ ಬಂದರೆ ಒಂದು ತಿದ್ದುಪಡಿಯಾಗುತ್ತದೆ. ತಮಗೆ ಹೇಳುತ್ತೇನೆ ತೆಗೆದು ನೋಡಿ, ಸ್ವಾತಂತ್ರ್ಯ ಬಂದನಂತರ ಸರ್ಕಾರ ಬದಲಾವಣೆಯಾಯಿತು ಎಂದರೆ ತಿದ್ದುಪಡಿಯಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಮಾನ್ಯ ಸಚಿವರಿಗೆ ಹೇಳುತ್ತೇನೆ, ಇದನ್ನು ಕೆಲವು ಕಾಲ ನೋಡಿ. ಅವತ್ತು ಯಜಮಾನರು ಹೇಳಿದಂತೆ ನಮಗೆ ನಿಮಗೆ ಎಲ್ಲರಿಗೂ ಹಿರಿಯರು ಮಾರ್ಗದರ್ಶಿಗಳು ಹಾಗೂ ಹಿಂದೆ ಇಲಾಖೆಯನ್ನು ನಡೆಸಿದಂತಹವರು. ಆ ಕಾರಣದಿಂದ ಅವರ ಅನುಭವಗಳನ್ನು ನಾವು ಹೇಳಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಚಿಂತನೆ ಮಾಡಬೇಕೆಂದು ಹೇಳುತ್ತಾ, ಇಲ್ಲಿ ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಶ್ರೀಮತಿ ಸೋನಿಯಾ ಗಾಂಧೀ ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದ ಬರೆದರು. ಅದೇನೆಂದರೆ ಯಾವ ರೀತಿಯಾಗಿ ಸಹಕಾರಿ ಇಲಾಖೆಯನ್ನು ನಡೆಸಬೇಕು, ಯಾವ ರೀತಿಯಾಗಿ ಕಾಯಿದೆಯನ್ನು ತಿದ್ದುಪಡಿ ಮಾಡಬೇಕು, ಎಂದು ತಮ್ಮ ಕಾಂಗ್ರೆಸ್ ಮುಖ್ಯಮಂತ್ರಿಗಳಿಗೆ ಕಾಗದ

ಬರೆದಿದ್ದಾರೆ. ಆದರೆ ಇದನ್ನೆಲ್ಲಾ ಇಲ್ಲಿ ಓದುವುದಕ್ಕೆ ಹೊತ್ತಾಗುತ್ತದೆ. ಆದರಲ್ಲಿ ಸ್ವಲ್ಪ ಓದಿಬಿಡುತ್ತೇನೆ.

ಅಧ್ಯಕ್ಷರು: ಬೇಡ, ಅದು ಪಾರ್ಟಿ ಅಫೇರ್ಸ್ ಆಯಿತು.

ಶ್ರೀ ಎಸ್.ಎಸ್.ಪಾಟೀಲ್: ಇದನ್ನೆಲ್ಲಾ ಹೇಳುವುದು ಬೇಡ. ನಾವು ಹಾಗೆ ಹೇಳುತ್ತಾ ಕುಳಿತರೆ ಇದೆಲ್ಲಾ ತಪ್ಪಾಗುತ್ತದೆ.

ಅಧ್ಯಕ್ಷರು: ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿ. ಇಲ್ಲಿ ಪಾರ್ಟಿ ವಿಷಯ ಏಕೆ ಮಾತನಾಡಬೇಕು? ಮಾತನಾಡುವುದು ಬೇಡ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಸೋನಿಯಾ ಗಾಂಧಿ ಅವರು ಕೋ-ಆಪರೇಟೀವ್ ಕಾಯಿದೆ ತಿದ್ದುಪಡಿ ವಿಚಾರದ ಬಗ್ಗೆ ಟಪಾಲು ಬರೆದಿದ್ದಾರೆ. ಇದು ಪಾರ್ಟಿ ವಿಚಾರ ಅಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ಅದು ಹೇಗೆ ಇರಬೇಕೆಂದು ಬರೆದಿದ್ದಾರೆ. ಇದು ತಿದ್ದುಪಡಿ ದಿಸೆಯಿಂದ ಬರೆದಿರುವುದು. ಶ್ರೀಮತಿ ಸೋನಿಯಾ ಗಾಂಧಿಯವರು ಒಬ್ಬ ವಿರೋಧ ಪಕ್ಷದ ನಾಯಕಿಯಾಗಿ ಈ ಸಹಕಾರಿ ಕಾಯಿದೆ ಹೇಗೆ ಇರಬೇಕೆಂದು ಪತ್ರ ಬರೆದಿದ್ದಾರೆ. ತಾವು ಹೇಳಬೇಡಿ ಎಂದು ಹೇಳುತ್ತೀರಿ, ಅದನ್ನು ಬಿಡುತ್ತೇನೆ.

ಅಧ್ಯಕ್ಷರು: ನಮ್ಮ ಸಭೆಗೆ ಏನು ಸಂಬಂಧಪಟ್ಟಿದೆ ಅದನ್ನು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮಗೆ ನಮ್ಮ ಪಾರ್ಟಿ ಬಗ್ಗೆ ಎಷ್ಟೊಂದು ನಂಬಿಕೆ ಇದೆ, ನೀವು ಇಲ್ಲಿಗೆ ಬಂದುಬಿಡಿ.

ಶ್ರೀ ಎಸ್.ಎಸ್.ಪಾಟೀಲ್: ನಮಗೆ ಇದೆ, ಆದರೆ ನಿಮಗೆ ಇಲ್ಲ ಆ ನಂಬಿಕೆ. ನಿಮ್ಮ ನಾಯಕಿ ಪ್ರಾಮಾಣಿಕವಾಗಿ ಚುನಾವಣೆ ಪ್ರಣಾಳಿಕೆಯಲ್ಲಿ ಹಾಕಿದ್ದಾರೆ ಆ ರೀತಿಯಾಗಿ ಎಲ್ಲರಿಗೂ ಬರೆದಿದ್ದಾರೆ. ಆದರಲ್ಲಿ ಯಾವ ರೀತಿ ಇರಬೇಕೆಂದು ಹೇಳುತ್ತಾರೆ. ಸಹಕಾರಿ ತತ್ವದ ಅಡಿಯಲ್ಲಿ ಇವತ್ತು ನಿಮಗೆ ಬರೆಯುವುದಲ್ಲದೆ ಪ್ರಧಾನಮಂತ್ರಿಗಳಿಗೆ ಕೂಡ ಈ ರೀತಿಯಾಗಿ ಮಾಡಬೇಕೆಂದು ಬರೆದಿದ್ದಾರೆ. ಅಲ್ಲದೆ ಈ ಕಾಯಿದೆಯನ್ನು ಈ ರೀತಿಯಾಗಿ ತಿದ್ದುಪಡಿ ಮಾಡಬೇಕೆಂದು ಬರೆದಿದ್ದಾರೆ. ನಮ್ಮ ಮಾನ್ಯ ಸಚಿವರಿಗೆ ನೆನಪು ಮಾಡುತ್ತೇನೆ. ತಾವು 2000-2001ನೇ ಸಾಲಿನ ಆಯವ್ಯಯದಲ್ಲಿ ತಾವೇ ಹೇಳಿದ್ದೀರಿ. ಅದನ್ನು ಮಾನ್ಯ ರಾಜ್ಯಪಾಲರಿಂದ ತಾವು ಹೇಳಿಸಿದಿರಿ. ಇದರಲ್ಲಿ ಏನು ಹೇಳಿದ್ದಾರೆಂದರೆ ಸಹಕಾರಿ ಸಂಸ್ಥೆಗಳು ಸ್ವಾಯತ್ತವಾಗಿ ಸರ್ಕಾರದ ಹಸ್ತದಿಂದ ಮುಕ್ತವಾಗಿರತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ನಾವು ಒಂದು ಸರ್ಕಾರದ ನೀತಿಯನ್ನು ಜಾರಿಗೆ ತಂದಿದ್ದೇವೆ, ಅದನ್ನು ನಮ್ಮ ಸರ್ಕಾರ ತಂದಿರಬಹುದು, ಇವತ್ತು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಈ ಸಹಕಾರದ ನೀತಿ ಇಡೀ ರಾಷ್ಟ್ರದಲ್ಲಿ ಯಾ ರಾಜ್ಯದಲ್ಲೂ ಇಲ್ಲ. ಕೇಂದ್ರಸರ್ಕಾರದವರು ನಮ್ಮ

ಸಹಕಾರ ನೀತಿಯನ್ನು ನೋಡಿ ಮಾಡಿದ್ದಾರೆ. ಅಂತರಾಷ್ಟ್ರೀಯ ಸಹಕಾರ ಸಂಸ್ಥೆ ಅದರ ಒಂದು ಮಾರ್ಗದರ್ಶಿ ಸೂತ್ರದ ಪ್ರಕಾರ ಅದನ್ನು ಕೇವಲ ನಾನು ಕುಳಿತುಕೊಂಡು ಮಾಡಿಲ್ಲ. ಈ ಸಹಕಾರಿ ನೀತಿಯನ್ನು ಜಾರಿ ಮಾಡುವಂತಹ ಸಂದರ್ಭದಲ್ಲಿ ಈ ಕಾಯಿದೆಯನ್ನು ನಾನು ತಿದ್ದುಪಡಿ ಮಾಡುವ ಮೊದಲು ಎಲ್ಲಾ ಹಿರಿಯ ಸಹಕಾರಿಗಳನ್ನು ರಾಷ್ಟ್ರದ ಮತ್ತು ರಾಜ್ಯದ ಹಿರಿಯ ಸಹಕಾರ ಮಂತ್ರಿಗಳನ್ನು ಕರೆದಿದ್ದೇನೆ. ಕೆಲವರು ಬಂದರು, ಕೆಲವರು ಬರಲಿಲ್ಲ. ಅವರೆಲ್ಲರ ಜೊತೆ ಚಿಂತನೆ ಮಾಡಿದ್ದೇನೆ. ಇಲ್ಲಿ ಒಂದು ಕೆ.ಹೆಚ್.ಪಾಟೀಲರು ಮೊದಲೇ ಒಂದು ವರದಿ ಇಟ್ಟಿದ್ದರು, ಅದು ಹಾಗೆ ಇತ್ತು ಅದನ್ನು ನಾನು ಬರುವುದಕ್ಕೆ ಮೊದಲೇ ಮಂಡಿಸಿದ್ದರು. ಅದನ್ನೂ ತರಿಸಿದೆ, ಮತ್ತು 2-3 ವರ್ಷದಿಂದ ಎಲ್ಲಾ ರಾಜ್ಯಗಳದ್ದು ತರಿಸಿದ್ದೇನೆ. ಅಲ್ಲದೆ ಬ್ರಹ್ಮ ಪ್ರಕಾಶ್ ವರದಿ ಆಧಾರದ ಮೇಲೆ ಇದು ಯಾವ ರೀತಿಯಾಗಿ ಇರಬೇಕು ಎನ್ನುವ ದೃಷ್ಟಿಯಿಂದ ಚಿಂತನೆ ಮಾಡಿ ಹಿರಿಯ ಸಹಕಾರಿಗಳನ್ನು, ನಿವೃತ್ತ ಅಧಿಕಾರಿಗಳನ್ನು ಕರೆದು ಈ ಒಂದು ಕಾಯಿದೆಯನ್ನು ತಿದ್ದುಪಡಿ ತಂದಿದ್ದೇನೆ. ಈ ದೃಷ್ಟಿಯಿಂದ ಇವತ್ತು ಇದರಲ್ಲಿ ಏನು ಹೇಳಿದ್ದಾರೆ ಎಂದು ಹೇಳುತ್ತೇನೆ. 2000-2001ನೇ ಆಯವ್ಯಯದಲ್ಲಿ ತಾವು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಬದ್ಧರಾಗಬೇಕಾಗುತ್ತದೆ. ''ರಾಜಕೀಯ ಪ್ರಜಾಪ್ರಭುತ್ವಕ್ಕೆ ಪಂಚಾಯತ್ ಸಂಸ್ಥೆಗಳು ಹೇಗಿವೆಯೋ ಹಾಗೆ ಆರ್ಥಿಕ ಪ್ರಜಾಪ್ರಭುತ್ವಕ್ಕೆ ಸಹಕಾರಿ ಸಂಸ್ಥೆಗಳಿವೆ. ನನ್ನ ಸರ್ಕಾರವು ಸಹಕಾರ ಸಂಸ್ಥೆಗಳ, ಜನತಾಂತ್ರಿಕವಾದ ಸ್ವಾಯತ್ತ ಹಾಗೂ ವೃತ್ತಿಪರ ಕಾರ್ಯನಿರ್ವಹಣೆಗೆ ಬದ್ಧವಾಗಿದೆ. ಆ ಪದ್ಧತಿಯನ್ನು ಬಿಂಬಿಸಲು ಅನುವಾಗುವಂತೆ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆಗೆ ಶೀಘ್ರದಲ್ಲೇ ತಿದ್ದುಪಡಿ ತರಲಾಗುವುದು'' ಅದಕ್ಕೆ ಹೌದು ಎಂದು ಒಪ್ಪಿಕೊಂಡು ಬಿಟ್ಟರೆ ಮುಗಿದು ಹೋಯಿತು. ಪಾರ್ಟಿಯಾಗಿ ಹೇಳುವ ಮಾತು ಬೇರೆ. ಆದರೆ ಇದರ ತತ್ವದ ಅಡಿಯಲ್ಲಿ ಇದೆ ಎಂದರೆ ಒಪ್ಪಿಕೊಂಡು ಬಿಡುತ್ತೇನೆ. ಆ ಮಾತು ಬೇರೆ. ಆ ದೃಷ್ಟಿಯಿಂದ ಇದು ಸಹಕಾರದ ನೀತಿ ಇದೆ, ಆ ನೀತಿ ತಕ್ಕಹಾಗೆ ಹೇಳಿದಿರಿ. ಆಮೇಲೆ ಅದನ್ನು ಹೇಳಬೇಕಾಗುತ್ತದೆ. ಕಾಂಗ್ರೆಸ್ ಪ್ರಣಾಳಿಕೆ ಒಳಗೆ ಶ್ರೀಮತಿ ಸೋನಿಯಾ ಗಾಂಧಿಯವರು ಏನು ಬರೆದಿದ್ದಾರೆ ಆ ತತ್ವದ ಆಧಾರದ ಮೇಲೆ ಹೇಳಿದ್ದೇನೆ. ಅದಕ್ಕೆ ಅವರು ಬದ್ಧರಾಗಿದ್ದಾರೆ. ಇವತ್ತೂ ಕೂಡ ರಾಷ್ಟ್ರ ಮಟ್ಟದಲ್ಲಿ ಒಂದು ಸಹಕಾರಿ ಕಾಯಿದೆಯನ್ನು ಮಾಡಿ ಕಳುಹಿಸುವಂತಹ ಸ್ಥಿತಿಯಲ್ಲಿ ಇವತ್ತು ನಾನು ಕೇಳಿದ್ದೇನೆ. ಇಡೀ ರಾಷ್ಟ್ರದಲ್ಲಿ ನಮ್ಮ ನಮ್ಮ ಸರ್ಕಾರಗಳು ಯಾವ ರೀತಿಯಾಗಿ ನಡೆಯುತ್ತವೆ ಅದಕ್ಕೆ ಸಹಕಾರಿ ಕಾಯಿದೆಯನ್ನು ಒಂದು ಮಾದರಿ ಕಾಯಿದೆಯನ್ನಾಗಿ ಮಾಡಿ ಕಳುಹಿಸುವಂತಹ ಪರಿಸ್ಥಿತಿಯನ್ನು ಕೂಡ ಶ್ರೀಮತಿ ಸೋನಿಯಾ ಗಾಂಧಿಯವರು ಮಾಡುತ್ತಿದ್ದಾರೆ. ಅದನ್ನು ಕೇಳಿದ್ದೇನೆ, ನಾನು ಅದನ್ನು ಸ್ವಾಗತ ಮಾಡುತ್ತಿದ್ದೇನೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ಇಲ್ಲಿ ನಮ್ಮ ಸಹಕಾರ ನೀತಿಯಲ್ಲಿ ರಾಜ್ಯ ಸರ್ಕಾರವು ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ ನಿರ್ಣಯ ಕೈಗೊಳ್ಳುವಿಕೆ ಮತ್ತು ಅವುಗಳ ಆಡಳಿತ ವರ್ಗಗಳ ಮೇಲೆ ಸಾಧಿಸುವ ಹಿಡಿತವಲ್ಲದೆ ಈ ವಲಯಕ್ಕೆ ಅತ್ಯಧಿಕ ಮತ್ತು ನಿಯಂತ್ರಣಾತ್ಮಕ ಶಾಸನ ಕ್ರಮಗಳನ್ನು ವಿಧಿಸಿರುವುದು ಕೆಳಕಂಡ ಪರಿಸ್ಥಿತಿ ನಿರ್ಮಾಣಕ್ಕೆ ಎಡೆ ಮಾಡಿಕೊಟ್ಟಿದೆ. ನೋಡಿ ಇವತ್ತು ನಾವು ಹಿಡಿತ ಹಿಡಿದುಕೊಂಡು ಬಂದೆವು, ಅಲ್ಲಿ ಕಡಿಮೆ

ಸದಸ್ಯರು ಪಾಲ್ಗೊಳ್ಳುವುದರಿಂದ ಸದಸ್ಯರ ಗುಣಮಟ್ಟದಲ್ಲಿ ಇಳಿತ. ಸಹಕಾರ ಸಂಘಗಳು ಸರ್ಕಾರದ ಏಜೆನ್ಸಿ ಎಂಬ ಭಾವನೆಯಿಂದ ಸಹಕಾರ ಸಂಘಗಳಲ್ಲಿ ಉತ್ಸಾಹದ ಕೊರತೆ. ಅಧಿಕಾರಶಾಹಿ ಆಡಳಿತ ವ್ಯವಸ್ಥೆ ಹಾವಳಿಯಿಂದಾಗಿ ಸಾಮಾನ್ಯವಾಗಿ ಅಗತ್ಯತೆಗಳನ್ನು ಪೂರೈಸುವ ಸಲುವಾಗಿ ಸ್ವತಃ ತಾವೇ ಸಂಘ ರೂಪಿಸಿಕೊಳ್ಳುವುದಕ್ಕೆ ಪ್ರೋತ್ಸಾಹ ಇಲ್ಲದೆ ಇರುವುದು. ಇನ್ನು ಅನೇಕ ವಿಚಾರಗಳನ್ನು ಹೇಳುವುದು ಇದೆ. ಅದನ್ನು ಓದುವುದಕ್ಕೆ ಹೋದರೆ ಸಮಯವಾಗುತ್ತದೆ. ಈ ರೀತಿ ಇರುವುದರಿಂದ ನಾವು ಅದಕ್ಕೆ ಅನುಗುಣವಾಗಿ ನಮ್ಮ ಅಂತರ್‌ರಾಷ್ಟ್ರೀಯ ಸಹಕಾರಿ ತತ್ವದ ಅಡಿಯಲ್ಲಿ ಈ ಸಹಕಾರ ನೀತಿಯನ್ನು ತಂದಿದ್ದೇವೆ. ಅದೂ ಕೂಡ ಜಾರಿಯಲ್ಲಿದೆ. ಆ ಒಂದು ದೃಷ್ಟಿಯಿಂದ ನಮ್ಮ ಸಹಕಾರ ಸಚಿವರು ತಂದಂತಹ ಈ ತಿದ್ದುಪಡಿಗಳು. ಇದರ ಬಗ್ಗೆ ಒಂದೊಂದೇ ಹೇಳುತ್ತಾ ಹೋದರೆ ಸಮಯ ಬಹಳವಾಗುತ್ತದೆ. ನಾನು ಹೇಳುವುದಕ್ಕೆ ತಾವು ಅವಕಾಶ ಕೊಟ್ಟರೆ ಇದನ್ನು ನಾಳೆಗೆ ಮುಂದುವರೆಸಬೇಕಾಗುತ್ತದೆ. ತಾವು ಅಧಿವೇಶನವನ್ನು ಮುಂದುವರೆಸಿ ಅಡ್ಡಿ ಇಲ್ಲ.

ಮಾನ್ಯ ಅಧ್ಯಕ್ಷರೇ, ನಮಗೂ ಅವರಿಗೆ ನಿಮ್ಮ ಚೇಂಬರ್‌ನಲ್ಲಿ ಆದಂತಹ ವಿಚಾರದ ಬಗ್ಗೆ ಹೇಳುತ್ತೇನೆ, ಇಲ್ಲಿ ನಾವು ಪಕ್ಕಕ್ಕೆ ಸರಿಯುತ್ತೇವೆ, ಅವರಿಗೆ ಆನೆ ಗಾತ್ರದ ಬಲವಿದೆ, ನಾವು ಆಕಾಶಕ್ಕೆ ಬೂದಿ ಎರಚಿದಂತಾಗುತ್ತದೆ ನಮ್ಮ ಪರಿಸ್ಥಿತಿ, ಅದು ಆ ರೀತಿಯಾಗಬಾರದೆಂದು ನಾವು ತಮ್ಮ ಚೇಂಬರ್‌ಗೆ ಬಂದು ಅವರೊಡನೆ ಒಂದು ಇತ್ಯರ್ಥಕ್ಕೆ ಬಂದಿದ್ದೇವೆ, ನಾನು ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇಲ್ಲಿ ಮೂಲತಹ ಇರುವಂಥಾದ್ದು ಅವರು ಸೆಷನ್ 121 ಬೇಕೆಂದು ಹಠ ಹಿಡಿದಿದ್ದಾರೆ. ತಾವು ಅದನ್ನು ತೆಗೆದುಕೊಂಡರೆ ಏನಾಗುವುದೆಂಬ ಕಲ್ಪನೆಯನ್ನು ನಾನು ತಮಗೆ ಕೊಡುತ್ತೇನೆ. ನಿಮಗೆ ತೆಗೆದುಕೊಂಡರೆ ಮುಂದೆ ನಿಮ್ಮ ಪರಿಸ್ಥಿತಿಯೂ ತಪ್ಪು ಮಾಡಿದೆವೋ ಎಂದು ಅನ್ನಿಸುತ್ತದೆ. ನಾನು ಅದನ್ನು ನಿಮಗೆ ಹೇಳುತ್ತೇನೆ. ಈಗ ಆ ಕಾಯಿದೆಯ ಬಗ್ಗೆ ಓದಿ ಹೇಳುತ್ತೇನೆ. ಈ ಸದನ ಸಾರ್ವಭೌಮತ್ವವಾದಂತಹದ್ದು. ಇಲ್ಲಿ ಮಾಡಿದಂತಹ ಕಾಯಿದೆಯನ್ನು ಹೇಳುತ್ತೇನೆ.

''ಸಂಘಗಳಿಗೆ ವಿನಾಯಿತಿ ನೀಡುವ ಅಧಿಕಾರ''

ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಪ್ರಕಟಿಸುವ ಮೂಲಕ ಯಾವುದೇ ಸಹಕಾರ ಸಂಘವನ್ನು ಅಥವಾ ಸಹಕಾರ ಸಂಘಗಳ ಯಾವುದೇ ವರ್ಗವನ್ನು ಈ ಅಧಿನಿಯಮದ ಯಾವುದೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು ಅಥವಾ ಅಂಥ ಉಪಬಂಧಗಳು ಅಂಥ ಸಂಘಕ್ಕೆ ಅಥವಾ ಸಂಘಗಳ ವರ್ಗಕ್ಕೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

ಈ ಸದನದಲ್ಲಿ ನಾವು ಸರ್ವಾನುಮತದಿಂದ ಮಾಡಿದಂತಹ ಕಾಯಿದೆಯನ್ನು ಒಬ್ಬ

ಮಂತ್ರಿಯವರು ಹಾಗೂ ಒಬ್ಬ ಕಾರ್ಯದರ್ಶಿ ಕೂಡಿ ಇದನ್ನು ತಿದ್ದುಪಡಿ ಮಾಡಿ ಈ ಸಂಘಕ್ಕೆ ಈ ಕಾಯಿದೆ ಲಾಗುವಾಗುವುದಿಲ್ಲವೆಂದು ಮಾಡಬಹುದು. ಈ ಕಾಯಿದೆಯಲ್ಲಿ ಎಷ್ಟು ಕೆಟ್ಟದಾಗಿದೆ ಎಂಬುದನ್ನು ನಾನು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ನೋಡಿದೆ. ಆಗ ಆರು ವರ್ಷಕ್ಕಿಂತ ಹೆಚ್ಚಿಗೆ ಆಫೀಸ್‌ಗಳಲ್ಲಿ ಅಧಿಕಾರಕ್ಕೆ ಇರುವುದಕ್ಕೆ ಆಗುತ್ತಾ ಇರಲಿಲ್ಲ. ಇಲ್ಲಿ ಕೆಲವೇ ವ್ಯಕ್ತಿಗಳಿಗೆ ಈ ಕಾಯಿದೆಯನ್ನು ಉಪಯೋಗ ಮಾಡಿ ಸುಮಾರು 15-20 ವರ್ಷಗಳ ಕಾಲ ಅವರೇ ಅಧ್ಯಕ್ಷರಾಗಿದ್ದಾರೆ. ಇದು ಇಂತಹ ಕೆಟ್ಟ ಕಾಯಿದೆಯಾಗಿದೆ, ಇದನ್ನು ಒಬ್ಬ ಮಂತ್ರಿಯವರು ಮತ್ತು ಕಾರ್ಯದರ್ಶಿಯರು ಕೂಡಿ ಗೆಜೆಟ್ ನೋಟಿಫಿಕೇಷನ್ ಹೊರಡಿಸುವುದರ ಮೂಲಕ ಈ ಸಂಘಕ್ಕೆ ಈ ಕಾಯಿದೆ ಅನ್ವಯವಾಗತಕ್ಕದ್ದಲ್ಲವೆಂದು ಹೇಳಬಹುದು. ಇದು ಎಷ್ಟು ತಪ್ಪಾಗುತ್ತದೆಂಬುದನ್ನು ತಾವೇ ಹೇಳಿ, ಆದರೆ ದುರ್ದೈವದಿಂದ ಇದು ಏನಾಗಿದೆ ಎಂಬುದನ್ನು ಹೇಳುತ್ತೇನೆ, ಇದು ಸುಪ್ರೀಂ ಕೋರ್ಟ್‌ಗೆ ಹೋಗಿ ಆಫ್ ಹೆಲ್ಡ್ ಆಗಿದೆಯಂತೆ, ಈ ಕಾಯಿದೆಗೆ ಅಡ್ಡಿಯಿಲ್ಲವೆಂದು ಆಗಿದೆಯಂತೆ, ಅಲ್ಲಿ ಹೇಗೆ ವಾದ ಮಾಡಿದ್ದರೋ ಗೊತ್ತಿಲ್ಲ. ಸರಿಯಾಗಿ ನಾವು ವಾದ ಮಾಡಿದರೆ ಈ ಕಾಯಿದೆ ಹೋಗುತ್ತದೆ. ನಾನು ಉದಾಹರಣೆಗೆ ಒಂದು ಕಾಯಿದೆ ಮಾಡಿದಂಥಾದ್ದನ್ನು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರಾದ ಶಿವಕುಮಾರ್‌ರವರಿಗೂ ಗೊತ್ತಿದೆ, ಶೇ.5ರಷ್ಟು ಸಹಕಾರ ಕಲ್ಯಾಣ ನಿಧಿಗೆ ಕೊಡಬೇಕೆಂಬುದನ್ನು ಸೇರಿಸಿದ್ದೆವು. ಅದು ಕೆಳ ಕೋರ್ಟ್‌ನಲ್ಲಿ ಬಿದ್ದು ಹೋಯಿತು, ಮತ್ತೆ ಅಪೀಲು ಮಾಡಿದಾಗ ಅದು ಕೊಡಬಹುದೆಂದು ಆಗಿದೆ. ಶೇ.5ಕ್ಕೆ ಯಾರೂ ಹೋರಾಟ ಮಾಡಲಿಲ್ಲವೆಂದು ಕಾಣುತ್ತದೆ. ಆ ಕಾರಣದಿಂದ ಅದು ಹೋಗಿ ಬಿಟ್ಟಿದೆ. ಈ ರೀತಿಯಾಗಿ ನಾವು ಯಾವುದಾದರೂ ಕಾಯಿದೆ ಮಾಡಿದಾಗ ಯಾರಾದರೂ ಕೋರ್ಟ್‌ಗೆ ಹೋದರೆ ಅದು ಒಮ್ಮೊಮ್ಮೆ ಹೋಗುವಂತಹ ಸನ್ನಿವೇಶಗಳು ಇರುತ್ತವೆ. ನಾವು ಸಹಕಾರಿ ಕಲ್ಯಾಣಕ್ಕೆಂದು ಶೇ.5ರಷ್ಟು ಎಂದು ಮಾಡಿದೆವು, ಅದು ಬಿದ್ದು ಹೋಯಿತು, ಏಕೆ ಹೋಯಿತೆಂದರೆ ನಾವು ಕಡ್ಡಾಯವೆಂದು ಮಾಡಿದ್ದೆವು, ಅದು ತಪ್ಪು ಆಗುತ್ತದೆ. ಏಕೆಂದರೆ ಇದು ವಾಲಂಟರಿ ಆರ್ಗನೈಜೇಷನ್ ನಿಮಗೆ ಏನು ಅಧಿಕಾರವಿದೆ, ಇದನ್ನು ಕಡ್ಡಾಯವಾಗಿ ಕೊಡಬೇಕೆಂಬುದಕ್ಕೆ ಎಂಬ ಭಾವನೆ ಬಂದು ಇದು ಬಿದ್ದು ಹೋಯಿತು. ಈ ಕಾರಣದಿಂದ ಸೆಕ್ಷನ್ 121 ಏನಿದೆ ಇದು ಬಹಳ ಕೆಟ್ಟ ಕಾಯಿದೆ ಎಂದು ಹೇಳುತ್ತೇನೆ. ಇದು ಈ ಸದನದ ಗೌರವವನ್ನು ಕಾಪಾಡುವಂತಹ ಕಾಯಿದೆಯಲ್ಲ, ಆದರೂ ಈ ಕಾಯಿದೆಯನ್ನು ತರುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದಕ್ಕೆ ಇವರು ಮನಸ್ಸು ಬದಲಾವಣೆ ಮಾಡಿದರೆ ಒಳ್ಳೆಯದಾಗುತ್ತದೆ, ಮತ್ತೆ ಅವರಿಗೆ ಗೌರವ ಬರುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಉಳಿದಂತಹ ಸೆಕ್ಷನ್ 30 ಇದೂ ಸಹ ಕೆಟ್ಟ ಕಾಯಿದೆಯಾಗಿದೆ, ನಾನೂ ಸಹ ಇವನ್ನು ಉಪಯೋಗಿಸಿಕೊಂಡಿದ್ದೇನೆ, ಇಲ್ಲವೆಂದು ಹೇಳುವುದಿಲ್ಲ. ಹಾಗೆ ರಾಜಕೀಯ ಒತ್ತಡಗಳು ಬರುತ್ತವೆ. ಈಗ ಮಾನ್ಯ ಯಾವಗಲ್‌ರವರು ಆ ಕಡೆ ಹೋಗಿದ್ದಾರೆ, ಎಸ್.ಎಸ್.ಪಾಟೀಲ್‌ರವರೇ, ಇದನ್ನು ತೆಗೆಯಿರಿ ಎನ್ನುವುದು, ನಂತರ ರಿಜಿಸ್ಟ್ರಾರ್ ಕಡೆಯಿಂದ ಬರೆಸುವುದು, ನಂತರ ಆರ್ಡರ್ ಮಾಡುವುದು, ಇವು ಇಲ್ಲೇ ಇರುತ್ತವೆ. ಅವರು ಅಲ್ಲಿ ಹೋಗಿ ಚಾರ್ಜ್ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಆರ್.ಯಾವಗಲ್(ನರಗುಂದ): ಮಾನ್ಯ ಅಧ್ಯಕ್ಷರೇ, ನಾನು ತಾವು ಮಾಡಿದ್ದು ಕೆಟ್ಟದು ಎಂದು ಹೇಳುವುದಿಲ್ಲ, ಮಾಡಿದ್ದು ಒಳ್ಳೆಯ ಕಾಯಿದೆಯನ್ನು ಮಾಡಿದ್ದೀರಿ. ಅದರಲ್ಲಿ ಏನೂ ಎರಡು ಮಾತು ಇಲ್ಲ, ಆದರೆ ಬಂದ ಪ್ರಾರಂಭದಲ್ಲೇ ಮಾಡಿ ಅದಕ್ಕೆ ಆದರ್ಶವಾದಂತಹ ರೀತಿಯಲ್ಲಿ ನಡವಳಿಯನ್ನು ತೋರಿಸಿದ್ದಿದ್ದರೆ ಅದಕ್ಕೆ ಒಂದು ಬೆಲೆಯೂ ಬರುತ್ತಾ ಇತ್ತು. ಆದರೆ ತಾವು ಹೋಗುವಾಗ ಮಾಡಿ, ಎಲ್ಲರನ್ನು ಎಲ್ಲಾ ಕಡೆಗಳಲ್ಲೂ ಹಾಕಿ ಅನುಕೂಲಗಳನ್ನು ಮಾಡಿಬಿಟ್ಟು, ಈಗ ಅದನ್ನು ಮಾಡಬೇಡಿ ಎಂದು ಹೇಳಿದರೆ ಈಗ ಅದು ರಿವರ್ಸ್ ಆಗುವಂತಹ ಪರಿಸ್ಥಿತಿಯಾಗಿದೆ.

ಶ್ರೀ ಕೆ.ಬಿ.ಕೋಳಿವಾಡ್(ರಾಣಿಬೆನ್ನೂರು): ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್.ಎಸ್.ಪಾಟೀಲ್‌ರವರು ಸಹಕಾರ ತತ್ವ, ನೀತಿಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿ, ಸೆಕ್ಷನ್ 121 ಅನ್ನು ಬಿಲ್‌ನಿಂದ ತೆಗೆದುಹಾಕಬೇಕೆಂದು ಹೇಳುತ್ತಿದ್ದಾರೆ. ಇಲ್ಲಿ ಸೆಕ್ಷನ್ 121 ಅನ್ನು ಕೆಟ್ಟ ದೃಷ್ಟಿಯಿಂದಲೇ ಏಕೆ ನೋಡುತ್ತೀರಿ? ಯಾವುದೇ ಒಂದು ಸಹಕಾರಿ ಸಂಸ್ಥೆಯಲ್ಲಿ ಮಾಡಬಾರದ್ದನ್ನು ಮಾಡಿ ತಕ್ಷಣ ಇರತಕ್ಕಂಥ ರೂಲ್ಸ್ ಕೈಗೆ ಸಿಗದ ಹಾಗೆ ಪರಾರಿಯಾಗುವಂತಹ ಪರಿಸ್ಥಿತಿ ಬಂದಾಗ ತಕ್ಷಣ ಆ ಕಾನೂನನ್ನು ತಾತ್ಕಾಲಿಕವಾಗಿ ಸಸ್ಪೆಂಡ್ ಮಾಡಿ ಆ ಸಂಸ್ಥೆಯನ್ನು ಉಳಿಸತಕ್ಕಂಥ ಮತ್ತು ಅವ್ಯವಹಾರಗಳು ಆಗುವಂಥಾದ್ದನ್ನು ತಡೆಯುವಂಥಾದ್ದಕ್ಕೆ ಈ ಸೆಕ್ಷನ್ 121 ಅನ್ನು ಉಪಯೋಗಿಸಬಹುದಲ್ಲಾ, ಮತ್ತೆ ತಾವೂ ಸಹ ಐದು ವರ್ಷಗಳ ಕಾಲ ಸಹಕಾರಿ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಮಾನ್ಯ ಬಿ.ಆರ್.ಯಾವಗಲ್‌ರವರು ಹೇಳಿದ ಹಾಗೆ ಅಧಿಕಾರಕ್ಕೆ ಬಂದ ತಕ್ಷಣ ಈ ಎಲ್ಲಾ ಕಾನೂನುಗಳನ್ನು ತಂದು ಅದು ಕಾರ್ಯರೂಪಕ್ಕೆ ತಂದು ತೋರಿಸಿದ್ದರೆ ಅದು ನಿಮ್ಮ ಆದರ್ಶವನ್ನು ತೋರಿಸಿದ ಹಾಗೆ ಆಗುತ್ತಾ ಇತ್ತು. ಆದರೆ ಆ ಐದು ವರ್ಷಗಳ ಕಾಲ ಈ ಎಲ್ಲಾ ಪ್ರಾವಿಷನ್ ಅನ್ನು ಬಿಟ್ಟೂ ಬಿಡದ ಹಾಗೆ ಚಾಚೂ ತಪ್ಪದಂತೆ ಉಪಯೋಗಿಸಿಕೊಂಡು ಕೊನೆಗೆ ಅದಕ್ಕೆ ತಿದ್ದುಪಡಿಗಳನ್ನು ತಂದಿರಿ. ಅದನ್ನು ಅಷ್ಟಕ್ಕೆ ಬಿಡಲಿಲ್ಲ, ಆ ಸಮಯದಲ್ಲೇ ಎ.ಪಿ.ಎಂ.ಸಿ. ಚುನಾವಣೆಗಳು ಬಂತು, ಆಗ ಆಡಳಿತ ಪಕ್ಷದ ಸದಸ್ಯರುಗಳು ಎಲ್ಲಾ ಕಡೆಗಳಲ್ಲೂ ಸೋತು ಹೋದರು. ಇವರು ಸೋತ ಮೇಲೆ ತಾವು ಮಾಡಿದ ಕಾನೂನಿನ ವಿರುದ್ಧವಾಗಿ ಒಂದು ಆರ್ಡಿನೆನ್ಸ್ ಹೊರಡಿಸಿ, ನಾಮಿನೇಷನ್ ಮಾಡಿ ಎಲ್ಲಾ ಸಂಸ್ಥೆಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಕೊನೆಗೆ ಆ ಆರ್ಡಿನೆನ್ಸ್ ಜಾರಿಗೆ ಬರದ ಹಾಗೆ ಮಾಡಿ ಹೋದಿರಿ ಇದು ಹೌದೊ ಅಲ್ಲವೊ, ಎಂಬುದನ್ನು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಕಾಯಿದೆ ಸರಿಯೆಂದು ನಿಮ್ಮ ಪಕ್ಷದಲ್ಲಿ ಎಲ್ಲರೂ ಹೇಳುವುದಿಲ್ಲ, ಕೆಲವರು ಸರಿಯಲ್ಲವೆಂದು ಹೇಳುವವರು ಇರುತ್ತಾರೆ. ಆಗ ನಾನೂ ಒಬ್ಬ ಇದ್ದೆ, ಇಲ್ಲವೆಂದು ನಾನು ಹೇಳುತ್ತಾ ಇಲ್ಲ. ಈಗ ಅದನ್ನು ಅನುಭವಿಸುತ್ತಾರೆ, ಈಗ ನೀವು ಬಂದಿರಿ, ಅವರು ಅಷ್ಟನ್ನೂ ತೆಗೆದು ಹಾಕುತ್ತೀರಿ, ಎಲ್ಲರೂ ಹೋಗುತ್ತಾರೆ. ನೀವು ಈಗ ಬಂದು ಏನು ಮಾಡಿದ್ದೀರಿ? ನಿಮಗೆ ಬಹುಮತವಿದೆ

ಎಂದು 2/3 ಮೆಜಾರಿಟಿ ಎಂದು ಏನಿತ್ತು ಅದನ್ನು ತೆಗೆದಿರಿ. ಈಗ ಆ ಪಂಡಿತರು ಎಲ್ಲರೂ ಹೋದರು, ಆಗಲೇ ನಾನು ''ಅತ್ತೆಗೆ ಒಂದು ಕಾಲ ಸೊಸೆಗೆ ಒಂದು ಕಾಲ'' ಬರುತ್ತದೆಂದು ನಾನು ಅವತ್ತೆ ಹೇಳಿದ್ದೆ, ಇವತ್ತೂ ಸಹ ನಾನು ಆ ಮಾತನ್ನು ಹೇಳುತ್ತೇನೆ, ತಪ್ಪು ಆಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಇದಕ್ಕೆ ನನಗೆ ಗೊತ್ತಿಲ್ಲದೇ ಸುಗ್ರೀವಾಜ್ಞೆಯನ್ನು ಹೊರಡಿಸಿದರು, ನಾನು ಒಬ್ಬ ಮಂತ್ರಿಯಾಗಿ ರಾಜೀನಾಮೆಯನ್ನು ಕೊಟ್ಟಿದ್ದೆ, ಇಲ್ಲವೆಂದು ಹೇಳುವುದಿಲ್ಲ. ಇದು ಮಾನ್ಯ ಯಾವಗಲ್‌ರವರಿಗೂ ಗೊತ್ತಿದೆ, ಪರಿಸ್ಥಿತಿಗಳು, ಒತ್ತಡಗಳು ಆ ರೀತಿ ಆಗುತ್ತದೆ. ನಾನು ಬಂದಾಗ ಮೊದಲಿನಿಂದಲೂ ಇದನ್ನು ವಿರೋಧಿಸುತ್ತಿದ್ದೇನೆ, ನಾನು ಅಧಿಕಾರಕ್ಕೆ ಬಂದು ಒಂದು ವರ್ಷದವರೆಗೆ ಈ ಇಲಾಖೆಯಲ್ಲಿ ಎಲ್ಲೆಲ್ಲಿ ಏನೇನು ಇದೆ ಎಂಬುದನ್ನು ತಿಳಿದುಕೊಳ್ಳಲು ಹೋಗಿದ್ದೆ. ನಾನು ಇಲ್ಲವೆಂದು ಹೇಳುವುದಿಲ್ಲ, ನಾವು ಏನೂ ಹುಟ್ಟಿದಾಗಲೇ ಎಲ್ಲವನ್ನೂ ತಿಳಿದುಕೊಂಡಿರುವುದಿಲ್ಲ. ನಾನು ಹೊಸದಾಗಿ ಎಂ.ಎಲ್.ಎ. ಆಗಿ ಬಂದೆ, ಹಾಗೆ ಮಂತ್ರಿಯಾಗಿ ಬಂದು, ನನಗೆ ಇದರ ಅನುಭವಗಳು ಇರಬಹುದು, ಆದರೆ ಇದು ರಾಜಕೀಯ ಅನುಭವವಿದು. ಒಂದು ಇಲಾಖೆಯನ್ನು ನಡೆಸುವಂತಹ ಅನುಭವವೇ ಬೇರೆಯಾಗುತ್ತದೆ. ಈ ಸಹಕಾರಿ ಸಂಸ್ಥೆಗಳನ್ನು ನಡೆಸಿದಂತಹ ಅನುಭವವೇ ಬೇರೆಯಾಗುತ್ತದೆ. ಈಗ ಇಲಾಖೆಯ ಅನುಭವವನ್ನು ತೆಗೆದುಕೊಳ್ಳಲು ಒಂದು ವರ್ಷ ಹೋಗಿದ್ದೆ. ನಾನು ಎರಡು, ಮೂರು ಸಾರಿ ಮೀಟಿಂಗ್ ಮಾಡಿ, ಇದನ್ನು ಜಾರಿಗೆ ಕೊಡುವುದಕ್ಕೆ ಒಂದು ವರ್ಷ ಕಾಲ ಬೇಕಾಯಿತು. ಇವರ ತೊಂದರೆಯೂ ಮಾನ್ಯ ಸದಸ್ಯರಿಗೆ ಗೊತ್ತಿದೆ, ಇದರಲ್ಲಿ ಪಾರ್ಟಿಯವರದ್ದೇ ವಿರೋಧ, ಈ ವಿರೋಧವಿದ್ದರೂ ನಾನು ಏನು ಮಾಡುವುದಕ್ಕೆ ಸಾಧ್ಯವಾಗಿದೆಯೋ ಅದನ್ನು ಮಾಡಿದ್ದೇನೆ. ಇವತ್ತು ಏನಾಗುತ್ತದೆ ಎಂದರೆ ಆಡಳಿತ ಪಕ್ಷ ಬಂದ ಕೂಡಲೇ ಇದು ನಮ್ಮ ಕೈಗೆ ಬರಬೇಕೆಂಬ ಪರಿಸ್ಥಿತಿಯೂ ಸ್ವಾಭಾವಿಕವಾಗಿ ಬರುತ್ತದೆ. ನಾನು ಇದಕ್ಕೆ ಈ ಪಕ್ಷವೂ ಹೊರತು ಎಂದು ಹೇಳುವುದಿಲ್ಲ, ಆದರೆ ಇದನ್ನು ಒಂದು ತತ್ವದ ಹಿನ್ನಲೆಯಲ್ಲಿ ನೋಡಬೇಕಾಗುತ್ತದೆ.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್.ಎಸ್.ಪಾಟೀಲ್‌ರವರು ಸಂಸ್ಥೆಗಳಿಗೆ ತೊಂದರೆ ಮಾಡಿದರೆಂದು ನಾನು ಹೇಳುವುದಿಲ್ಲ. ದೊಡ್ಡ ದೊಡ್ಡ ಸಂಸ್ಥೆಗಳ ಬಗ್ಗೆ ತಮ್ಮದೇ ಆದಂತಹ ಕಾಳಜಿಯನ್ನು ಹೊಂದಿದ್ದರು. ಆದರೆ ಕೆಲವಾರು ವಿಷಯದಲ್ಲಿ ನಿರ್ಧಾರವೇನು ಇತ್ತು, ಅದನ್ನು ಮೀರಿ ಕೆಲವನ್ನು ಸೂಪರ್ ಸೆಷನ್ ಮಾಡುವುದು, ಕೆಲವರನ್ನು 121 ಕಾಯಿದೆ ಅಡಿಯಲ್ಲಿ ಮುಂದೆ ಹಾಕುವಂಥಾದ್ದು, ಹಿಂದಕ್ಕೆ ಹಾಕುವಂಥಾದ್ದು ನಾಮಿನೇಷನ್ ಮಾಡುವಂಥಾದ್ದು, ಡೇಟ್ ಅನ್ನು ಅಪ್ಲಿಕೇಷನ್ ಆಫ್ ದಿ ಆ್ಯಕ್ಟ್ ಅನ್ನು ಮುಂದಕ್ಕೆ ಹಾಕುವುದು, ಈ ರೀತಿ ನಿಮ್ಮಲ್ಲೇ ಇದ್ದು ಅದನ್ನು ನೀವು ಮಾಡದೇ ಇದ್ದರೂ ಸಾಕಾಗಿತ್ತು.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಇದು ರಾಜಕೀಯ ವ್ಯವಸ್ಥೆಯಲ್ಲಿ ಬರುತ್ತದೆ,

ಅದರಿಂದ ತೆಗೆದುಹಾಕಿದೆ. ಇಲ್ಲಿ ಸೆಕ್ಷನ್ 121ಕ್ಕೆ ವಿರೋಧವಿತ್ತು, ಎಲ್ಲದರಲ್ಲೂ ವಿರೋಧವಿತ್ತು, ಇದರಲ್ಲಿ ಎಷ್ಟು ಸಾಧ್ಯವಿದೆಯೋ ಅಷ್ಟನ್ನು ಮಾಡಿದೆ, ಇದೆಲ್ಲವನ್ನೂ ಒಟ್ಟಿಗೆ ಸರಿ ಮಾಡುವುದಕ್ಕಾಗುವುದಿಲ್ಲ. ಇವತ್ತು ಬಹಳ ಒಳ್ಳೆಯ ಸಹಕಾರಿಗಳಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ, 99 ಭಾಗ ಒಳ್ಳೆಯವರಿದ್ದು ಒಂದಿಬ್ಬರು ಕೆಟ್ಟವರು ಇರುತ್ತಾರೆ, ಯಾವುದೋ ಒಂದು ಸಂಸ್ಥೆ ಹಾಳಾಗಿದೆ ಎಂದು ತಿಳಿದುಕೊಂಡು ಎಲ್ಲವೂ ಕೂಡ ಹಾಗೆ ಎಂದು ಭಾವಿಸುವುದು ಸರಿಯಲ್ಲ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಹಾಸನದಲ್ಲಿ ನೀವು ಮಾಡಿದ ಮಹಿಳಾ ಬ್ಯಾಂಕ್ ಇನ್ನೂ ಕೂಡ ಅಸ್ತಿತ್ವಕ್ಕೆ ಬರಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಮಹಿಳಾ ಬ್ಯಾಂಕ್‌ನಲ್ಲಿ ಗಂಡಸರು ಸೇರಿಕೊಂಡಿದ್ದಾರೆ, ಮಹಿಳೆಯರೇ, ಇದ್ದಿದ್ದರೆ ಏನೂ ಆಗುತ್ತಿರಲಿಲ್ಲ, ಇಬ್ಬರು ಮಹಾನುಭಾವರು, ಅವರ ಹೆಸರನ್ನು ಹೇಳುವುದು ಬೇಡ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: 25 ಲಕ್ಷ ರೂ.ಗಳು ಶೇರುಗಳ ಭಿಕ್ಷೆ ಎತ್ತುಕೊಂಡು ನಿಮ್ಮ ಹತ್ತಿರ ಬಂದು ಬೇಡಿಕೊಂಡರಲ್ಲಾ, ಏಳು ವರ್ಷಗಳಾಯಿತು, ಏನೂ ಆಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಒಂದು ವೇಳೆ ನಾನು ಕಾಯಿದೆ ತಿದ್ದುಪಡಿ ಮಾಡಿರದಿದ್ದರೆ, ನಾಮಿನೇಷನ್ ಹಾಕಿ ನಮ್ಮ ಕೈಯಲ್ಲಿರುತ್ತಿತ್ತು. ಕಾಯಿದೆ ತಿದ್ದುಪಡಿ ಮಾಡಿ ಚುನಾವಣೆ ಮಾಡಿಕೊಳ್ಳಿ ಎಂದು ಹೇಳಿದ್ದಕ್ಕೆ ಅದು ನಡೆಯಿತು. ಮೊದಲು ಮೊದಲನೆ ಬೋರ್ಡ್ ನಾಮಿನೇಟ್ ಮಾಡಬೇಕೆಂದಿತ್ತು, ನಾಮಿನೇಷನ್ ಬೇಡವೆಂದು ತೆಗೆದು ಹಾಕಿದ್ದೆ, ಅದಕ್ಕೆ ಇವತ್ತು ಅವರಿಗೆ ಅಧಿಕಾರ ಬಂದಿದೆ, ಅದೇನೋ ಕಾರಣಕ್ಕೆ ನ್ಯಾಯಾಲಯಕ್ಕೆ ಹೋಗಿದೆ. ನೀವೆಲ್ಲಾ ಹೆಂಗಸರು ಒಂದಾಗಿ ಗಂಡಸರನ್ನು ಸೇರಿಸಿಕೊಳ್ಳಬೇಡಿ, ಸೇರಿಸಿಕೊಂಡರೆ ಆಗುವುದಿಲ್ಲವೆಂದು ಹೇಳಿದೆ. ನಾಮಿನೇಷನ್ ಮಾಡುವುದಿದ್ದರೆ ನಮಗಾಗಿ ಬಿಡುತ್ತಿತ್ತು. ನಾನು ನಾಮಿನೇಷನ್ ಮಾಡಿದ್ದೇನೆಯೇ? ಅದು ಬರುವುದಿಲ್ಲ ಚುನಾವಣೆ ಮಾಡಿ ಎಂದು ಹೇಳಿದೆ, ಅಲ್ಲಿ ಹೊಡೆದಾಟಗಳಾಯಿತು, ಕಾಯಿದೆ ಇದ್ದುದ್ದರಿಂದ ನಾವು ನಾಮಿನೇಷನ್ ಇಡಲಿಲ್ಲ, ಅದು ತಮಗೂ ಗೊತ್ತಿದೆ. ಬಹುಶಃ ಈಗ ತಂದಿರುವ ತಿದ್ದುಪಡಿಗಳಲ್ಲಿ ಒಪ್ಪತಕ್ಕಂಥವುಗಳು ಯಾವುವೂ ಇರುವುದಿಲ್ಲ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಉದಾಹರಣೆಗೆ, ಹೇಳುವುದಾದರೆ ನೀವು ಡೈರೆಕ್ಟರ್ ಅಥವಾ ರಿಜಿಸ್ಟ್ರಾರ್ ಒಬ್ಬರನ್ನು ನೇಮಕ ಮಾಡಿದ್ದಿರಿ, ಅದು ಬೇಡ ಮತ್ತೊಬ್ಬರನ್ನು ಡೈರೆಕ್ಟರ್ ಮಾಡಬೇಕೆಂಬ ಬಗ್ಗೆ ತಮಗೆ ಒತ್ತಡ ಬಂದಿದೆ, ಇಲ್ಲವೆಂದು ನಾನು ಹೇಳುವುದಿಲ್ಲ, ಈ ಬಗ್ಗೆ ನನಗೂ ಕೂಡ ಒತ್ತಡವನ್ನು ಮಾಡಿದ್ದರು. ನಮ್ಮ ಸಹಕಾರಿ ಇಲಾಖೆ ಎಂದರೆ ಒಂದೇ, ನಿರ್ದೇಶಕರೇ ಬೇರೆ, ರಿಜಿಸ್ಟ್ರಾರ್‌ರವರೇ ಬೇರೆ. ಈ ಮೊದಲು ಒಬ್ಬರೇ ಇದ್ದರು. ಅದನ್ನು ಏನೋ ಮಾಡುವುದಕ್ಕೆ ಹೋಗಿ ಬೇರೆ ಮಾಡಿದ್ದಾರೆ. ಅಲ್ಲಿ ಎರಡು ವಿಂಗ್‌ನಲ್ಲಿ ನಡೆಯುತ್ತದೆ,

ಒಬ್ಬ ರಿಜಿಸ್ಟಾರ್‌ರವರು ಕರೆದರೆ ಒಬ್ಬರು ಜ್ಯೂನಿಯರ್ ಆಡಿಟರ್‌ರವರು ಬರುವುದಿಲ್ಲ. ಆಮೇಲೆ ಇದನ್ನು ಬೇರೆ ಮಾಡಿದರು, ಒಬ್ಬ ನಿರ್ದೇಶಕರು ಹೋದರೆ ಕೋ-ಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರ್ ಅವರು ನನಗೇನು ಸಂಬಂಧ ಎಂದು ಅವರು ಹೋಗುವುದಿಲ್ಲ. ಇದನ್ನು ಇಬ್ಬರೂ ಸೇರಿಕೊಂಡು ಮಾಡಬೇಕಾಗುತ್ತದೆ. ಆದಕಾರಣ ಇದರ ಬಗ್ಗೆ ತಾವು ವಿಚಾರ ಮಾಡಬೇಕು, ಇದರಲ್ಲಿ ಒಬ್ಬರೇ ಹೆಡ್ ಆಗಿದ್ದರೆ ಅದು ಅವರ ಕಂಟ್ರೋಲ್‌ನಲ್ಲಿರುತ್ತದೆ. ಅವರಿಗೆ ಕೆಲಸ ಹೆಚ್ಚಾಗಿದೆ ಎಂದರೆ ಸೆಕ್ರೆಟರಿ ಇಲ್ಲವೇ, ನೀವು ಮಂತ್ರಿಗಳು ಎಷ್ಟೋ ಖಾತೆಯನ್ನು ನೋಡಿಕೊಳ್ಳುತ್ತೀರಲ್ಲಾ, ಅವರಿಗೆ ಮಾರ್ಕೆಟಿಂಗ್, ಶುಗರ್, ಟೆಕ್ಸ್‌ಟೈಲ್ಸ್, ಎಲ್ಲದಕ್ಕೂ ಒಬ್ಬರೇ ಸೆಕ್ರೆಟರಿಯವರು ಇದ್ದಾರೆ. ಆ ಕಾರಣದಿಂದ ಈ ಇಲಾಖೆ ಒಬ್ಬರ ಕಂಟ್ರೋಲ್‌ನಲ್ಲಿ ಇರಲಿ, ಇವು ಎರಡು ವಿಂಗ್‌ಗಳಾಗಿವೆ, ದಯವಿಟ್ಟು ಇದನ್ನು ತಾವು ಮಾಡುವುದಕ್ಕೆ ಹೋಗಬೇಡಿ. ಅದರ ಬಗ್ಗೆ ನಾವು ಹೆಚ್ಚು ಪ್ರೆಸ್ ಮಾಡುವುದಕ್ಕೆ ಹೋಗುವುದಿಲ್ಲ, ಇದರಲ್ಲಿ ನಮ್ಮ ಸರ್ಕಾರವಿದ್ದಾಗಲೂ ಸಹ ಮಾಡಿದ್ದೇವೆ, ನಾವು ಅಧಿಕಾರಿಗಳನ್ನು ಕಡಿಮೆ ಮಾಡಬೇಕೆಂದು ಹೇಳಿದ್ದೇವೆ, ತಾವು ಮತ್ತೊಬ್ಬ ಡೈರೆಕ್ಟರ್‌ನ್ನು ಕ್ರಿಯೇಟ್ ಮಾಡುತ್ತೀರಿ. ಅವರು ಏತಕ್ಕಾಗಿ ಬೇಕು? ಎಲ್ಲರಿಗೂ ಪಗಾರವನ್ನು ಕೊಡುತ್ತೇವೆ, ಇಡೀ ಇಲಾಖೆಯು ಒಬ್ಬ ರಿಜಿಸ್ಟ್ರಾರ್‌ರವರ ಕಂಟ್ರೋಲ್‌ನಲ್ಲಿಯೇ ಇರಬೇಕು. ಹೀಗಿದ್ದರೆ ಮಾತ್ರ ಈ ಇಲಾಖೆಯು ಚೆನ್ನಾಗಿ ನಡೆಯುತ್ತದೆ. ಇದನ್ನೆಲ್ಲಾ ನಾವು ಅನುಭವದ ಮೇಲೆಯೇ ಹೇಳುತ್ತಿದ್ದೇವೆ, ಅವತ್ತು ನಮಗೆ ಎರಡು ಪಾರ್ಟಿಗಳ ಶಾಸಕರುಗಳು ಹೇಳಿದರು, ಆಗ ತಾವೂ ಸಹ ಇದ್ದಿರಿ, ನಾನು ಆಗ ಅದನ್ನು ಒಪ್ಪಲಿಲ್ಲ. ರಿಜಿಸ್ಟ್ರಾರ್‌ರವರು ಮಾಡಲಿ ಅವರ ಅನುಭವವನ್ನು ನೋಡೋಣ, ಆ ದೃಷ್ಟಿಯಿಂದಾಗಿ ಮಾಡಿದ್ದೇವೆ. ಅದು ಇವತ್ತು ನಿಜವಾಗಿಯೂ ಚೆನ್ನಾಗಿ ನಡೆದುಕೊಂಡು ಬಂದಿದೆ, ಅದು ನಿಮಗೆ ಬಿಟ್ಟ ವಿಚಾರವಾಗಿದೆ. ಅದನ್ನು ನೀವು ಮಾಡುವುದಕ್ಕೆ ಹೋದರೆ ತಪ್ಪಾಗುತ್ತದೆ, ನನ್ನ ವೈಯಕ್ತಿಕ ಅಭಿಪ್ರಾಯವನ್ನು ತಮ್ಮ ಎದುರಿಗೆ ಇಡುತ್ತಿದ್ದೇನೆ. ಇನ್ನು 29(ಜೆ)ಯ ಬಗ್ಗೆ ಹೇಳುವುದಾದರೆ, ಈ ಸಹಕಾರಿ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿದೆ, ಅವರೆಲ್ಲರೂ ಕೂಡಿಕೊಂಡು ಸಂಘವನ್ನು ಮಾಡಿಕೊಂಡು ತಮ್ಮ ಆರ್ಥಿಕ ಅಭಿವೃದ್ಧಿಗೋಸ್ಕರ ಅದರೊಳಗೆ ಒಬ್ಬರು ಕಾರ್ಯದರ್ಶಿಗಳಾಗಬೇಕು, ಮತ್ತೊಬ್ಬರು ಛೇರ್ಮನ್ ಹಾಗೂ ಡೈರೆಕ್ಟರ್ ಅದು ಹಿಂದಿನಿಂದ ನಡೆದುಕೊಂಡು ಬಂದಿದೆ. ಮುಂದೆ ಸರ್ಕಾರದವರು ಸ್ವಲ್ಪ ಸಹಾಯವನ್ನು ಮಾಡಿದರು, ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ಅಲ್ಲಿಗೆ ಹಾಕಬೇಕೆಂದು ಹೇಳಿದೆವು. ಎಲ್ಲರೂ ಕೆಟ್ಟವರು ಇರುತ್ತಾರೆಂದು ನಾನು ಹೇಳುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಮಾರ್ಕೆಟಿಂಗ್ ಫೆಡರೇಷನ್‌ರವರು ಇಲ್ಲಿಯೇ ಇದ್ದಾರೆ, ಯಾರೋ ಒಬ್ಬರು ಎಂಡಿಯಾಗಿದ್ದರು, ಅಲ್ಲಿ ಎಂಡಿ ಯಾರಿರಬೇಕೆಂದರೆ, ಆ ಎಂಡಿಯ ಪಗಾರ ಅಲ್ಲಿಯ ಲಾಭದಲ್ಲಿ ತೆಗೆದುಕೊಳ್ಳಬೇಕು. ಅಲ್ಲಿಗೆ ಐಎಎಸ್ ಅಧಿಕಾರಿಗಳನ್ನು ಹಾಕುತ್ತೀರಿ, ಅವರು ಪ್ರಮೋಷನ್ ತೆಗೆದುಕೊಳ್ಳುವುದಕ್ಕೋಸ್ಕರ ಹಾಗೆ ಮಾಡಿಕೊಂಡಿದ್ದಾರೆ. ಅವರೆಲ್ಲರಿಗೂ ಸೀನಿಯರ್ ಸ್ಕೇಲ್ ಮಾಡಿಕೊಂಡಿದ್ದಾರೆ, ಅವರು ಅಲ್ಲಿಗೆ ಬರುವುದಕ್ಕೆ ತಯಾರಿಲ್ಲ. ಅಲ್ಲಿ ಏನು ಅನ್ಯಾಯವಾಗುತ್ತದೆ ಎಂಬುದರ ಬಗ್ಗೆ ಹೇಳುತ್ತೇನೆ, ಒಬ್ಬರು ಯಾರೋ ಹೆಂಗಸರು ಇದ್ದರು, ಸುಮಾರು 10 ಕೋಟಿ ರೂಪಾಯಿಗಳ

ಶಾರ್ಟ್‌ಲೋನ್ ಇತ್ತು, ಅದು ಇವರ್ಯಾರಿಗೂ ಸಹ ಗೊತ್ತಿಲ್ಲ. ಅದು ಸೆಂಟ್ರಲ್ ಗೌರ್ನಮೆಂಟ್‌ಗೆ ಹೋಯಿತು, ಅಲ್ಲಿಗೆ ರೊಕ್ಕ ಬರಲಿಲ್ಲ. ಅವರಿಗೆ ಏತಕ್ಕಾಗಿ ಈ ಚಿಂತೆ ಇದೆ? ಅವರು ವರ್ಗ ಮಾಡಿಸಿಕೊಂಡು ಹೋದರು, ಆ ಸಂಸ್ಥೆ ಹಾಳಾದರೆ ಅವರಿಗೇನು ಚಿಂತೆ? ಆ ಸಂಸ್ಥೆ ಮೇಲೆ ಬದುಕುವಂಥ ಒಬ್ಬ ಎಂಡಿ ಇದ್ದರೆ, ಆತನು ನಿಜವಾಗಿ ಅದರ ಹಿತವನ್ನು ಕಾಪಾಡುತ್ತಾನೆ. ಬೇರೆ ಯಾರಾದರೂ ಬಂದರೆ ಸುಮಾರು ಆರು ತಿಂಗಳೋ ಒಂದು ವರ್ಷವೋ ಇದ್ದು ಹೊರಟು ಹೋಗುತ್ತಾರೆ. ಅದು ಸರಿಯಾಗುವುದಿಲ್ಲವೆಂಬ ದೃಷ್ಟಿಯಿಂದ ನಾವು 29(ಜೆ)ಯನ್ನು ತಂದಿದ್ದೇವೆ. ಅದೇ ಸಂಸ್ಥೆಯಲ್ಲಿರತಕ್ಕಂತಹ, ಅದೇ ಜನರಲ್ ಬಾಡಿಯಲ್ಲಿರತಕ್ಕಂತಹ, ಅದೇ ಬೋರ್ಡ್ ಕಂಟ್ರೋಲ್‌ನಲ್ಲಿರುವಂತಹವರನ್ನು ಒಬ್ಬರು ಎಂಡಿ. ಇರಬೇಕೆನ್ನುವ ದೃಷ್ಟಿಯಿಂದಾಗಿ ನಾವು ಇದನ್ನು ತಂದಿದ್ದೇವೆ. ಮಾನ್ಯ ಸಹಕಾರ ಸಚಿವರೇ, ತಾವು ದಯಮಾಡಿ ಈ ಕಡೆ ಕೇಳಬೇಕು. ಇದು ನಿಮ್ಮ ನಜರ್‌ಗೆ ಬಂದಿದೆಯೇನೊ ಗೊತ್ತಿಲ್ಲ, ನನ್ನ ಹತ್ತಿರ ಬಂದಿರುವ ಬಗ್ಗೆ ನಾನು ತಮಗೆ ಹೇಳುತ್ತಿದ್ದೇನೆ. ಬಹುಶಃ ನಮ್ಮ ಆರೋಗ್ಯ ಸಚಿವರು ಸದನದಲ್ಲಿದ್ದಾರೆ, ಇದಕ್ಕಿಂತ ಮೊದಲು ಆ ಬಿಲ್‌ನ್ನು ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಈ ಸಿಗರೇಟು ನಿಷೇಧದ ಬಿಲ್ಲನ್ನು ಅದು ಮುಂದೆ ಇದೆ, ಅದನ್ನು ಇವತ್ತೇ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಇವತ್ತೇ ಪಾಸು ಮಾಡೋಣ. ಅದು ಬಹಳ ಒಳ್ಳೆಯ ಬಿಲ್ ಆಗಿರುತ್ತದೆ, ಇವತ್ತು ಅದರ ಬಗ್ಗೆ ಚರ್ಚೆ ಮಾಡಿ ಮುಗಿಸೋಣ. ಈ ರಾಜ್ಯದ ಸಹಕಾರಿ ಸಂಸ್ಥೆಯಲ್ಲಿ ಒಬ್ಬ ಎಂ.ಡಿ. ಬೋರ್ಡ್ ಮೀಟಿಂಗ್‌ನಲ್ಲಿ ಕುಳಿತುಕೊಂಡು ಸಿಗರೇಟನ್ನು ಸೇದುತ್ತಿದ್ದರು, ಇದು ನಡೆದಂತಹ ವಿಚಾರ. ಆ ಬೋರ್ಡ್‌ಗೆ, ಪ್ರೆಸಿಡೆಂಟ್‌ರವರಿಗೆ ಮರ್ಯಾದೆ ಇಲ್ಲವೇ? ಒಬ್ಬ ಐಎಎಸ್ ಆಫೀಸರ್‌ರವರು ಬೋರ್ಡ್ ಮೀಟಿಂಗ್‌ನಲ್ಲಿ ಸಿಗರೇಟನ್ನು ಸೇದುತ್ತಾ ಮೀಟಿಂಗ್ ಮಾಡುವುದು ಇದು ನಡೆಯತಕ್ಕಂತಹ ವ್ಯವಹಾರವಾಗಿದೆ. ಅವರಿಗೆ ಬೋರ್ಡಿನ ಅಧ್ಯಕ್ಷರ ಮೇಲೆ ನಂಬಿಕೆಯಿಲ್ಲ, ನಿಮ್ಮ ಎದುರಿಗೆ ಸೆಕ್ರೆಟರಿಯವರು ಬಂದು ಸಿಗರೇಟನ್ನು ಸೇದುತ್ತಾ ಕುಳಿತರೆ ಹೇಗಾಗುತ್ತದೆ? ಇದು ನಡೆದಂತಹ ವ್ಯವಸ್ಥೆಯಾಗಿದೆ. ಇದನ್ನೂ ಕೂಡ ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಈ ರೀತಿಯಾಗಿ ನಡೆಯಬಾರದೆಂಬ ದೃಷ್ಟಿಯಿಂದ ಆ ಪ್ರೆಸಿಡೆಂಟ್‌ರವರ ಕಂಟ್ರೋಲ್‌ನಲ್ಲಿರಬೇಕು, ಆ ದೃಷ್ಟಿಯಿಂದಾಗಿ ನಾವು ಇದನ್ನು ಮಾಡುತ್ತಿರುವುದು. ತಾವು ದಯವಿಟ್ಟು ಈ ಬಗ್ಗೆ ವಿಚಾರವನ್ನು ಮಾಡಬೇಕು, ಇದರ ಬಗ್ಗೆ ಹಲವು ವಿಚಾರಗಳಿವೆ, ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ನಾವು ಒಂದು ಹಂತಕ್ಕೆ ಬಂದಿದ್ದೇವೆ, ನಮಗೇನೋ ಸೆಕ್ಷನ್ 121ನ್ನು ತೆಗೆದುಕೊಳ್ಳಬೇಕೆಂದು ಬಹಳ ಆಸಕ್ತಿ ಇದೆ, ಅದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಒಂದು ಕಡ್ಡಿಪೆಟ್ಟಿಗೆಯಿದ್ದರೆ, ಕಡ್ಡಿ ಕೆರೆದು ಬೆಂಕಿ ಹಚ್ಚುವುದಕ್ಕೂ ಬರುತ್ತದೆ, ಮತ್ತೆ ಅದನ್ನು ತೆಗೆದುಕೊಂಡು ಮನೆಯ ದೀಪ ಹಚ್ಚುವುದಕ್ಕೂ ಸಹ ಆ ಕಡ್ಡಿ ಬೇಕಾಗುತ್ತದೆ. ಆದರೆ ಈ ಸಹಕಾರಿ ಸಂಸ್ಥೆಯಲ್ಲಿ ಕಡ್ಡಿಯನ್ನು ಕೆರೆದು ಬೆಂಕಿ ಹಚ್ಚುವುದು ಬಹಳವಾಗಿದೆ. ತಾವು ಆಡಳಿತ ಪಕ್ಷದಲ್ಲಿ ಇದ್ದೀರೆಂದು ಮಾತನಾಡುತ್ತೀರಿ, ನೀವು ಸಹ ವಿರೋಧಪಕ್ಷದಲ್ಲಿದ್ದುಕೊಂಡು ಮಾತನಾಡಿ. ಹೋದ ಸಾರಿ ತಾವು ಇರಲಿಲ್ಲ, ಇದ್ದಿದ್ದರೆ ತಾವು ಏನು ಮಾತನಾಡುತ್ತಿದ್ದೀರಿ ಎಂದು ನಾನು ಕೇಳುತ್ತಿದ್ದೆ. ಇದರ ಬಗ್ಗೆ ಮಾನ್ಯ ಸದಸ್ಯರಾದ

ಶ್ರೀ ಯಾವಗಲ್‌ರವರಿಗೂ ಸಹ ಗೊತ್ತಿದೆ, ಆದ್ದರಿಂದ ಕಡ್ಡಿಪೆಟ್ಟಿಗೆ ಏತಕ್ಕಾಗಿ ಉಪಯೋಗವಾಗುತ್ತದೆಂಬುದು ಈ ಕಡ್ಡಿಪೆಟ್ಟಿಗೆಗೆ, ಅದಲ್ಲಾ. ಪಾಪ ಹೆಣ್ಣುಮಕ್ಕಳ ಕೈಯಲ್ಲಿರುವ ಕಡ್ಡಿಪೆಟ್ಟಿಗೆಯು ಮನೆಯ ದೀಪ ಹಚ್ಚುವುದಕ್ಕೆ ಅಡಿಗೆ ಮಾಡುವುದಕ್ಕೆ ಉಪಯೋಗವಾಗುತ್ತದೆ. ಇಲ್ಲಿ ಆ ರೀತಿಯಾಗುವುದಿಲ್ಲ, ಇಲ್ಲಿ ಕಡ್ಡಿಯನ್ನು ಕೆರೆದು ಮನೆಗೆ ಬೆಂಕಿ ಹಚ್ಚುವುದಕ್ಕೆ ಉಪಯೋಗವಾಗುತ್ತದೆ. ಇದರ ಬಗ್ಗೆಯೂ ತಾವು ವಿಚಾರವನ್ನು ಮಾಡಬೇಕು, ಈ ಎಲ್ಲಾ ಹಿನ್ನೆಲೆಯಲ್ಲಿ ಹೇಳುವುದಾದರೆ, ತಾವು ಮಾತನಾಡುವಾಗ ಒಂದು ಹೊಂದಾಣಿಕೆ ಬಂತು, ಅದರ ಬಗ್ಗೆ ತಾವು ಹೇಳಿ ಎಂದು ಹೇಳಿದರೆ ನಾನು ಹೇಳಿಬಿಡುತ್ತೇನೆ. ತಾವು ಸೆಕ್ಷನ್ 121 ಇಟ್ಟುಕೊಂಡು, ಇದನ್ನು ತಾವು ವಿತ್‌ಡ್ರಾ ಮಾಡಿಕೊಂಡರೆ ಖಂಡಿತವಾಗಿ ಅದರ ಬಗ್ಗೆ ಚರ್ಚೆನೇ ಬೇಡ, ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಇದರ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ನಮಗೆ ಮನಸ್ಸಿಲ್ಲ, ತಮಗೆ ಇದರ ಬಗ್ಗೆ ಅನುಭವವಾಗಿದೆ. ಅವರು ಹೇಳಿದ ಹಾಗೆ ತಾವು ಇದನ್ನು ಉಪಯೋಗಿಸಿಕೊಳ್ಳಿ, ತಾವು ಇದನ್ನು ನಾನು ಎಂದೂ ಕೆಟ್ಟದ್ದಕ್ಕಾಗಿ ಉಪಯೋಗಿಸುವುದಿಲ್ಲವೆಂದು ಹೇಳಿದ್ದೀರಿ. ಅದು ಒಳ್ಳೆಯ ಮಾತು, ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಇದನ್ನು ಒಳ್ಳೆಯದಕ್ಕಾಗಿ ಉಪಯೋಗಿಸಿಕೊಳ್ಳುವುದಕ್ಕೂ ಬರುತ್ತದೆ, ನಾನು ಇಲ್ಲವೆಂದು ಹೇಳುತ್ತಿಲ್ಲ, ಅದಕ್ಕಾಗಿ ಈ ಸೆಕ್ಷನ್ ತಂದಿರುವುದು. ದುರ್ದೈವದಿಂದ ಈ ದೊಡ್ಡ ಮನುಷ್ಯ ಈ ರೀತಿಯಾಗಿ ಭಾಷಣ ಮಾಡುವವನು, ಇದನ್ನು ನಾನು ಮನಸ್ಸಿನ ವಿರುದ್ಧವಾಗಿ ಮಾಡಿದ್ದೇನೆ. ಆ ಕಾರಣದಿಂದಾಗಿ ನಾನು ಇದನ್ನು ತೆಗೆದುಹಾಕಿದ್ದೇನೆ, ಇದು ಇದ್ದರೆ ಒಳ್ಳೆಯದಕ್ಕಿಂತ ಕೆಟ್ಟದ್ದೇ ಹೆಚ್ಚಾಗುತ್ತದೆ ಎಂದು ತಿಳಿದುಕೊಂಡು ಮಾಡಿದ್ದೇನೆ. ಕೆಲವು ಸಹಕಾರಿ ಸಂಘಗಳು ಮೀರಿ ನಡೆಯುತ್ತವೆ, ಅದಕ್ಕಾಗಿ ಬೇರೆ ಬೇರೆ ಸೆಕ್ಷನ್‌ಗಳಿವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಬೇರೆ ಕಾಯಿದೆಗಳಿವೆ. ಆದರಿಂದಾಗಿ ಅವರನ್ನು ಹಿಡಿಯಬಹುದು, ಇದನ್ನು ತಾವು ಇಟ್ಟುಕೊಂಡು, ಬೇರೆಯದನ್ನು ವಿತ್‌ಡ್ರಾ ಮಾಡಿಕೊಂಡರೆ ಖಂಡಿತವಾಗಿ ನಾವು ಸರ್ವಾನುಮತದಿಂದ ಒಪ್ಪಿಕೊಳ್ಳುತ್ತೇವೆ, ತಾವು ಆ ರೀತಿಯಾಗಿ ಮಾಡುತ್ತೇವೆಂದು ಹೇಳುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಲವಾರು ಪ್ರಮುಖ ತಿದ್ದುಪಡಿಗಳನ್ನು ಕೈಬಿಡುವಂಥ ಇಂಗಿತವನ್ನು ಸನ್ಮಾನ್ಯ ಸಹಕಾರ ಸಚಿವರು ವ್ಯಕ್ತಪಡಿಸಿದ್ದಾರೆ. ಅವರ ಸಹಕಾರಕ್ಕೆ ನಮ್ಮ ಕೃತಜ್ಞತೆಗಳು ಈ ವಿಧೇಯಕದಲ್ಲಿ ಸೆಕ್ಷನ್ 121 ಬಹಳ ಡೇಂಜರಸ್ ಸೆಕ್ಷನ್ ಆಗಿರುತ್ತದೆ. ಇದರ ಸದುಪಯೋಗಕ್ಕಿಂತ ದುರುಪಯೋಗವಾಗುವಂಥಾದ್ದೆ ಜಾಸ್ತಿ ಹಲವಾರು ಸಂದರ್ಭಗಳಲ್ಲಿ ಕೆಲವು ಸಂಘಗಳು ಇತರೆ ಸಂಘಗಳಿಗಿಂತ ಹೆಚ್ಚು ಸ್ಥಾನಮಾನ ಪಡೆಯುವುದರಿಂದ ಎಲ್ಲರೂ ಸಮಾನರೆಂದು ಹೇಳುವಂಥ ಮೂಲಭೂತವಾದಂಥ ಪ್ರಜಾತಂತ್ರ ವ್ಯವಸ್ಥೆಗೆ ಕುಂದು ಬರುವಂಥ ಸಂಗತಿಗಳಾಗುತ್ತವೆ. ಬಹುಶಃ ಸೆಕ್ಷನ್ 121ನ್ನು ಪುನಃ ನಾನು ಓದಬೇಕೆನ್ನುವಂಥ ಅವಶ್ಯಕತೆಯಿಲ್ಲವೆಂದು ಭಾವಿಸಿದ್ದೇನೆ. ಎರಡು ವರ್ಷಗಳ ಹಿಂದೆ ಸದರಿ ಸೆಕ್ಷನ್‌ನನ್ನು ಹಿಂತೆಗೆದುಕೊಂಡಿದ್ದೆವು. ಆ

ಸೆಕ್ಷನ್‌ನ್ನು ಇಟ್ಟುಕೊಂಡು ಸಾಕಷ್ಟು ಭಾಗದಲ್ಲಿ ಭಾರೀ ದುರುಪಯೋಗಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಈ ಒಂದು ಹಿನ್ನೆಲೆಯಲ್ಲಿ ಕೆಲವು ಸೆಕ್ಷನ್‌ಗಳನ್ನು ಕೈಬಿಟ್ಟಿರುವುದರ ಜೊತೆಗೆ ಇನ್ನಷ್ಟು ದೊಡ್ಡ ಮನಸ್ಸು ಮಾಡಿದರೆ ಪ್ರಾಯಶಃ ಈಗಿರುವಂಥ ಕಾನೂನಿನಲ್ಲಿ ಸಹಕಾರಿ ಸಂಸ್ಥೆಗಳ ಪೂರ್ತಿ ವ್ಯವಹಾರಗಳನ್ನು ಅತ್ಯಂತ ಯಶಸ್ವಿಯಾಗಿ ಮಾಡಲಿಕ್ಕೆ ಸಾಧ್ಯವಿದೆ. ಆದಕಾರಣ ಸದರಿ 121 ಸೆಕ್ಷನ್‌ನ್ನೂ ಕೂಡ ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಸೆಕ್ಷನ್ 126(ಎ) ಇದನ್ನೂ ಸಹ ತಾವು ಉಳಿಸಿಕೊಂಡಿದ್ದೀರಿ ಎಂದು ತೋರುತ್ತದೆ. ಈ ಸೆಕ್ಷನ್ ಕೂಡ ಕಾನೂನಿನ ರೂಪದಲ್ಲಿ ಬಂದರೆ ಪ್ರಜಾತಂತ್ರದಲ್ಲಿನ ಇಡೀ ಆಡಳಿತ ವ್ಯವಸ್ಥೆಯನ್ನು ನಿರ್ನಾಮ ಮಾಡುತ್ತದೆ. ಇದರಿಂದ ಸಂಘದ ದಿನನಿತ್ಯದ ಕಾರ್ಯಕ್ರಮಗಳನ್ನು ಕುಂಠಿತಗೊಳಿಸುವಂಥ ಕೆಲಸ ಆಗುತ್ತದೆ. ಹಾಗೂ ಸಂಘದ ಅಸ್ತಿತ್ವವನ್ನೇ ಪ್ರಶ್ನೆ ಮಾಡುವಂಥಾದ್ದು ಆಗುತ್ತದೆ. ಸಂಘದಲ್ಲಿ ಯಾವುದಾದರೂ ರೆಸಲ್ಯೂಷನ್‌ನ್ನು ಮಾಡಿದರೆ ಅದನ್ನು ಸಂಘದ ರಿಜಿಸ್ಟ್ರಾರ್‌ರವರಿಗೆ ಕಳುಹಿಸಿಕೊಡಬೇಕಾಗುತ್ತದೆ. ಒಂದು ವೇಳೆ ಅದರಲ್ಲಿ ಏನಾದರೂ ವ್ಯತ್ಯಾಸಗಳು ಇವೆಯೆಂದಾದಲ್ಲಿ ಆ ರೆಸಲ್ಯೂಷನ್‌ನ್ನು ರಿಜಿಸ್ಟ್ರಾರ್‌ರವರು ರದ್ದು ಮಾಡುವಂಥ ಸಂಗತಿಗಳೂ ಕೂಡ ಆಗಬಹುದೆಂದು ಇದರ ಹಿನ್ನೆಲೆಯಲ್ಲಿ ನಮಗೆ ಕಂಡುಬರುತ್ತಿದೆ. ಆ ಕಾರಣದಿಂದ ಆ ಸಂಘದಲ್ಲಿರುವ ಸರ್ವಸದಸ್ಯರ ಸಾಮೂಹಿಕ ಬುದ್ಧಿವಂತಿಕೆಯನ್ನು ಈ ಅಧಿಕಾರಿಶಾಹಿಗಳು ಮೂಲೆಗುಂಪು ಮಾಡುವಂಥ ಎಲ್ಲಾ ಸಾಧ್ಯತೆಗಳಿವೆ. ಖಂಡಿತವಾಗಿ ಇದು ಆಗುವಂಥ ಎಲ್ಲಾ ಲಕ್ಷಣಗಳು ನನಗೆ ಕಂಡುಬರುತ್ತಿದೆ. ಸಂಘದ ನಿಯಮಾವಳಿಯನ್ನು ಒಪ್ಪಿಕೊಂಡಿರುವಂಥ ಅಧಿಕಾರಿ ವರ್ಗವೇ ಇದನ್ನೂ ಕೂಡ ಅವಗಣಿಸುವಂಥ ಸಾಧ್ಯತೆಗಳು ಇರುವ ಕಾರಣ ಇದೂ ಕೂಡ ದುರುಪಯೋಗವಾಗಬಹುದೆನ್ನುವ ಹಿನ್ನೆಲೆಯಲ್ಲಿ, ಒಟ್ಟಾರೆ ಸಹಕಾರಿ ತತ್ವಕ್ಕೆ ಈ ತಿದ್ದುಪಡಿಗಳು ಪೂರಕವಾಗಿಲ್ಲ. ಈ ದೃಷ್ಟಿಯಿಂದ ಇಂಥ ತಿದ್ದುಪಡಿಗಳನ್ನು ತಾವು ಕೈಬಿಡಬೇಕು. ಆ ರೀತಿ ಒಂದು ಸಹಕಾರವನ್ನು ಇಡೀ ಸಹಕಾರಿಗಳಿಗೆ ಮತ್ತು ಸಹಕಾರಿ ತತ್ವಕ್ಕೆ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್(ತಿಕೋಟಾ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಹಕಾರ ಸಚಿವರು ಬಹುತೇಕ ಹಿರಿಯ ಸದಸ್ಯರ ಜೊತೆ ಮಾತನಾಡಿ ಕೆಲವೊಂದು ಒಪ್ಪಂದಕ್ಕೆ ಬಂದಾಗ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ಮಾನ್ಯ ಸಚಿವರ ಗುರಿ ಮೂಲತಃ ಒಂದು ಸೆಕ್ಷನ್‌ನ ಮೇಲೆ ಇರುವುದು ತಮಗೆಲ್ಲಾ ಗೊತ್ತಿದೆ. ಆ ನಿಯಂತ್ರಣ ಅವರು ಹೇಗೆ ಬೇಕಾದರೂ ಮಾಡಬಹುದು. ಆದರೆ ಆ ಬ್ರಹ್ಮಾಸ್ತ್ರ ಪ್ರತಿಯೊಬ್ಬರ ಮೇಲೂ ಬಿಡತಕ್ಕಂಥವರು ನಾಳೆ ಆ ಚೇರ್‌ನಲ್ಲಿ ಬಂದರೆ ನಮ್ಮ ಗತಿ ಹದಗೆಟ್ಟು ಹೋಗುತ್ತದೆ. ಹೊಸ ಸಹಸ್ರಮಾನದಲ್ಲಿ ಸಹಕಾರಿ ಮಹಾ ಸಮ್ಮೇಳನವನ್ನು ತಾವು ಮಾಡಿದ್ದಾಗ- 'ಹೊಸ ಸಹಕಾರಿ ತತ್ವದ ನೀತಿಯನ್ನು ನಾನು ತರಬೇಕಾದರೆ ಸಾರ್ವಜನಿಕರ ಅಭಿಪ್ರಾಯಕ್ಕೆ ಬಿಟ್ಟು, ಅವರ ಒಮ್ಮತದ ಮೇರೆಗೆ ಹೊಸ ಸಹಕಾರಿ ನೀತಿಯನ್ನು ತರುತ್ತೇನೆಂದು ಮಾನ್ಯ ಸಹಕಾರ ಸಚಿವರಾದ ತಾವು ಪ್ರತಿಪಾದನೆ

ಮಾಡಿದ್ದೀರಿ, ಜೊತೆಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಪ್ರತಿಪಾದನೆ ಮಾಡಿದ್ದರು. ಆ ದೃಷ್ಟಿಯಲ್ಲಿ ಒಮ್ಮತದ ಅಭಿಪ್ರಾಯವನ್ನು ತರುವುದಕ್ಕೆ ಯಾರ ಜೊತೆಯಲ್ಲಿ ಕೂಡ ಒಂದು ಹೆಜ್ಜೆ ಸಹ ಮುಂದಿಟ್ಟಿಲ್ಲ. ಆದರೆ ನಾನು ಒಪ್ಪುತ್ತೇನೆ. ಅದನ್ನು ಮಾಡದಿದ್ದರೂ ಕೂಡ ಇವತ್ತು ಯಾವ ಸಹಕಾರಿ ಸಂಘಗಳಿಗೆ ಬಾಧಕಗಳಿವೆ ಅವುಗಳನ್ನು ಬಿಟ್ಟು ಮಾನ್ಯ ಎಸ್.ಎಸ್.ಪಾಟೀಲರು ಹೇಳಿದ ಹಾಗೆ ಸೆಕ್ಷನ್ 121ರ ಬಗ್ಗೆ ತಾವು ವಿಶೇಷ ಆಸಕ್ತಿವಹಿಸಿದ್ದೀರಿ. ನಾವು ಅದಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದಿಲ್ಲ. ಆದರೆ ಅದರ ಪ್ರಯೋಗ ಮುಂದೆ ಒಳ್ಳೆಯ ಸಂಘಗಳ ಮೇಲೂ ಆಗತಕ್ಕಂಥ ಅನಾಹುತ ಬರಬಹುದು. ಯಾವುದರ ಬಗ್ಗೆ ವಿಶೇಷವಾಗಿ ಮುತುವರ್ಜಿ ವಹಿಸಿ ಮಾಡಿದ್ದೀರಿ, ತಾವು ಒಬ್ಬರೇ ಅಲ್ಲ ಬಹಳಷ್ಟು ಹಿರಿಯ ಸದಸ್ಯರು ಅದನ್ನು ನೋಡತಕ್ಕಂಥ ದೃಷ್ಟಿಯಲ್ಲಿ ನೋಡಿದ್ದಾರೆ. ಒಟ್ಟಿನಲ್ಲಿ ಇದರ ಪ್ರಯೋಗ ಬೇರೆ ಒಳ್ಳೆಯ ಸಂಘಗಳ ಮೇಲೆ ಬೀಳಬಾರದೆಂದು ನಾನು ವಿನಂತಿಸಿಕೊಳ್ಳುತ್ತಾ, ಈ 126(ಎ) ಸೆಕ್ಷನ್ ಏನಿದೆ ಇದರ ಪ್ರಕಾರ ನಾಳೆ ಒಬ್ಬ ಸರ್ಕಾರಿ ಅಧಿಕಾರಿ ಡೀಸೆಂಟ್ ನೋಟ್ ಹಾಕಿದರೂ ಕೂಡ ಅದು ಒಂದು ಆರ್ಡರ್ ಆಗುತ್ತದೆಂದು ತಮಗೆಲ್ಲಾ ಗೊತ್ತಿದೆ. ಅಕಸ್ಮಾತ್ ನಾಳೆ ಅದು ರಿಜಿಸ್ಟ್ರಾರ್‌ಗೆ ಬಂದರೆ, ನಾವು ಸರ್ಕಾರದ ಆಕ್ಟ್, ರೂಲ್ಸ್‌ನ್ನು ಫಾಲೋ ಮಾಡದೆ ಏನಾದರೂ ಡೀವಿಯೇಟ್ ಮಾಡಿದ್ದರೆ ಅಧಿಕಾರಿಗಳು ಡೀಸೆಂಟ್ ನೋಟ್ ಹಾಕಬಹುದು, ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಯಾವುದೋ ಒಂದು ಕಾರಣಕ್ಕೆ ಏನಾದರೂ ಹಾಕಿದ್ದರೆ ಅದು ಪ್ರತಿನಿತ್ಯ ಆಡಳಿತದಲ್ಲಿ ಬಾಧಕವಾಗುತ್ತದೆ. ಅದರ ಬಗ್ಗೆ ಕೂಡ ತಾವು ವಿಶೇಷವಾದಂಥ ಆಸಕ್ತಿ ವಹಿಸಿದ್ದೀರಿ. ಈ ಸೆಕ್ಷನ್ ಬಗ್ಗೆ ಶ್ರೀ ಸದಾನಂದಗೌಡರು ಸಜೆಷನ್ ಮಾಡಿರುವುದನ್ನು ಬಿಟ್ಟರೆ ಖಂಡಿತವಾಗಿಯೂ ಬಹುತೇಕ ಎಲ್ಲದಕ್ಕೂ ನಾವು ಒಪ್ಪಿಕೊಳ್ಳುತ್ತೇವೆ. ಅದರಲ್ಲೇನೂ ನಮ್ಮಲ್ಲಿ ಭಿನ್ನಮತ ಇರುವುದಿಲ್ಲ. ಸಹಕಾರಿ ಇಲಾಖೆಗಳ ಮಹತ್ವತೆ ತಮಗೂ ಗೊತ್ತಿದೆ. ಏಕೆಂದರೆ ಮಹಾರಾಷ್ಟ್ರದಲ್ಲಿ ಸಹಕಾರಿ ಇಲಾಖೆಯನ್ನು ಅಲ್ಲಿಯ ಮುಖ್ಯಮಂತ್ರಿಗಳೇ ನಿರ್ವಹಿಸುತ್ತಿದ್ದಾರೆ. ಕರ್ನಾಟಕದಲ್ಲಿ ಕೂಡ ಅದಕ್ಕೆ ತನ್ನದೇ ಆದಂಥ ವಿಶೇಷ ಆದ್ಯತೆ ಬರುತ್ತಿದೆ. ಏಕೆಂದರೆ ಮೊದಲನೆಯದು ಗುಜರಾತ್, ಎರಡನೆಯದು ಮಹಾರಾಷ್ಟ್ರ, ಅದರ ನಂತರ ಕರ್ನಾಟಕದಲ್ಲಿರತಕ್ಕಂಥ ಸಹಕಾರಿ ಕ್ಷೇತ್ರದ ಚಳುವಳಿ ಇವತ್ತು ಮೂರು ರಾಜ್ಯಗಳಿಗೆ ಹೋಲಿಸಿದರೆ ಅದು ಕೂಡ ಒಳ್ಳೆಯ ರೀತಿಯಿಂದ ಸದೃಢ ಆಗುತ್ತಿದೆ. ಇಂಥ ಸಂದರ್ಭದಲ್ಲಿ ತಮ್ಮ ಕರುಣೆ ಈ ಇಲಾಖೆ ಮೇಲೆ ಇರಲಿ ಎಂದು ವಿನಂತಿಸಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುರುವನಹಳ್ಳಿ(ಕೋಲಾರ): ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ನಾವೆಲ್ಲಾ ಮಾನ್ಯ ಮಂತ್ರಿಗಳ ಹತ್ತಿರ ಮಾತನಾಡಿದಾಗ ಸೆಕ್ಷನ್ 121ನ್ನು ಬಿಟ್ಟು ಉಳಿದ ಯಾವುದನ್ನೂ ಸಹ ಮಾಡುವುದು ಬೇಡ ಎಂದು ಹೇಳಿದಿರಿ. ಅದು ಆದ ಮೇಲೆ ಕ್ಲಾಸ್ 1 ರಿಂದ 10ರ ವರೆಗೆ ತೆಗೆದುಕೊಂಡಿದ್ದೀರಿ. ಆ 10ರಲ್ಲಿ ನೀವು for the words "five co-operative years", ಅದನ್ನು

ಬಿಟ್ಟಿದ್ದೀರಿ. ನಾವು ಹೇಳಿದ್ದೇವೆಂದು ಅದನ್ನು ತಾವು ಬಿಟ್ಟಿದ್ದೀರಿ. ನಮ್ಮ ಶ್ರೀ ಎಸ್.ಎಸ್.ಪಾಟೀಲರು ಮಾತನಾಡುತ್ತಾ 32 ಜನ ಬೇಕಾಗುತ್ತದೆ ಎಂದು ಹೇಳಿದ್ದರು. ಅದನ್ನು ಈ ವಿಧೇಯಕದಲ್ಲಿ ತಂದಿದ್ದೀರಿ. ಆ ಮೇಲೆ ಕ್ಲಾಸ್ 11ನ್ನು ನೀವಿಟ್ಟುಕೊಂಡಿದ್ದೀರಿ. ಅದನ್ನು ಒಪ್ಪಬಹುದು. ಕ್ಲಾಸ್ 12 ಸೆಕ್ಷನ್ 29(ಸಿ):

"the society which nominated him as a representative withdraws his nomination;"

ಅದು ಇದ್ದೇ ಇದೆ. ಅದು ಆಗಿದೆ. ಕ್ಲಾಸ್ 13ನ್ನು ಒಮಿಟ್ ಮಾಡಿದ್ದೀರಿ ಬಹಳ ಸಂತೋಷ. ಕ್ಲಾಸ್ 14 ಸೆಕ್ಷನ್ 29(ಜೆ) ಇದನ್ನು ಇಟ್ಟುಕೊಂಡಿದ್ದೀರಿ.

"(i) subject to such rules as may be prescribed, in case of an assisted society, the Government or the Registrar shall have power to appoint and remove the Chief Executives;"

ಹಿಂದಿನ ಕಾಯಿದೆ ಪ್ರಕಾರ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗೆ ಏನು ಇತ್ತೆಂದರೆ, ಶೇರ್ ಇಲ್ಲದಿದ್ದರೆ ಏಕ್ಸ್‌ಟ್ರಾ ಮಾಡುವುದು ಇಲ್ಲವೆಂದರೆ ಇಲ್ಲ ಎಂದು, ಈ ಸೆಕ್ಷನ್ ಇರಲಿ ಪರವಾಗಿಲ್ಲ. ಇದರಿಂದ ಏನೂ ಅಂಥ ದೊಡ್ಡ ತೊಂದರೆ ಇಲ್ಲ. ಕ್ಲಾಸ್ 15 ಸೆಕ್ಷನ್ 30ನ್ನು ಇಟ್ಟುಕೊಂಡಿದ್ದೀರಿ.

"State Government or the Registrar, the words, figures, and letter "including the direction issued under Section 30B" shall be inserted.

(ii) for the words"The Registrar for the reasons to be recorded in writing extended the period of such appointment for a further period of six months"

ಆರು ತಿಂಗಳು ಜಾಸ್ತಿ ಮಾಡುವುದಕ್ಕೆ ಈ ಸೆಕ್ಷನ್‌ನ್ನು ಇಟ್ಟುಕೊಂಡಿದ್ದೀರಿ. ಕ್ಲಾಸ್ 16 ಸೆಕ್ಷನ್ 30(ಎ) ಇದನ್ನು ಒಮಿಟ್ ಮಾಡಿದ್ದೀರಿ. ಬಹಳ ಸಂತೋಷ. ಕ್ಲಾಸ್ 17 ಸೆಕ್ಷನ್ 31ರಲ್ಲಿ

"The Registrar may with the approval of the State Government and for the reasons to be recorded in writing extend the period of such appointment for a further period of six months........"

ಇಲ್ಲಿ 6 ತಿಂಗಳಿಗೆ ಎಕ್ಸ್‌ಟೆಂಡ್ ಮಾಡಿಕೊಂಡಿದ್ದೀರಿ. ಇದು ಇರುವುದರಿಂದ ಅಂಥ ಏನೂ ತೊಂದರೆ ಇಲ್ಲ. ಕ್ಲಾಸ್ 19ರಲ್ಲಿ

"(1) The Director of Co-operative Audit shall audit.......

ಇದರ ಬಗ್ಗೆ ಶ್ರೀ ಎಸ್.ಎಸ್.ಪಾಟೀಲರು ಹೇಳಿದ್ದಾರೆ. ಇದನ್ನು ಇನ್ನೊಂದು ಸಲ ರೀ-ಕನ್ಸಿಡರ್ ಮಾಡಿ. ಕ್ಲಾಜ್ 20ರಲ್ಲಿ ಸೆಕ್ಷನ್ 64 ಇರಬೇಕಾಗುತ್ತದೆ. ಏಕೆಂದರೆ 6 ತಿಂಗಳಲ್ಲಿ ತನಿಖೆ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಸಂದರ್ಭದಲ್ಲಿ ಇದಕ್ಕೆ ಹೆಚ್ಚಿಗೆ ಸಮಯ ಬೇಕಾಗುತ್ತದೆ. ಆದ್ದರಿಂದ ಸೆಕ್ಷನ್ 64ನ್ನು ನಾವು ಒಪ್ಪಿಕೊಳ್ಳುತ್ತೇವೆ. ಕ್ಲಾಸ್ 21ರಲ್ಲಿ ಸೆಕ್ಷನ್ 69;

"In section 69 of the principal Act, in sub-section(1), after the words "Committee of Management" the words "including Government nominees and ex-officio members" shall be inserted."

ಕಮಿಟಿಗೆ ಇದನ್ನು ಸೇರಿಸಬೇಕೆಂದು ಇದ್ದೀರಾ ಅಥವಾ ಇಲ್ಲವೇ ಎನ್ನುವುದನ್ನು ತಿಳಿಸಬೇಕು. ಹಾಗೆಯೇ ಇದನ್ನು ಸ್ವಲ್ಪ ರೀಕನ್ಸಿಡರ್ ಮಾಡಬೇಕಾಗುತ್ತದೆ. ಕ್ಲಾಸ್ 22ರಲ್ಲಿ ಅಪಿಲೇಟ್ ಅಥಾರಿಟಿ ಇರುವುದನ್ನು ನಾವು ಸಹ ಒಪ್ಪಿಕೊಳ್ಳುತ್ತೇವೆ. ಕ್ಲಾಸ್ 23 ಅನ್ನು ನೀವು ಬೇಕೆಂದು ಹೇಳಿದ್ದೀ, ನಾವು ಸಹ ಇದಕ್ಕೆ ಒಪ್ಪಿಕೊಂಡಿದ್ದೇವೆ. ಕ್ಲಾಸ್ 24ರಲ್ಲಿ ಸರ್ಟಿಫಿಕೇಟ್ ಆಫ್ ಪ್ರೋಸ್ಟಿಂಗ್ ಮಾಡುವುದರ ಬಗ್ಗೆ ಹೇಳಿದ್ದೀರಿ. ಹಾಗೆಯೇ ಸೆಕ್ಷನ್ 25 ಮತ್ತು 26ನ್ನು ಒಮಿಟ್ ಮಾಡಿದ್ದೀರಿ. ಸನ್ಮಾನ್ಯ ಎಸ್.ಎಸ್.ಪಾಟೀಲ್‌ರವರು ಹೇಳಿದ ಹಾಗೆ ಸರ್ಕಾರದ ಷೇರ್‍ಸ್ ಮತ್ತು ಸಾಲ ಇದ್ದಾಗ ಮಾತ್ರ ಇಟ್ಟುಕೊಳ್ಳಿ. ಹಾಗೆಯೇ ಸರ್ಕಾರದ ಗ್ಯಾರಂಟಿ ಇದ್ದಂಥ ಸಂದರ್ಭದಲ್ಲಿಯೂ ಕೂಡ ಇಟ್ಟುಕೊಳ್ಳಬೇಕೆಂದು ನನ್ನ ಅನ್ನಿಸಿಕೆಯಾಗಿದೆ.

ಶ್ರೀ ಎಸ್.ಎಸ್.ಪಾಟೀಲ್: ಸರ್ಕಾರದ ಷೇರ್‍ಸ್ ಇದ್ದಾಗ ಮಾಡಬಹುದೆಂದು ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದರಿಂದ ನಾವು ಇದನ್ನು ತೆಗೆದಿದ್ದೇವೆ. ಆದರೆ ಸರ್ಕಾರ ಗ್ಯಾರಂಟಿ ಕೊಟ್ಟಿದ್ದರ ಬಗ್ಗೆ ಕೋರ್ಟ್‌ಗೆ ಹೋಗಿದ್ದಂಥ ಸಂದರ್ಭದಲ್ಲಿ ಅದು ಸರ್ಕಾರದ ವಿರುದ್ಧವಾಯಿತು. ಆದ್ದರಿಂದ ಷೇರ್‍ಸ್ ಮತ್ತು ಲೋನ್ ಇಟ್ಟುಕೊಂಡರೆ ಮಾತ್ರ ಈ ಸೆಕ್ಷನ್ ಉಳಿಯುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ: ಸೆಕ್ಷನ್ 28(ಎ) 3ನ್ನು ಇಟ್ಟುಕೊಂಡಿದ್ದೀರಿ. ಅಫೆಕ್ಸ್ ಸೊಸೈಟಿ 32 ಮೆಂಬರ್‍ಸ್, ಸೆಕ್ಷನ್ 2(4)ನ್ನು ಇದನ್ನು ಬಿಟ್ಟಿದ್ದೀರಿ. ಈಗ ನೀವು ಹೆಚ್ಚುವರಿಯಾಗಿ ಕೊಟ್ಟಿರತಕ್ಕಂಥದರಲ್ಲಿ ಇದು ಇದೆ. ಸೆಕ್ಷನ್ 29ಜಿ ಮತ್ತು ಸೆಕ್ಷನ್ 2ನ್ನು ನಾವು ಹಾಗೆಯೇ ಬಿಟ್ಟು ರೀ-ಕನ್ಸಿಡರ್ ಮಾಡಿದರೆ, ಸದರಿ ವಿಧೇಯಕಕ್ಕೆ ಸರ್ವಾನುಮತದಿಂದ ಅಂಗೀಕಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯವನ್ನು ನಾನು ಆಗಲೇ ಹೇಳಲಿಲ್ಲ. ಅದೇನೆಂದರೆ, ಸೆಕ್ಷನ್ 129ಕ್ಕೆ ಒಳ್ಳೆಯ ತಿದ್ದುಪಡಿಯನ್ನು ತಂದಿದ್ದಾರೆ. ನೇಮಕಾತಿಯಲ್ಲಿ ಮೀಸಲಾತಿ ಮತ್ತು ಸಹಕಾರ ಉದ್ಯೋಗದಲ್ಲಿ ಸೇವಾ ಷರತ್ತುಗಳ ಮೇಲೆ ನೇಮಕಾತಿ ಬಗ್ಗೆ ಸದರಿ ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ಮಾಡದೇ ಹಾಗೆ ಕೊಟ್ಟರೆ ನಮಗೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಮೀಸಲಾತಿ ಮತ್ತು ಅರ್ಹತೆ ಎನ್ನತಕ್ಕಂಥಾದ್ದನ್ನು ಇದರಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಹಕಾರಿ ಇಲಾಖೆಗೆ ನಾನು ಸಚಿವನಾಗಿದ್ದಂಥ ಸಂದರ್ಭದಲ್ಲಿ ಕೂಡ ಇದರಿಂದ ಕೆಟ್ಟ ಹೆಸರು ಬಂದಿತ್ತು. ಆದ್ದರಿಂದ ಇದನ್ನು ಮಾಡಿದರೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್.ಪಾಟೀಲ್‌ರವರ ಮಾತನ್ನು ಕೇಳಿ ಎಲ್ಲವನ್ನೂ ಬಿಟ್ಟಂತೆ ಆಯಿತು.

ಶ್ರೀ ಎಸ್.ಎಸ್.ಪಾಟೀಲ್: ಕೆಲವು ಸೆಕ್ಷನ್‌ನ್ನು ಹಾಗೆ ಇಟ್ಟುಕೊಂಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸೆಕ್ಷನ್ 121ನ್ನು ಬೇಡವೆಂದು ಹೇಳುತ್ತಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ಸೆಕ್ಷನ್ 121 ಒಂದು ಬಂದರೆ ಸಾಕು. ಉಳಿದವು ಯಾವುದೂ ಬೇಡ. ಏಕೆಂದರೆ ಎಲ್ಲಾ ಅಸ್ತ್ರಗಳೆಲ್ಲವೂ ಇದರಲ್ಲಿಯೇ ಇದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಇವತ್ತಿನ ದಿವಸ ಸೆಕ್ಷನ್ 121ನ್ನು ಕೊಟ್ಟರೆ ಬಂಗಾರದ ಕತ್ತಿಯನ್ನು ಸರ್ಕಾರಕ್ಕೆ ಕೊಟ್ಟಂತೆ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನ್ನ ಪ್ರಶ್ನೆಗೆ ತಾವು ಉತ್ತರ ಹೇಳಬೇಕು. ಏನೆಂದರೆ, ಈ ರಾಜ್ಯದ ಜನರು ಆರಿಸಿ ಕಳುಹಿಸತಕ್ಕಂಥ ಶಾಸಕರಿಂದ ರಚಿತವಾದ ಒಂದು ಸರ್ಕಾರವನ್ನು ಆರ್ಟಿಕಲ್ 356ರ ಅಡಿಯಲ್ಲಿ ಡಿಸಾಲ್ವ್ ಮಾಡತಕ್ಕಂಥ ಅಧಿಕಾರ ಸಂವಿಧಾನದಲ್ಲಿ ಇದೆ. ಮಣಿಪುರ ರಾಜ್ಯದಲ್ಲಿ ಗಲಾಟೆ ಇದ್ದದ್ದರಿಂದ ಅಲ್ಲಿನ ಸರ್ಕಾರವನ್ನು ಆರ್ಟಿಕಲ್ 356ರ ಅಡಿಯಲ್ಲಿ ಡಿಸಾಲ್ವ್ ಮಾಡಿಲ್ಲವೇ? ಹಾಗೆಯೇ ರಿಜಿಸ್ಟರ್ ಆಫ್ ಸೊಸೈಟೀಸ್‌ನ ಆಕ್ಟ್ ಕೆಳಗಡೆ ಯಾವುದೇ ಸೊಸೈಟಿ ಅಥವಾ ಕ್ಲಬ್ ಅಥವಾ ಅಸೋಸಿಯೇಷನ್ ಸರಿಯಾಗಿ ನಡೆಯದಿದ್ದರೆ ಸೂಪರ್‌ಸೀಡ್ ಮಾಡಿ ಅಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕಂಥ ಕಾನೂನು ಈ ಆಕ್ಟ್‌ನಲ್ಲಿದೆ. ಯಾವುದೊಂದು ಸರ್ಕಾರ ಸರಿಯಾಗಿ ನಡೆಯದಿದ್ದರೆ ಅಥವಾ ವಿಧಾನಸಭೆ ಸರಿಯಾಗಿ ನಡೆಯದಿದ್ದರೆ ಅದನ್ನು ಡಿಸಾಲ್ವ್ ಮಾಡಬಹುದು ಅಥವಾ ಸೂಪರ್‌ಸೀಡ್ ಮಾಡಬಹುದೆಂದು ಸಂವಿಧಾನದಲ್ಲಿದೆ. ಅದೇ ರೀತಿ ಇಲ್ಲಿ ಮಿಸ್ ಅಪ್ರೋಪ್ರಿಯೇಷನ್ ಅಥವಾ ಆಡಳಿತವನ್ನು ಸರಿಯಾಗಿ ನಡೆಸದಿದ್ದರೆ ಅಂಥ ಕಡೆ ನಾವು ಅಡ್ಮಿನಿಸ್ಟ್ರೇಟರ್‌ನ್ನು ಹಾಕುತ್ತೇವೆಂದು ಹೇಳಿದಾಗ ಬೇಡವೆಂದು ಹೇಳಿ, ಆ ಸೆಕ್ಷನ್‌ನ್ನು ತೆಗೆದುಹಾಕಿ ಎಂದು ತಾವು

ಹೇಳುವುದು ಯಾವ ನ್ಯಾಯ?

ಶ್ರೀ ಡಿ.ಬಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳತಕ್ಕಂಥ ಧಾಟಿ ನೋಡಿದರೆ, ಅವರು ಕಳೆದ ಸಲ ಇಲ್ಲಿ ವಿರೋಧಪಕ್ಷದ ನಾಯಕರು ಆಗಿದ್ದಂಥ ಸಂದರ್ಭದಲ್ಲಿ ಏನೇನು ಭಾಷಣ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ನಾವು ಓದಬೇಕಾಗುತ್ತದೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ನನ್ನ ಸಲಹೆ ಏನೆಂದರೆ, ಸೆಕ್ಷನ್ 121 ಇದ್ದರೆ ಬೇರೆ ಯಾವುದೇ ಆಕ್ಟ್ ಬೇಡವೆಂದು ನನಗನಿಸುತ್ತದೆ. 121ರ ಮುಖಾಂತರ ಎಲ್ಲಾ ಸಹಕಾರ ಸಂಘಗಳನ್ನು ನಡೆಸಬಹುದು. ಸರ್ಕಾರಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಕೇಂದ್ರದವರು ಆರ್ಟಿಕಲ್ 356 ಇಟ್ಟುಕೊಂಡಿರುವಾಗ ನಾವೇಕೆ ಸೆಕ್ಷನ್ 121 ಇಟ್ಟುಕೊಳ್ಳಬಾರದು ಎನ್ನತಕ್ಕಂಥ ರೀತಿಯಲ್ಲಿ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಸನ್ಮಾನ್ಯ ಬೊಮ್ಮಾಯಿರವರ ಕೇಸ್‌ನಲ್ಲಿ ಇದು ತಪ್ಪೆಂದು ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟಿದೆ. ಸೆಕ್ಷನ್ 121ರ ಮೇಲೆ ಸುಮಾರು ಹತ್ತು ವರ್ಷಗಳಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಏನೇನು ತೀರ್ಪು ನೀಡಿದೆ, ಇದರಲ್ಲಿ ಎಷ್ಟು ಕೇಸ್‌ಗಳನ್ನು ಎತ್ತಿ ಹಿಡಿದಿದೆ ಅಥವಾ ಎಷ್ಟು ಕೇಸ್‌ಗಳು ರದ್ದಾಗಿವೆ ಹಾಗೆಯೇ ಎಷ್ಟು ಕೇಸ್‌ಗಳಲ್ಲಿ ಛೀಮಾರಿ ಆಗಿದೆ ಎನ್ನತಕ್ಕಂಥದರ ವರದಿಯನ್ನು ತಾವು ತರಿಸಿ ನೋಡಿದರೆ, ಇದನ್ನು ಇಟ್ಟುಕೊಳ್ಳಬೇಕೇ ಅಥವಾ ಬೇಡವೇ ಎಂಬುದು ನಿಮಗೆ ಗೊತ್ತಾಗುತ್ತದೆ. ಸೆಕ್ಷನ್ 30ಎ ತೆಗೆದಿರುವುದು ಬಹಳ ಸಂತೋಷದ ವಿಷಯ. ಹಾಗೆಯೇ 30ಬಿ ಇಟ್ಟುಕೊಂಡಿದ್ದೀರಿ. ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದ್ದರಿಂದ ಸೆಕ್ಷನ್ 121ನ್ನು ಇನ್ನೊಂದು ಸಾರಿ ಪರಿಶೀಲನೆ ಮಾಡಬೇಕು. ಈಗಾಗಲೇ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರ ಅನೇಕ ಪ್ರಾವಿಜನ್‌ಗಳಿವೆ. ಕ್ರಮ ತೆಗೆದುಕೊಳ್ಳುವುದಕ್ಕೆ ಸೆಕ್ಷನ್ 121 ಬೇಕೆಂದೇನೂ ಇಲ್ಲ. ಆದ್ದರಿಂದ ಸೆಕ್ಷನ್ 121 ತೆಗೆದರೆ ಬಹಳ ಅನುಕೂಲವಾಗುತ್ತದೆಂದು ನನ್ನ ಸಲಹೆಯಾಗಿದೆ.

ಶ್ರೀ ಕೆ.ಶ್ರೀನಿವಾಸಗೌಡ (ಕುದುವನಹಳ್ಳಿ): ತಾವು ಈಗ ಕೊಟ್ಟಿರತಕ್ಕಂಥ ಮಾಹಿತಿಯಲ್ಲಿ ಕೆಳಗಡೆ ಕ್ಲಾಸ್ 14ರಲ್ಲಿ ಮತ್ತೆ 13ನ್ನು ಶಲ್ ಬಿ ರೀನಂಬರ್ಡ್ ಎಂದು ಹೇಳಿದ್ದೀರಿ. ಇದರಲ್ಲಿ 13 ಒಮಿಟ್ ಮಾಡಲಾಗಿದೆ ಎಂದು ಹೇಳಿದ್ದೀರಿ. ಆದ್ದರಿಂದ ಮತ್ತೆ ಏನಾದರೂ ಸೇರುತ್ತದೆಯೇ ಎಂಬುದರ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೀಕೇಷನ್ ಮಾಡಬೇಕು.

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಒಂದು ವರ್ಷದಿಂದ ನನ್ನ ಸಹಕಾರ ಸಂಘಗಳ ತಿದ್ದುಪಡಿ ಕಾಯಿದೆಯ ಬಗ್ಗೆ ಬೇಕಾದಷ್ಟು ಹೊರಗಡೆ ಮತ್ತು ಒಳಗಡೆ ವಿವಿಧ ಪಕ್ಷಗಳು ಅವರದೇ ಆದಂಥ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ 28,708 ಸಹಕಾರ ಸಂಘಗಳು ಇವೆ. ಸನ್ಮಾನ್ಯ ಎಸ್.ಎಸ್.ಪಾಟೀಲ್‌ರವರ ಜಿಲ್ಲೆಯಲ್ಲಿ

ಮೊಟ್ಟಮೊದಲಬಾರಿಗೆ ಸಹಕಾರ ಸಂಘ ಪ್ರಾರಂಭವಾಯಿತು. ಇಡೀ ರಾಷ್ಟ್ರದಲ್ಲಿಯೇ ಸಹಕಾರ ಸಂಘದ ಧ್ವಜ ಹಾರಿಸತಕ್ಕಂಥ ಒಂದು ಅವಕಾಶ ಈ ಜಿಲ್ಲೆಯಿಂದ ಪ್ರಾರಂಭವಾಯಿತು. ಇವತ್ತಿನ ದಿವಸ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಬಿಟ್ಟರೆ ನಮ್ಮ ರಾಜ್ಯ ಇಡೀ ರಾಷ್ಟ್ರದಲ್ಲಿ ಮೂರನೇ ಸ್ಥಾನದಲ್ಲಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಸುಮಾರು 28 ಸಾವಿರ ಸಂಘಗಳಲ್ಲಿ 1.5 ಕೋಟಿ ಸದಸ್ಯರಿದ್ದಾರೆ. ಇದು ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 30ರಷ್ಟು ಇದೆ. ಅಂದರೆ, ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗದಷ್ಟು ಜನರು ಸಹಕಾರಿಗಳು ಆಗಿದ್ದಾರೆ. ಇದರಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ, ಸಕ್ಕರೆ ಮತ್ತು ಟೆಕ್ಸ್‌ಟೈಲ್ಸ್ ಮತ್ತು ಇನ್ನು ಇತರೇ ಸಹಕಾರ ಸಂಘಗಳು ಸೇರಿವೆ. ಒಟ್ಟು ಷೇರು ಬಂಡವಾಳ 1259 ಕೋಟಿ ರೂಪಾಯಿಗಳಷ್ಟಿದೆ. ದುಡಿಯುವ ಬಂಡವಾಳ 16 ಸಾವಿರ ಕೋಟಿ ಇದೆ. ಠೇವಣಿ ಸುಮಾರು 11 ಸಾವಿರ ಕೋಟಿ ರೂಪಾಯಿಗಳಿಷ್ಟಿದೆ. ಇದನ್ನೆಲ್ಲಾ ನೋಡಿದರೆ, ಇದೊಂದು ಪ್ಯಾರಲಲ್ ಗೌರ್ನಮೆಂಟ್ ಇದ್ದ ಹಾಗೆ. ಇದರಲ್ಲಿ ಸುಮಾರು 7 ರಿಂದ 8 ಸಾವಿರ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾನು ಮನೆಯಿಂದ ಇಲ್ಲಿಗೆ ಬರಬೇಕಾದ ದಾರಿಯಲ್ಲಿ ಒಂದು ಪೋಲೀಸ್ ಸ್ಟೇಷನ್ ಸಿಗುತ್ತದೆ. ಹಾಗೆಯೇ ವಿಧಾನಸೌಧದ ಮುಂದೆ ಕೂಡ ಪೋಲೀಸರು ನಿಂತಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿರತಕ್ಕಂಥ ಪೋಲೀಸರು ಮತ್ತು ಇಲ್ಲಿ ನಿಂತಿರತಕ್ಕಂಥ ಪೋಲೀಸರು ರಸ್ತೆಯ ಮೇಲೆ ಓಡಾಡುವವರನೆಲ್ಲರನ್ನೂ ಹಿಡಿಯುತ್ತಾರೆಯೆ? ಟ್ರಾಫಿಕ್ ಅಥವಾ ರೆಗ್ಯುಲರ್ ಪೋಲೀಸ್‌ರು ನಾವು ಇಲ್ಲಿಗೆ ಬಂದಿರುವುದಕ್ಕೆ ಯಾರಾದರೂ ತಡೆದಿದ್ದಾರೆಯೆ ಅಥವಾ ಮಾನ್ಯ ಎಸ್.ಎಸ್.ಪಾಟೀಲ್‌ರವರು ಬಂದಾಗ ಯಾರಾದರೂ ಅಡ್ಡ ಹಾಕಿದ್ದಾರೆಯೆ? ಯಾರೂ ಸಹ ಹಿಡಿಯಲಿಲ್ಲ. ಆದರೆ ಟ್ರಾಫಿಕ್ ಸಿಗ್ನಲ್‌ನ್ನು ಉಲ್ಲಂಘನೆ ಮಾಡುವವರನ್ನು ಮತ್ತು ಬಲಗಡೆ ಹೋಗತಕ್ಕಂಥವನು ಎಡಗಡೆ ಹೋದರೆ ಅಂಥವರನ್ನು ಟ್ರಾಫಿಕ್ ಪೋಲೀಸ್‌ನವರು ಹಿಡಿಯುತ್ತಾರೆ. ಕಳ್ಳ ಅಥವಾ ಸ್ಮಗಲರ್ ಆಗಿದ್ದಂಥ ಸಂದರ್ಭದಲ್ಲಿ ಪೋಲೀಸ್‌ನವರು ಹಿಡಿಯುತ್ತಾರಷ್ಟೆ. ಈ ಕಾಯಿದೆಯನ್ನು ನಾನೇನೂ ಮಾಡಿಲ್ಲ. ನೀವು ಸಚಿವರು ಆಗಿದ್ದಂಥ ಸಂದರ್ಭದಲ್ಲಿ ಈ ಕಾಯಿದೆಯನ್ನು ನಾಲ್ಕೂವರೆ ವರ್ಷಗಳ ಕಾಲ ಉಪಯೋಗ ಮಾಡಿದ್ದೀರಿ. ಹಾಗೆಯೇ ಹಿಂದೆ ಸಹಕಾರ ಮಂತ್ರಿಗಳಾಗಿದ್ದಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಹಾಗೂ ಸನ್ಮಾನ್ಯ ಶ್ರೀಕಂಠಯ್ಯನವರು ಮತ್ತು ಸನ್ಮಾನ್ಯ ಜಾಲಪ್ಪನವರು ಇದ್ದಂಥ ಸಂದರ್ಭದಲ್ಲಿಯೇ ಈ ಎಲ್ಲಾ ಕಾಯಿದೆಗಳು ಇದ್ದವು. ಎಲ್ಲಾ ಸರ್ಕಾರಗಳು ಈ ಕಾಯಿದೆ ಹುಟ್ಟಿದಾಗಿನಿಂದ 1959ರಿಂದ ಇದುವರೆಗೆ ಯಾರ್‍ಯಾರು ಸಹಕಾರ ಮಂತ್ರಿಗಳಾಗಿದ್ದರೋ ಅವರೇನು ಮಾಡಿದ್ದರೋ ಅದನ್ನು ಮಾತ್ರ ನಾನು ತಂದಿದ್ದೇನೆಯೇ ಹೊರತು, ಶಿವಕುಮಾರ್ ಇಲ್ಲಿ ಬಂದು ಬಿಟ್ಟು ಮಂತ್ರಿಯಾಗಿ ನಾನು ಏನಾದರೂ ಹೊಸದಾಗಿ ತಂದು ಬಿಟ್ಟದ್ದರೆ, ನೀವು ಹೇಳಿದ್ದಕ್ಕೆ ನಾನು ಕೇಳುವುದಕ್ಕೆ ತಯಾರು ಇದ್ದೇನೆ. ಒಂದೂ ಕೂಡ ನಾನು ಆ ಕೆಲಸ ಮಾಡಿಲ್ಲ, ನಾನು ಹಿಂದೆ ಏನು ಇತ್ತು ಅದನ್ನು ಮಾತ್ರ ತಂದಿದ್ದೇನೆ. ತಪ್ಪು ದಾರಿಗೆ ಹೋಗುವುದಕ್ಕೆ ಜನ ಏನು ಪ್ರಯತ್ನ ಮಾಡುತ್ತಾರೆ, ಏನು ಕಳ್ಳರು ಇದ್ದಾರೆ, ಇಂಥವರನ್ನು ನಾನು ತಿದ್ದುವುದಕ್ಕೆ ಪ್ರಯತ್ನಿಸುತ್ತಿದ್ದೇನೆಯೇ ಹೊರತು

ಬೇರೆ ಏನೂ ಮಾಡಿಲ್ಲ. ಈ ಎರಡು ವರ್ಷಗಳಲ್ಲಿ ಒಂದೆರಡು ಹದ್ದುಮೀರಿ ನಡೆದಿರತಕ್ಕಂಥವುಗಳನ್ನು ಬಿಟ್ಟರೆ ಬೇರೆ ಯಾವುದನ್ನು ಸೂಪರ್‌ಸೀಡ್ ಮಾಡಿದ್ದೇನೆ? ತಿದ್ದಿಕೊಳ್ಳಿ ಎಂದು ಹೇಳುವುದು ತಪ್ಪೇ? ಒಂದು ಪೋಲೀಸ್ ಠಾಣೆಯಲ್ಲಿ ಒಬ್ಬ ಸಬ್-ಇನ್ಸ್‌ಪೆಕ್ಟರ್ ಇರುತ್ತಾರೆ, ಪೋಲೀಸರು ಇರುತ್ತಾರೆ, ಏನಾದರೂ ತಪ್ಪು ಮಾಡಿದಾಗ ಅವರನ್ನು ಇವರು ಹಿಡಿಯುವುದಕ್ಕೆ ಬರುತ್ತಾರೆ, ತಿದ್ದುವುದಕ್ಕೆ ಬರುತ್ತಾರೆ, ಎಂದರೆ ಇದಕ್ಕೂ ಕೂಡ ನೀವು ಅವಕಾಶ ಕೊಡದಿದ್ದರೆ ಹೇಗೆ? ಮೀಸಾ ಇದೆ ಎಷ್ಟು ಜನರ ಮೇಲೆ ನಾವು ಇದನ್ನು ಹಾಕಿದ್ದೇವೆ, ಟಾಡಾವನ್ನು ಎಷ್ಟು ಜನರ ಮೇಲೆ ಹಾಕಿದ್ದೇವೆ? ನೀವೇ ಹೇಳಿ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮುಂದೆ ಬರುವವರಿಗೆ ನಿಮ್ಮಷ್ಟು ಹೃದಯಶೀಲತೆ ಇಲ್ಲದಿದ್ದರೆ ಗತಿ ಏನು?

ಶ್ರೀ ಡಿ.ಕೆ.ಶಿವಕುಮಾರ್: ನೀವು ಬೇಕಾದಷ್ಟು ಸಹಕಾರ ಸಂಸ್ಥೆಗಳಲ್ಲಿ ಇದ್ದೀರಿ, ನಾನು ಎಷ್ಟು ಜನಕ್ಕೆ ತೊಂದರೆ ಕೊಟ್ಟಿದ್ದೇನೆ ಹೇಳಿ. ಜನತಾದಳ ಸರ್ಕಾರ ಇದ್ದಾಗ ತಾವು ಸೆಕ್ಷನ್ 30(ಎ) ಅನ್ನು 309 ಸಲ ಉಪಯೋಗಿಸಿದ್ದೀರಿ, ಇದಕ್ಕೆ ನೀವು ಕಾರಣವನ್ನು ಒಪ್ಪಿದ್ದೀರಿ ಅದು ಬೇರೆ ವಿಚಾರ, ಅದರಲ್ಲಿ ನೀವು ಎಲ್ಲಾ ರಾಜಕಾರಣವನ್ನು ಮಾಡಿಲ್ಲವಲ್ಲಾ, ಸೆಕ್ಷನ್ 121 ಅನ್ನು 1050 ಸಲ ಉಪಯೋಗಿಸಿದ್ದೀರಿ, ಅದರಲ್ಲಿ ಚುನಾವಣೆ ಮುಂದಕ್ಕೆ ಹಾಕಿರುವುದು 509 ಸಲ, ಆದರೆ ಎಲ್ಲವನ್ನೂ ರಾಜಕಾರಣಕ್ಕೆ ನೀವು ಮಾಡಿಲ್ಲವಲ್ಲಾ.

ಶ್ರೀ ಎಸ್.ಎಸ್.ಪಾಟೀಲ್: ಎಲ್ಲಾ ಆಗಿರುವುದೇ ರಾಜಕಾರಣದಿಂದ. ಅದು ತಪ್ಪು ಎಂದು ನಾನು ಹೇಳುತ್ತಿದ್ದೆನಲ್ಲಾ ಅದಕ್ಕಾಗಿ ನಾನು ಅದನ್ನು ತಿದ್ದಿದ್ದು. ಈ ರಾಜಕೀಯ ವ್ಯವಸ್ಥೆಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಬಹಳ ವಿರೋಧಿಸಿ ತಿದ್ದಿರುವುದು ಅವರಿಗೂ ಕೂಡ ಗೊತ್ತಿದೆ. ಸೆಕ್ಷನ್ 121 ಇರಬೇಕು ಎನ್ನುವ ವಿಚಾರ ನಿಮ್ಮಲ್ಲಿ ಇದೆ ಹೀಗಾಗಿ ಅದನ್ನು ಇಟ್ಟುಕೊಳ್ಳಿ ಎಂದು ನಾವು ಒಪ್ಪಿದ್ದೇವೆ. ಅವರು ಅದನ್ನು ಕೆಟ್ಟದ್ದಕ್ಕೆ ಉಪಯೋಗಿಸುವುದಿಲ್ಲವೆಂದು ಹೇಳಿದ್ದಾರೆ ನಾನು ಅದನ್ನು ಒಪ್ಪುತ್ತೇನೆ. ಇವರು ಅದನ್ನು ಮಾಡದೇ ಇರಬಹುದು, ಮುಂದೆ ಬಂದವರು ಏನು ಮಾಡುತ್ತಾರೆ ನಂತರ ನೋಡೋಣ.

ಶ್ರೀ ಡಿ.ಕೆ.ಶಿವಕುಮಾರ್: ತಾವು ಪ್ರಾರಂಭದಲ್ಲಿ ಗಾಂಧೀಜಿಯ ಮಾತುಗಳು ನೆನಪಿಗೆ ಬಂತು ಎಂದು ಹೇಳಿದಿರಿ. ಜನರಿಗೆ ತೊಂದರೆಯಾದಾಗ ತಿದ್ದುಪಡಿ ತರಬೇಕು ಎನ್ನುವ ವಿಚಾರವನ್ನು ತಾವು ಪ್ರಸ್ತಾಪಿಸಿದಿರಿ. ಆಗ ನೀವು ತಿದ್ದುಪಡಿ ತಂದರಲ್ಲಾ ಆಗ ಏನು ತೊಂದರೆಯಿತ್ತು? ಅಂಥ ಅವಶ್ಯಕತೆ ಏನಿತ್ತು? ನೀವು ಕೂಡ ಜನರಿಗೆ ಏನೋ ಒಂದು ತೊಂದರೆಯಾಗುತ್ತದೆಂದು ತಿದ್ದುಪಡಿ ತಂದಿರಿ, ನಾವೂ ಕೂಡ ನೀವು ಮಾಡಿದ್ದರಿಂದ ಜನಗಳಿಗೆ ತೊಂದರೆಯಾಗುತ್ತದೆ, ಈ ಒಂದು ಸಹಕಾರ ತತ್ವ ಉಳಿಯಬೇಕು, ಎಲ್ಲಿ ನೀವು ಈ ಸಹಕಾರ ಧ್ವಜ ಹಾರಿಸಿದಿರಿ, ಅದು ಪುನಃ ಧ್ವಜ ಸ್ಥಾಪಿಸಬೇಕು, ಈ ಸಹಕಾರ ತತ್ವ ಉಳಿಯಬೇಕು, ಈ ರಾಜ್ಯದಲ್ಲಿ 31 ಪರ್ಸೆಂಟ್

ಸಹಕಾರಿಗಳು ಇದ್ದಾರೆ, ಇವರು ಉದ್ಧಾರವಾಗಬೇಕು ಎನ್ನುವ ದೃಷ್ಟಿಯಿಂದ ನಾವು ಈ ಪ್ರಯತ್ನವನ್ನು ಮಾಡುತ್ತಿದ್ದೇವೆ. ಸರ್ವಜ್ಞ ಒಂದು ಮಾತನ್ನು ಹೇಳಿದ್ದಾನೆ, ಏನೆಂದರೆ,

''ನಿಂಬೆಗಿಂ ಹುಳಿಯಿಲ್ಲ
ದುಂಬಿಗಿಂ ಕರಿಯಿಲ್ಲ
ಶಂಭುಗಿನ್ನ ಅಧಿಕ ದೇವನಿಲ್ಲ
ನಂಬಿಕೆಗಿನ್ನ ಅಧಿಕ ಗುಣವಿಲ್ಲ''

ಅಂದರೆ, ನಿಂಬೆಗಿಂ ಹುಳಿಯಿಲ್ಲ ಎಂದರೆ, ನಾವು ಬೇಕಾದಷ್ಟು ಹುಳಿಯನ್ನು ನೋಡಿದ್ದೇವೆ, ಹುಣಸೆ ಹುಳಿ, ಆ ಹುಳಿ, ಈ ಹುಳಿ, ಎಲ್ಲಾ ಹುಳಿಗಳಿಗಿಂತ ನಿಂಬಿ ಹಣ್ಣಿನ ಹುಳಿ ಶ್ರೇಷ್ಠ. ದುಂಬಿಗಿಂ ಕರಿಯಿಲ್ಲ ಎಂದರೆ, ಕಪ್ಪು ಇದೆ ಅಲ್ವಾ, ಬೇಕಾದಷ್ಟು ಕಪ್ಪು ನೋಡುತ್ತೇವೆ, ದಾರದಲ್ಲಿ ಮತ್ತೊಂದರಲ್ಲಿ ನೋಡುತ್ತೇವೆ, ಆದರೆ ಈ ಎಲ್ಲಾ ಕಪ್ಪು ಬಣ್ಣಕ್ಕಿಂತ ದುಂಬಿ ಮೇಲೆ ಇರುವ ಆ ಕಪ್ಪು ಬಣ್ಣ ಅದು ಏನು ಇದೆ ಅದು ಎಲ್ಲದಕ್ಕಿಂತಲೂ ಶ್ರೇಷ್ಠ. ಶಂಭುಗಿನ್ನ ಅಧಿಕ ದೇವನಿಲ್ಲ ಎಂದರೆ, ಆ ಶಿವನಿಗಿಂತಲೂ ದೊಡ್ಡ ದೇವರಿಲ್ಲವಂತೆ, ನಂತರ ನಂಬಿಕೆಗಿನ್ನ ಅಧಿಕ ಗುಣವಿಲ್ಲ ಎಂದರೆ, ನಂಬಿಕೆ ಬಹಳ ಶ್ರೇಷ್ಠ ಎಂದು ಸರ್ವಜ್ಞರವರು ಹೇಳುತ್ತಾರೆ, ಅಂದರೆ, ಈ ಸಹಕಾರ ತತ್ವ ಏನಿದೆ ಅದು ಈ ನಂಬಿಕೆಯ ಮೇಲೆ ಉಳಿದಿದೆ. ಇಲ್ಲಿ ಪ್ರತಿ ಹಂತದಲ್ಲೂ ಕೂಡ ನಂಬಿಕೆ ಇದೆ. ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳಲ್ಲಾಗಲಿ, ಅಪೆಕ್ಸ್ ಬ್ಯಾಂಕ್‌ಗಳಲ್ಲಾಗಲಿ, ಈ ರಾಜ್ಯದ 33 ಪರ್ಸೆಂಟ್ ಜನ ಎಷ್ಟೋ ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಇಟ್ಟಿದ್ದಾರೆ. ಎಲ್ಲಾ ಸದಸ್ಯರು ಒಟ್ಟಾಗಿ ಸೇರುತ್ತೀರೇನು? ಜೊತೆಗೂಡಿ ಈ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡಬೇಕಾದರೆ ಮುಖ್ಯವಾಗಿ ನಂಬಿಕೆ ಎನ್ನುವುದು ಇರಬೇಕಾಗುತ್ತದೆ. ಮೂಲಭೂತವಾಗಿ ಈ ನಂಬಿಕೆಯನ್ನು ಉಳಿಸಿಕೊಳ್ಳುವುದು ಹೇಗೆ? ನಾವು ಏನು ಪ್ರಯತ್ನವನ್ನು ಮಾಡುತ್ತಿದ್ದೇವೆ ಎಂದರೆ ಯಾರು ಈ ನಂಬಿಕೆಯನ್ನು ಹಾಳು ಮಾಡುತ್ತಾರೆ ಅಂಥವರಿಗೆ ಶಿಕ್ಷೆ ಮಾಡಲಿಕ್ಕೆ ನಾವು ಈ ಕಾಯಿದೆಯನ್ನು ತರದಿದ್ದರೆ, ಈ ಕಾಯಿದೆಯನ್ನು ನಾವು ರಕ್ಷಿಸದಿದ್ದರೆ, ನಾವು-ನೀವು ಜನಪ್ರತಿನಿಧಿಗಳೇನಿದ್ದೇವೆ ನಾವು ಇವರನ್ನು ರಕ್ಷಣೆಯನ್ನು ಮಾಡದಿದ್ದರೆ ಇನ್ನು ಯಾರು ಮಾಡುವುದಕ್ಕೆ ಆಗುತ್ತದೆ? ಇಷ್ಟೊಂದು ಸಾವಿರ ಬ್ಯಾಂಕುಗಳಿವೆ, ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ಈ ಬ್ಯಾಂಕ್ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ಬಗ್ಗೆ ತಮಗೆಲ್ಲಾ ಗೊತ್ತಿದೆ. ಈ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನವರು ಬೇಕಾದಷ್ಟು ಹಣವನ್ನು ಸರ್ಕಾರಕ್ಕೆ ಡೆಫಾಸಿಟ್ ಮಾಡಿದ್ದಾರೆ. ಅಲ್ಲಿ ಡೆಪಾಸಿಟ್ ಹಣವು ರಾತ್ರೋರಾತ್ರಿ ಖಾಲಿಯಾಗಿದೆ, ನಾನು ಒಂದೊಂದು ಬ್ಯಾಂಕಿನ ಪರಿಸ್ಥಿತಿಯನ್ನು ಹೇಳಿಕೊಂಡರೆ, ಆಗ ಅವನು ವಾಪಸ್ಸು ಬರುತ್ತಾನೆ, ನನಗೆ ಏನೋ ಹೆಚ್ಚು ಕಡಿಮೆಯಾದರೆ, ಅವನಿಗೆ ಹಣವು ಬಂದರೆ, ಸರ್ಕಾರವೇ ವಾಪಸ್ಸು ಹೋಗಿದೆ. ಇನ್ನು ಅನೇಕ ಬ್ಯಾಂಕುಗಳಲ್ಲಿ ಸರ್ಕಾರವೇ ಕೋ-ಆಪರೇಟೀವ್ ಸಂಸ್ಥೆಗಳಲ್ಲಿ ಹಣವಿಟ್ಟು ಮಾರನೇ ದಿವಸ ಅಲ್ಲಿ ಹಣವಿರುವುದಿಲ್ಲ. ಅಲ್ಲಿ ಸರ್ಕಾರವೇ ವಾಪಸ್ಸು ತೆಗೆದುಕೊಳ್ಳಬೇಕೆಂದು ಏನು

ಇಲ್ಲ. ಈ ರೀತಿ ಸರ್ಕಾರದ ಪರಿಸ್ಥಿತಿಯಾದರೆ ನಿಮ್ಮ ಹಣವನ್ನು ನೀವು ಡೆಪಾಸಿಟ್ ಇಟ್ಟಿದ್ದಂತಹ ಸಂಸ್ಥೆಯಲ್ಲಿ ಈ ರೀತಿಯಾದರೆ ನೀವು ನಿಮ್ಮ ಹಣವನ್ನು ಅಲ್ಲಿ ಡೆಫಾಸಿಟ್ ಮಾಡುತ್ತೀರಾ? ನನಗೆ ಕಷ್ಟಕ್ಕಾಗಿ ಆ ಹಣ ಬೇಕು, ನನ್ನ ಮಗಳನ್ನು ಮದುವೆ ಮಾಡುವುದಕ್ಕೋಸ್ಕರ ಹಣ ಬೇಕು, ನನ್ನ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೋಸ್ಕರ ಹಣ ಬೇಕು, ಅಥವಾ ಒಂದು ಮನೆಯನ್ನು ಕಟ್ಟಬೇಕೆಂದು ಎಲ್ಲರೂ ಹಣವನ್ನು ಡೆಫಾಸಿಟ್ ಮಾಡುತ್ತಾರೆ. ಆ ಹಣವು ನಿಮಗೆ ವಾಪಸ್ಸು ಸಿಗದಿದ್ದರೆ, ನಿಮ್ಮ ಪರಿಸ್ಥಿತಿ ಏನಾಗಬೇಕು? ಈ ಕಾಯಿದೆಯಡಿಯಲ್ಲಿ ಏನಾದರೂ ರಕ್ಷಣೆಯನ್ನು ಮಾಡುವುದಕ್ಕೆ ಸರ್ಕಾರವಿದೆ ಎನ್ನುವ ನಂಬಿಕೆಯನ್ನು ನಾವು ಸಾರ್ವಜನಿಕರಿಗೆ ತೋರಿಸದಿದ್ದರೆ ಇದನ್ನು ಇನ್ಯಾರು ತೋರಿಸುತ್ತಾರೆ? ಇಂಡಿಪೆಂಡೆಂಟ್ ಬೇಕು ಎಂದು ತಾವು ಹೇಳುತ್ತೀರಲ್ಲಾ, ಸೌಹಾರ್ದತೆ ಆಕ್ಟ್ ಇದೆಯಲ್ಲಾ, ಆ ಇಂಡಿಪೆಂಡೆಂಟ್ ಇರುವವರು ಹೋಗಲಿ, ಯಾರು ಬೇಡವೆನ್ನುತ್ತಾರೆ. ಆ ಆಕ್ಟ್‌ನ್ನು ನೀವು ಮಾಡಿದ್ದೀರಿ, ಬಹಳ ಸಂತೋಷ, ಅದನ್ನು ಅವರು ಉಪಯೋಗಿಸಿಕೊಳ್ಳಲಿ. ಇವತ್ತಿನವರೆವಿಗೂ ಕೇವಲ 15 ಜನ ಮಾತ್ರ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಯಾರೋ ಆ ಕಾಯಿದೆಗೆ ಹೋಗಲು ಹೆದರಿಕೊಳ್ಳುತ್ತಿದ್ದಾರೆ. ನಾವು ಬೇಡವೆಂದು ಹೇಳುತ್ತಿಲ್ಲ. ಇಲ್ಲಿ ಮುಖ್ಯವಾಗಿ ಜನರ ವಿಶ್ವಾಸವನ್ನು, ಏನೊಂದು ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ, ಅವರನ್ನು ರಕ್ಷಣೆ ಮಾಡುವಂತಹ ವಿಚಾರಕ್ಕೆ ಬಂದಿದ್ದೇವೆ. ನಮ್ಮ ಬೆಂಗಳೂರು ಡಿಸಿಸಿ ಬ್ಯಾಂಕ್‌ಗೆ ಸಂಬಂಧಪಟ್ಟಂತೆ, ನಿನ್ನೆ ಒಂದು ಸೊಸೈಟಿ ರಿಜಿಸ್ಟರ್ ಆಗಿದೆ, ಇವತ್ತು ಅವನು ಡಿಸಿಸಿ ಬ್ಯಾಂಕ್‌ಗೆ ಅರ್ಜಿಯನ್ನು ಹಾಕಿ ರಿಜಿಸ್ಟರ್ ಮಾಡಿಸುತ್ತಾನೆ, ನಾಳೆ ಅಲ್ಲಿ ರೆಸಲ್ಯೂಷನ್ ಆಗುತ್ತದೆ, ನಾಡಿದ್ದು 8 ಕೋಟಿ ರೂಪಾಯಿಗಳ ಸಾಲಕ್ಕಾಗಿ ಅರ್ಜಿಯನ್ನು ಹಾಕುತ್ತಾನೆ. ಇದು ಕೇವಲ ನಾಲ್ಕು ದಿನಗಳಲ್ಲಿ ನಡೆಯುತ್ತದೆ, ನಾವು ಯಾವ ಕಾಯಿದೆಯಡಿಯಲ್ಲಿ ಇದನ್ನು ತರಬೇಕು? ಇದರ ಬಗ್ಗೆ ತಾವೇ ಹೇಳಬೇಕು. ಇವತ್ತಿನವರೆವಿಗೂ ನಾವು ಅಧ್ಯಕ್ಷರನ್ನು ಮಾಡಲಿಕ್ಕೆ ಆಗಲಿಲ್ಲ, ಹಾಗೂ ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡುವುದಕ್ಕಾಗಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಸಚಿವರು ಬೆಂಗಳೂರು ಡಿಸಿಸಿ ಬ್ಯಾಂಕ್‌ನ ಬಗ್ಗೆ ಹೇಳುತ್ತಿದ್ದಾರೆ, ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋದರೆ ಕೋರ್ಟಿನಲ್ಲಿರುವ ವಿಷಯ ಮಾತನಾಡಿದಂತಾಗುತ್ತದೆ. ಅಫೆಕ್ಸ್ ಬ್ಯಾಂಕಿನಲ್ಲಿ ಸುಮಾರು 5 ರಿಂದ 6 ಕೋಟಿ ರೂಪಾಯಿಗಳನ್ನು ಲಪಟಾಯಿಸಿ ಅನಾಥರಕ್ಷಕರು ಎಂದು ಸಿನಿಮಾವನ್ನು ತೆಗೆದಿದ್ದಾರೆ. ಇವರು ಬೆಂಗಳೂರು ಡಿಸಿಸಿ ಬ್ಯಾಂಕ್‌ನ ಬಗ್ಗೆ ಹೇಳಿದ್ದಾರೆ, ನಾವು ಯಾವ ಬ್ಯಾಂಕ್‌ನ್ನು ಸೂಪರ್‌ಸೀಡ್ ಮಾಡಿದ್ದೇವೆ, ಅಲ್ಲಿ ಯಾವ ಬೋರ್ಡ್ ಇತ್ತೋ ಅದೇ ಬೋರ್ಡ್‌ನ್ನು ಅಡ್ವೈಸರಿ ಬೋರ್ಡ್ ಎಂದು ಮಾಡಿದ್ದಾರೆ ಕೋರ್ಟಿನವರು. ಆ ವೇಳೆಯಲ್ಲಿ ಸದರಿ ಬೋರ್ಡ್‌ನ್ನು ಅಡ್ವೈಸರಿ ಬೋರ್ಡ್ ಆಗಿ ಮಾಡುವಂತೆ ಕೋರ್ಟ್ ವಾದಿಸಿತು. ಇಂತಹ ಪರಿಸ್ಥಿತಿ ಇವತ್ತು ಇದೆ ಅವರು ಆ ಅವಧಿಯಲ್ಲಿಯೇ ಮಾಡಿದ್ದಾರೆ. ನಾವು ಅಸ್ತ್ರಗಳಿಲ್ಲವೆಂದು ಹೇಳುತ್ತಿಲ್ಲ, ನಾವು ಅವರನ್ನು ಸೂಪರ್‌ಸೀಡ್ ಮಾಡಿದ್ದೆವು.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಎಸ್.ಎಸ್.ಪಾಟೀಲರೆ, ನಾನು ನಿಮಗೆ ಒಂದು ಸಣ್ಣ ಉದಾಹರಣೆಯನ್ನು ಕೊಟ್ಟಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ''ನಂಬಿ ಕೆಟ್ಟವರಿಲ್ಲ'' ಎಂದು ಹೇಳುತ್ತಾರೆ, ಸಹಕಾರಿ ಸೊಸೈಟಿಯ ಮೇಲೆ ನಾವು ನಂಬಿಕೆಯನ್ನು ಇಡಬೇಕು. ಎಲ್ಲೋ ಒಬ್ಬ ಬದ್ಮಾಶನನ್ನು ನೋಡಿ 99 ಜನರಿಗೆ ತೊಂದರೆಯಾಗಬಾರದು. ನಮ್ಮ ಅಧಿಕಾರಿಗಳು ಹೋಗಿ 99 ಜನರಿಗೆ ತೊಂದರೆಯನ್ನು ಕೊಡುತ್ತಾರೆ. ನಮಗೆ ಮತ್ತು ನಿಮಗೆ ಅವರು ಗೊತ್ತಿದ್ದಾರೆ, ಅದರೊಳಗೆ ಎಲ್ಲರೂ ಇದ್ದಾರೆ. ತಾವು ಏನು ಹೇಳುತ್ತೀರೋ ಅವರನ್ನೆಲ್ಲಾ ನಾನು ನೋಡಿದ್ದೇನೆ. ಇವತ್ತು ಒಂದು ಸೊಸೈಟಿಯನ್ನು ರಿಜಿಸ್ಟರ್ ಮಾಡಿ, ಚೀಲದೊಳಗೆ ಹಣವನ್ನು ತುಂಬಿಕೊಂಡು ಹೋಗಿದ್ದಾರೆ. ಅಂತಹವರೊಬ್ಬರನ್ನು ನೋಡಿ, ಇಡೀ ಒಳ್ಳೆಯವರಿಗೆ ತೊಂದರೆಯಾಗಬಾರದು. ಅವರ ಮೇಲೆ ಪ್ರಯೋಗಿಸುವುದಕ್ಕೆ ಅಸ್ತ್ರಗಳಿವೆ, ಅದನ್ನು ಮಾಡೋಣ. ನಾವು ಅವರನ್ನು ಬಿಟ್ಟಿಲ್ಲ, ಮಾಡಿದ್ದೇವೆ. ಅವರನ್ನು ನಾವು ಸಿಬಿಐ ತನಿಖೆಗೆ ಒಪ್ಪಿಸಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: ಈಗಾಗಲೇ ನಾನು ಮೊದಲೇ ಹೇಳಿದ್ದೇನೆ, ಹೀಗಿರುವಂತಹ ಸಂದರ್ಭದಲ್ಲಿ ಪ್ರತಿ ಹಂತದಲ್ಲೂ ನಾವು ಅವರಿಗೆ ನೋಟೀಸ್‌ನ್ನು ಕೊಟ್ಟು ನಿಮ್ಮನ್ನು ನಾವು ಬಂದು ಮುಟ್ಟುತ್ತೇವೆ, ಎಂದು ಕಾರಣ ಹೇಳುವುದಕ್ಕೆ ಮುಂಚಿಯೇ ಹಣ ಹೊರಟುಹೋಗಿದೆ. ಇವತ್ತು ಬ್ಯಾಂಕ್ 60 ಕೋಟಿ ರೂಪಾಯಿಗಳ ಲಾಸ್‌ನಲ್ಲಿ ಇದೆ, ಆ ಜಿಲ್ಲೆಯ ರೈತರಿಗೆ ಇವತ್ತಿನವರೆವಿಗೂ ನಾವು ಸಾಲವನ್ನು ಒದಗಿಸಿಕೊಡುವುದಕ್ಕೆ ಆಗುತ್ತಿಲ್ಲ. ಅಪೆಕ್ಸ್ ಬ್ಯಾಂಕ್‌ನವರು ಸಾಲವನ್ನು ಕೊಡುತ್ತಿಲ್ಲ, ನಬಾರ್ಡ್‌ನವರು ಸಾಲವನ್ನು ಕೊಡುತ್ತಿಲ್ಲ ಈ ಪರಿಸ್ಥಿತಿ ಏನು? ನಾನು ಅದಕ್ಕಾಗಿ ಮೊದಲೇ ಹೇಳಿದ್ದೇನೆಂದರೆ, ಕಳ್ಳರಿಗೆ ಮಾತ್ರ ಪೋಲೀಸ್ ಸ್ಟೇಷನ್ ಇದೆ, ನಾವು ಏನು ಈ ಕಾಯಿದೆಯನ್ನು ತರುವುದಕ್ಕೆ ಹೊರಟಿದ್ದೇವೆ, ಯಾರು ತಪ್ಪುದಾರಿಗೆ ಹೋಗುತ್ತಾರೆ ಅಂತಹವರಿಗೆ ಮಾತ್ರ ಶಿಕ್ಷೆಯಾಗುತ್ತದೆ, ಇದರ ಬಗ್ಗೆ ಉತ್ತಮರು ಏಕೆ ಚಿಂತನೆಯನ್ನು ಮಾಡಬೇಕು? ಏನು, ಶಿವಕುಮಾರ್‌ರವರು ಅವನ ಮೇಲೆ ದ್ವೇಷ ಮಾಡುತ್ತಾರೆ, ಹಾಲಿನ ಸೊಸೈಟಿಯ ಮೇಲೆ ಹಾಗೂ ಶ್ರೀ ಎಸ್.ಎಸ್.ಪಾಟೀಲರ ಮಗನ ಮೇಲೆ ದ್ವೇಷ ಮಾಡುತ್ತಾರೆ, ಶಿವಪ್ಪನ ಮಗನ ಮೇಲೆ ಹಾಗೂ ಶ್ರೀನಿವಾಸಗೌಡರ ಮೇಲೆ ದ್ವೇಷ ಮಾಡುತ್ತಾರೆ ಎಂದು ಹೇಳುತ್ತಾರೆ. ನಾನು ಆ ಕೆಲಸವನ್ನು ಮಾಡಬೇಕೆಂದರೆ, ನನಗೆ ಅಧಿಕಾರ ಬಂದು ಒಂದು ತಿಂಗಳು ಸಾಕಾಗಿತ್ತು ಈ ಕಾಯಿದೆಯಡಿಯೊಳಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿತ್ತು. ನಾವು ಅವರು ತಿದ್ದಿಕೊಳ್ಳಲಿ ಎಂದು ಪ್ರಯತ್ನವನ್ನು ಪಟ್ಟೆವು. ಯಾವುದೋ ಮಿಲ್ಕ್ ಫೆಡರೇಷನ್ನಿನ ಬಗ್ಗೆ ಮೊನ್ನೆ ದಿನ ನನ್ನ ಸ್ನೇಹಿತರುಗಳು ಮಾತನಾಡಿಕೊಳ್ಳುತ್ತಿದ್ದರು. ಇದರ ಬಗ್ಗೆ ಮಾತನಾಡುವುದಕ್ಕೆ ಹೊರಟರೆ ಜಾಸ್ತಿ ರಾಜಕಾರಣವಾಗುತ್ತದೆ, ಇದರ ಬಗ್ಗೆ ಏನು ಕಾನೂನು ಮಾಡಬೇಕೆಂದು ನೀವೇ ಹೇಳಬೇಕು. ಒಂದು ಸಹಕಾರ ಸಂಸ್ಥೆಯವರು 4 ಕೋಟಿ

ರೂಪಾಯಿಗಳನ್ನು ಖರ್ಚುಮಾಡಿ ಒಂದು ಫ್ಯಾಕ್ಟರಿಯನ್ನು ಪ್ರಾರಂಭಿಸುತ್ತಾರೆ, ನಮ್ಮ ಹತ್ತಿರ, ರೈತರ ಹತ್ತಿರ, ಸೊಸೈಟಿಯವರ ಹತ್ತಿರ ಹಾಗೂ ಸದಸ್ಯರಿಂದ ಹಣವನ್ನು ತೆಗೆದುಕೊಳ್ಳುತ್ತಾರೆ. ಇವತ್ತು ಫ್ಯಾಕ್ಟರಿ ಉದ್ಘಾಟನೆಯಾಗುತ್ತದೆ. ಇವತ್ತಿನ ದಿವಸ ಸಹಕಾರ ಸಂಘದ ಒಂದು ಕೈಗಾರಿಕೆ ಪ್ರಾರಂಭವಾದ ಮಾರನೆಯ ದಿವಸವೇ ಇದನ್ನು ಬೇರೊಬ್ಬರಿಗೆ ಲೀಸ್ ಕೊಡುತ್ತಾರೆ. ಇದಕ್ಕೇನು ಸರ್ಕಾರದ ಅನುಮತಿ ಬೇಕಾಗಿಲ್ಲ. ಲೀಸ್ ತೆಗೆದುಕೊಂಡಿರುವವನಿಗೆ ಈ ಕೈಗಾರಿಕೆಯಿಂದ 1.5 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ. ಆದರೆ, ಲೀಸ್ ಕೊಟ್ಟರತಕ್ಕಂಥವನು ಈ ನಷ್ಟವನ್ನು ತುಂಬಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಯಾವ ಕಾನೂನಿನ ಅಡಿಯಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥಾದ್ದನ್ನು ತಾವು ಹೇಳಬೇಕು. ಇಂಥ ವ್ಯವಹಾರದಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳೇ ಸೇರಿದ್ದಾರೆ. ಈ ಸಂದರ್ಭದಲ್ಲಿ ಯಾರ ಹೆಸರನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹಾಗೆಯೇ ಸರ್ಕಾರ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಒಬ್ಬನಿಗೆ ಸರ್ಕಾರಿ ಜಮೀನನ್ನು ಕೊಟ್ಟಿರುತ್ತದೆ. ಸರ್ಕಾರಿ ಜಮೀನನ್ನು ಪಡೆದುಕೊಂಡಿದ್ದವನು ಬೇರೆಯವರಿಗೆ ಸದರಿ ಜಮೀನನ್ನು ಲೀಸ್ ಅಥವಾ ಮಾರಾಟ ಮಾಡುವಾಗ ಸರ್ಕಾರವನ್ನು ಕೇಳಬೇಕೇ ಅಥವಾ ಬೇಡವೇ? ಇಂಥ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಿಲ್ಲ. ಹಾಗೆಯೇ ಅಧಿಕಾರಿಗಳಿಗೆ ಬಡ್ತಿ ಕೊಡತಕ್ಕಂಥ ವಿಷಯವನ್ನು ಸಹ ಕೇಳುವುದಿಲ್ಲ. ಇವತ್ತಿನ ದಿವಸ ನಾವೆಲ್ಲಾ ಸಾಮಾಜಿಕ ನ್ಯಾಯದ ಬಗ್ಗೆ ಚಿಂತನೆ ಮಾಡುತ್ತೇವೆ. ಆದರೆ, ಇವತ್ತಿನ ದಿವಸ 100 ಜನರನ್ನು ನೇಮಕ ಮಾಡಿಕೊಳ್ಳುವ ಕಡೆ 150 ಜನರನ್ನು ನೇಮಕ ಮಾಡಿಕೊಳ್ಳುವುದು ಮತ್ತು ಒಂದೇ ತಾಲ್ಲೂಕಿನವರನ್ನೇ ನೇಮಕ ಮಾಡಿಕೊಳ್ಳತಕ್ಕಂಥಾದ್ದು ಆಗುತ್ತಿದೆ. ಈ ಸಂದರ್ಭದಲ್ಲಿ ಯಾರ ಹೆಸರನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಂಥವುಗಳಿಗೆಲ್ಲಾ ಎಲ್ಲಾದರೂ ಒಂದು ಕಡೆ ಅಂತ್ಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಸರ್ಕಾರ ನಮ್ಮ ಬಗ್ಗೆ ಚಿಂತನೆ ಮಾಡುತ್ತಿದೆ ಎನ್ನತಕ್ಕಂಥಾದ್ದರ ಬಗ್ಗೆ ನಾವು ಪ್ರಯತ್ನ ಮಾಡಬೇಕಲ್ಲವೇ? ಸನ್ಮಾನ್ಯ ಸಭಾಧ್ಯಕ್ಷರವರ ಜಿಲ್ಲೆಯಾದ ಕೋಲಾರ ಜಿಲ್ಲೆಯಲ್ಲಿ ಚಳುವಳಿ ಮಾಡತಕ್ಕಂಥ ಮತ್ತು ಕಷ್ಟಪಡತಕ್ಕಂಥ ಜನರು ಅಲ್ಲಿದ್ದಾರೆ. ನಿಮ್ಮ ಮನೆತನದವರು ಕ್ಷೀರ ಕ್ರಾಂತಿಯ ಬಗ್ಗೆ ಬಹಳಷ್ಟು ಹೋರಾಟ ಮಾಡಿದ್ದಾರೆ. ಕೋಲಾರ ಮಿಲ್ಕ್ ಯೂನಿಯನ್‌ರವರು 97 ಅಥವಾ 98 ರೂಪಾಯಿಗಳಿಗೆ ತಿರುಪತಿಗೆ ತುಪ್ಪವನ್ನು ಸರಬರಾಜು ಮಾಡುವುದಕ್ಕೆ ಒಂದು ಅಗ್ರಿಮೆಂಟ್‌ನ್ನು ಮಾಡಿಕೊಂಡು ಬಂದಿರುವಾಗ, ಮತ್ತೆ ಸ್ಟೇಟ್ ಲೆವೆಲ್ ಬಾಡಿಯವರು ತಿರುಪತಿಗೆ ಹೋಗಿ ಕೋಲಾರ ಮಿಲ್ಕ್ ಯೂನಿಯನ್‌ರವರು ಕೊಡುವುದಕ್ಕಿಂತ 1 ರೂಪಾಯಿ ಕಡಿಮೆ ಕೊಡುತ್ತೇವೆ ಎಂದು ಹೇಳಿ ಅವರ ಜೊತೆ ಇನ್ನೊಂದು ಅಗ್ರಿಮೆಂಟನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ, ಅಗ್ರಿಮೆಂಟ್ ಮಾಡಿಕೊಂಡು ಬಂದಂಥ ಎಂಡಿಯವರನ್ನು ಸಸ್ಪೆನ್‌ಷನ್ ಮಾಡುವಂಥ ಕೆಲಸ ಆಗಿದೆ. ನಿಮ್ಮಿಬ್ಬರ ಜಗಳ ಬೇಡವೆಂದು ತುಪ್ಪವನ್ನು ಸರಬರಾಜು ಮಾಡತಕ್ಕಂಥ ಗುತ್ತಿಗೆಯನ್ನು ಅವರು ಹೆರಿಟೇಜ್‌ರವರಿಗೆ ಕೊಡುತ್ತಿದ್ದಾರೆ. ಇದರಿಂದ ಯಾರಿಗೆ ನಷ್ಟವಾಗುತ್ತದೆ? ಇದರ ಬಗ್ಗೆ ಯಾರೂ ಪ್ರಶ್ನೆ ಮಾಡುವ ಹಾಗಿಲ್ಲವೇ? ನೀನು ತಪ್ಪು ಮಾಡುತ್ತಿದ್ದೀಯೆ ಎಂದು

ಹೇಳುವುದು ತಪ್ಪೇ? ಮೊನ್ನೆದಿವಸ ನಾನು ಮಾತನಾಡುವಂಥ ಸಂದರ್ಭದಲ್ಲಿ ನಮ್ಮ ಸ್ನೇಹಿತರು ಒಂದು ಸಹಕಾರ ಸಂಘದ ಕಟ್ಟಡದ ಬಗ್ಗೆ ಹೇಳಿದರು. ನಾನು ಕಟ್ಟಡವನ್ನು ಪರಿಶೀಲನೆ ಮಾಡುವುದಕ್ಕೆ ಹೋಗಿದ್ದೆ. ಅಲ್ಲಿ ಒಂದು ಸಹಕಾರ ಸಂಸ್ಥೆಗೆ ಒಂದು ಶೆಡ್ ಕಟ್ಟಿದ್ದಾರೆ. ಇವತ್ತಿನ ದಿವಸ ಒಂದು ಚದರ ಆರ್‌ಸಿಸಿ ಕಟ್ಟಡ ಕಟ್ಟುವುದಕ್ಕೆ ಸುಮಾರು 40 ಸಾವಿರ ರೂಪಾಯಿಗಳಾಗಬಹುದು. ಆದರೆ, ಅವರು 78 ಸಾವಿರ ರೂಪಾಯಿಗಳೆಂದು ತೋರಿಸಿದ್ದಾರೆ. ಹಾಗೆಯೇ ಒಂದು ಚದರ ಕಛೇರಿ ಕಟ್ಟಡಕ್ಕೆ ಟೀಕ್‌ವುಡ್ ಮರ ಹಾಕಿದರೂ ಸಹ ಸುಮಾರು 60 ಸಾವಿರ ರೂಪಾಯಿಗಳು ಖರ್ಚಾಗಬಹುದು. ಆದರೆ, ಅವರು 85 ಸಾವಿರ ರೂಪಾಯಿ ಒಂದು ಚದರಕ್ಕೆ ತೋರಿಸಿದ್ದಾರೆ. ಇವರನ್ನು ಯಾವ ಕಾಯಿದೆ ಅಡಿಯಲ್ಲಿ ನಾವು ಪ್ರಶ್ನೆ ಮಾಡಬೇಕೆಂದು ತಾವೇ ಹೇಳಬೇಕು? ನಾನು ರಾಜಕಾರಣ ಮಾಡತಕ್ಕಂಥದ್ದಾಗಲೀ ಅಥವಾ ಬೇರೆಯವರಿಗೆ ಕಷ್ಟ ಕೊಡತಕ್ಕಂಥಾದ್ದು ನನಗೆ ಇಷ್ಟವಿಲ್ಲ. ನಮ್ಮ ರಾಜ್ಯದ ಒಟ್ಟು ಜನತೆಯಲ್ಲಿ ಶೇಕಡ 32ರಷ್ಟು ಇರತಕ್ಕಂಥ ಸಹಕಾರಿಗಳ ಮತ್ತು ಡಿಪಾಸಿಟ್‌ರವರ ರಕ್ಷಣೆ ಈ ಸರ್ಕಾರ ಮಾಡದೇ ಇದ್ದರೆ ಮತ್ತು ಮೂಲಭೂತವಾಗಿ ಸಹಕಾರ ತತ್ವವನ್ನು ನಾವು ನೀವು ಉಳಿಸದೇ ಇದ್ದರೆ ಇನ್ಯಾರು ಉಳಿಸುವುದಕ್ಕೆ ಸಾಧ್ಯವಾಗುತ್ತದೆ? ಇವತ್ತಿನ ದಿವಸ ಖಾಸಗಿ ಸಂಸ್ಥೆಯವರು ನಡೆಸತಕ್ಕಂಥ ಕೈಗಾರಿಕೆಗಳೆಲ್ಲಾ ಲಾಭದಲ್ಲಿವೆ. ಆದರೆ ಸಹಕಾರ ಸಂಸ್ಥೆಗಳು ನಡೆಸತಕ್ಕಂಥ ಕೈಗಾರಿಕೆಗಳು ನಷ್ಟದಲ್ಲಿವೆ, ಏಕೆ? ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರತಕ್ಕಂಥ ಒಂದೆರಡು ಸಕ್ಕರೆ ಕಾರ್ಖಾನೆಗಳನ್ನು ಬಿಟ್ಟರೆ ಉಳಿದವೆಲ್ಲವೂ ಕೂಡ ಲಾಸ್‌ನಲ್ಲಿದೆ. ಹಾಗೆಯೇ ಟೆಕ್ಸ್‌ಟೈಲ್ಸ್ ಬಗ್ಗೆ ಹೇಳುವುದಾದರೆ, ಖಾಸಗಿಯಾಗಿ ಟೆಕ್ಸ್‌ಟೈಲ್ಸ್ ನಡೆಸತಕ್ಕಂಥವರು ಲಾಭ ಮಾಡುತ್ತಿರುವಾಗ, ಇದರ ಪಕ್ಕದಲ್ಲಿಯೇ ಇರತಕ್ಕಂಥ ಸಹಕಾರಿ ಟೆಕ್ಸ್‌ಟೈಲ್ಸ್‌ಗಳು ನಷ್ಟದಲ್ಲಿವೆ ಏಕೆ? ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಜನತಾ ಬಜಾರ್ ಕಟ್ಟಡವನ್ನು ಮಹಾರಾಜರು ಕೊಟ್ಟಿದ್ದಾರೆ. ಇವತ್ತಿನ ದಿವಸ ಇದು ಎಂಥ ಜಾಗದಲ್ಲಿದೆ ಎಂಬುದು ನಮಗೆಲ್ಲಾ ಗೊತ್ತಿದೆ. ಇವತ್ತಿನ ದಿವಸ ಇದನ್ನು ಬಾಡಿಗೆ ಕೊಟ್ಟರೆ ಕೋಟ್ಯಾಂತರ ರೂಪಾಯಿಗಳ ಬಾಡಿಗೆ ಬರುತ್ತದೆ. ಇದರ ಅಕ್ಕಪಕ್ಕದಲ್ಲಿ ವ್ಯಾಪಾರ ಮಾಡುವವರೆಲ್ಲಾ ಲಾಭಗಳಿಸುತ್ತಿರುವಾಗ ನಮ್ಮ ಜನತಾ ಬಜಾರ್ ಏಕೆ ನಷ್ಟದಲ್ಲಿದೆ? ಇದಕ್ಕೆ ಕಾರಣರು ಯಾರು? ಇದರ ಬಗ್ಗೆ ನಾವು ನೀವು ಪ್ರಶ್ನೆ ಮಾಡದೇ ಇದ್ದರೆ ಮತ್ತು ಇಲ್ಲಿನ ಅಧಿಕಾರಿಗಳ ಮೇಲೆ ಮತ್ತು ಆಡಳಿತ ಮಂಡಳಿಯ ಮೇಲೆ ನಾವೇನು ನಿಗಾ ಇಡದೇ ಇದ್ದರೆ ಹೇಗೆ? ಇಲ್ಲಿ ತೊಡಗಿಸಿರತಕ್ಕಂಥ ಹಣ ಯಾರದು? ಇದನ್ನು ರಕ್ಷಣೆ ಮಾಡತಕ್ಕಂಥವರು ಯಾರು? ನಾನೇನು ಹೊಸದಾಗಿ ಏನಾದರೂ ಕಾನೂನು ತಂದಿದ್ದರೆ ಅಥವಾ ರಾಜಕಾರಣ ಮಾಡಿದ್ದರೆ, ಇದಕ್ಕೆ ಸಂಬಂಧಪಟ್ಟಂತೆ ತಾವು ಏನೇ ಬುದ್ಧಿವಾದವನ್ನು ಹೇಳಿದರೂ ಕೂಡ ಅದನ್ನು ಕೇಳುವುದಕ್ಕೆ ನಾನು ತಯಾರಿದ್ದೇನೆ. ನನ್ನ ಸ್ನೇಹಿತರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ನನಗೊಂದು ಅರ್ಜಿ ಕೊಟ್ಟರು. ಅದೇನೆಂದರೆ, ಮ್ಯಾಂಕೋಸ್ ಎನ್ನತಕ್ಕಂಥ ಒಂದು ಸಂಸ್ಥೆ ಇದೆ. ಇದು ರಾಜ್ಯದಲ್ಲಿಯೇ ಅತ್ಯುತ್ತಮವಾದಂಥ ಒಂದು ಸಂಸ್ಥೆಯಾಗಿದೆ. ಷೇರು ಮಾರುಕಟ್ಟೆಯಲ್ಲಿ ಯಾವರೀತಿ ಟ್ರೇಡಿಂಗ್ ಮಾಡುತ್ತಾರೆಯೋ ಅದೇ ರೀತಿ ಅಡಿಕೆಗೆ ಸಂಬಂಧಪಟ್ಟಂತೆ ಇವರು ಟ್ರೇಡಿಂಗ್ ಮಾಡುತ್ತಾರೆ. ರೈತ ದೂರವಾಣಿ ಮಾಡಿ ಕೇಳಿದರೆ

ಇವತ್ತಿನದಿವಸ ಇಷ್ಟು ರೇಟ್ ಇದೆ, ತಾವು ಮಾರುವುದಾದರೆ ಬಂದು ಮಾರಬಹುದು ಎಂದು ಹೇಳುತ್ತಾರೆ. ಖರೀದಿ ಮಾಡಿದ ಮಾರನೇ ದಿವಸವೇ ಹಣ ಕೊಡತಕ್ಕಂಥ ವ್ಯವಸ್ಥೆ ಇದೆ. ಈ ಸಂಸ್ಥೆಗೆ ಡಿ.ಸಿಯವರನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಆದರೆ ಈಗ ಅಲ್ಲಿ ಮ್ಯಾನೇಜ್‌ಮೆಂಟ್‌ನವರೇ ಇರಬೇಕೆಂದು ಅಲ್ಲಿರತಕ್ಕಂಥವರು ಒಂದು ಕಾಯಿದೆ ಮಾಡಿದ್ದಾರೆ. ಆದರೆ ಅಲ್ಲಿರತಕ್ಕಂಥ ರೈತರೆಲ್ಲರೂ ಕೂಡ ನಮಗೆ ಡಿ.ಸಿ.ಯವರೇ ಛೇರ್ಮನ್ ಆಗಿರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಮಾನ್ಯ ಎಸ್.ಎಸ್.ಪಾಟೀಲ್‌ರವರು ಕಾಯಿದೆಯ ಪ್ರಕಾರ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಹಾಗೆಯೇ ಅಲ್ಲಿ ಸಹಕಾರ ಇಲಾಖೆಯವರು ಅಥವಾ ರೈತರೇ ಅಧ್ಯಕ್ಷರಾಗಿರಬೇಕಾಗುತ್ತದೆ. ನಾವು ಇಂಥ ಸಂದರ್ಭದಲ್ಲಿ ಯಾವ ಕಾಯಿದೆ ಅಡಿಯಲ್ಲಿ ಡಿಸಿಯವರು ಅಲ್ಲಿಯೇ ಉಳಿದುಕೊಳ್ಳುವುದಕ್ಕೆ ಹಾಗೆ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥಾದ್ದನ್ನು ತಾವೇ ಹೇಳಬೇಕು? ಇವತ್ತಿನ ದಿವಸ 121 ಕಾಯಿದೆ ಇಲ್ಲದೇ ಇದ್ದರೆ ಇದನ್ನು ಯಾವರೀತಿ ನಾನು ಮಾಡುವುದಕ್ಕೆ ಆಗುತ್ತದೆ? ಇಲ್ಲಿ ಛೇರ್ಮನ್ ಆಗಿ ಡಿ.ಸಿ.ಯವರೇ ಇರಬೇಕೆಂದು ಅಲ್ಲಿನ ಜನರು ಅಪೇಕ್ಷೆ ಮಾಡುವಾಗ ಆ ಜನರ ವಿರುದ್ಧ ನಾವು ನೀವು ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ಈಗಾಗಲೇ ಅಲ್ಲಿ ವೈಸ್ ಛೇರ್ಮನ್ ಆಗಿ ಒಬ್ಬ ರೈತನಿದ್ದಾನೆ. ಇನ್ನು ಮೈಸೂರಿನಲ್ಲಿರತಕ್ಕಂಥ ಫಿಷ್ ಫೆಡರೇಷನ್ ಬಗ್ಗೆ ಹೇಳುವುದಾದರೆ, ನಾಲ್ಕು ಟ್ಯಾಂಕ್‌ಗಳಲ್ಲಿ 17 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಸುಮಾರು 73 ಲಕ್ಷ ಮೀನಿನ ಮರಿಗಳನ್ನು ಸದರಿ ಟ್ಯಾಂಕ್‌ಗಳಲ್ಲಿ ಬಿಟ್ಟಿದ್ದಾರೆ. ಇದರಲ್ಲಿ ಕೊನೆಗೆ ಸುಮಾರು 10 ಲಕ್ಷ ಮರಿಗಳು ಉಳಿಯಬಹುದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಬೇಡಿಕೆ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ತಾವು ನನಗೆ ಹೆಚ್ಚಿನ ಅವಕಾಶ ಕೊಡಲಿಲ್ಲ. ಮಾನ್ಯ ಸಚಿವರು ಹೇಳುವುದೆಲ್ಲಾ ಸತ್ಯವಾಗಿದೆ. ಇಲ್ಲವೆಂದು ನಾನೇನೂ ಹೇಳುವುದಿಲ್ಲ. ಇದು ಯಾವಾಗಿನಿಂದ ಪ್ರಾರಂಭವಾಗಿದೆ ಎನ್ನುವುದರ ಹಿನ್ನಲೆಯನ್ನೂ ಕೂಡ ನಾವು ನೋಡಬೇಕಾಗುತ್ತದೆ. ಈ ಸಹಕಾರಿ ಸಂಸ್ಥೆಗಳು ಪ್ರಾರಂಭವಾದಂಥ ಸಂದರ್ಭದಲ್ಲಿ ಚುನಾವಣೆಗೆ ಯಾರೂ ಬರುತ್ತಿರಲಿಲ್ಲ. ಹಾಗೆಯೇ ಅಧಿಕಾರಿಗಳನ್ನು ನೇಮಿಸುವುದಕ್ಕೆ ಯಾರೂ ಬರುತ್ತಿರಲಿಲ್ಲ. ಜನರಲ್ ಬಾಡಿ ತೀರ್ಮಾನದ ಪ್ರಕಾರ ಸಂಬಳವನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡತಕ್ಕಂಥಾದ್ದು ಮತ್ತು ಬೇಕಾದವರನ್ನು ಇಟ್ಟುಕೊಳ್ಳುವುದು ಅಥವಾ ಬೇಡವಾದವರನ್ನು ತೆಗೆಯುತ್ತಿದ್ದರು. ಹಾಗೆಯೇ ಚುನಾವಣೆಗಳನ್ನು ಕೂಡ ಅವರೇ ಸೇರಿಕೊಂಡು ಮಾಡುತ್ತಿದ್ದರು. ಮುಂದೆ ಇದಕ್ಕೆಲ್ಲಾ ಕಾಯಿದೆ ತಂದು ಸರ್ಕಾರದ ಹಸ್ತಕ್ಷೇಪ ಯಾವಾಗಿನಿಂದ ಪ್ರಾರಂಭವಾಯಿತೋ ಆಗ ಜನರಲ್ ಬಾಡಿಗೆ ಇರತಕ್ಕಂಥ ಅಧಿಕಾರ ಹೋಯಿತು. ಇದಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳ ಹತ್ತಿರ ಬಂದು ಪರ್ಮಿಷನ್ ತೆಗೆದುಕೊಂಡಿರತಕ್ಕಂಥವರು ಇದ್ದಾರೆ. ಬೇಕಾದರೆ ಇದನ್ನು ತಾವು ಪರಿಶೀಲನೆ ಮಾಡಿ ನೋಡಬಹುದು. ಇವೆಲ್ಲಾ ಸರ್ಕಾರದ ಹಸ್ತಕ್ಷೇಪದಿಂದ ಆಗುತ್ತಿದೆ. ಇದನ್ನು ಮೊದಲು ಇದ್ದಂಥ ಪರಿಸ್ಥಿತಿಯಲ್ಲಿಯೇ ನಾವು ಬಿಟ್ಟು

ಅವರು ತಮ್ಮ ಸ್ವಂತ ಬಂಡವಾಳವನ್ನು ಕೂಡಿಸಿಕೊಳ್ಳುವುದಕ್ಕೆ ನಾವು ಅವಕಾಶ ಕೊಟ್ಟರೆ ಮಾತ್ರ ಅವು ನಿಶ್ಚಿತವಾಗಿ ಇರುತ್ತಿದ್ದವು. ಟೆಕ್ಸ್‌ಟೈಲ್ಸ್ ಮಿಲ್‌ಗಳು ಹಾನಿಯಲ್ಲಿ ಇವೆ ಎಂದು ಮಾನ್ಯ ಸಚಿವರು ಹೇಳಿದ ಹಾಗೆ ಇವು ನಿಜವಾಗಿಯೂ ಕೂಡ ಹಾನಿಯಲ್ಲಿವೆ. ಆದರೆ, ಇವತ್ತಿನ ದಿವಸ ಖಾಸಗಿಯವರ ಟೆಕ್ಸ್‌ಟೈಲ್ ಮಿಲ್‌ಗೂ ಮತ್ತು ಸಹಕಾರ ಟೆಕ್ಸ್‌ಟೈಲ್ಸ್ ಮಿಲ್‌ಗೂ ಸಾಕಷ್ಟು ಅಂತರವಿದೆ. ನಮ್ಮವರು ಪ್ರಾರಂಭ ಮಾಡುವಂಥ ಸಮಯದಲ್ಲಿ ಅವರಿಗೆ ಸರಿಯಾಗಿ ನಾವು ಹಣವನ್ನು ಬಿಡುಗಡೆ ಮಾಡಿಲ್ಲ. ಇದರಿಂದ ಪ್ರಾರಂಭದಲ್ಲಿಯೇ ಇವರಿಗೆ ತೊಂದರೆಯಾಗಿದೆ. ಖಾಸಗಿಯವರು ಇವತ್ತಿನ ದಿವಸ ನಂಬರ್ ಟೂ ಮಾಡುತ್ತಾರೆ. ಆದರೆ ಇದನ್ನು ಇವರು ಮಾಡುವುದಕ್ಕೆ ಖಂಡಿತ ಆಗುವುದಿಲ್ಲ. ಎಲ್ಲಾ ಸಹಕಾರಿ ಸಂಸ್ಥೆಗಳು ಸರಿಯಾಗಿ ನಡೆಯುತ್ತಿವೆ ಎಂದು ನಾನು ಹೇಳುವುದಿಲ್ಲ. ನಮ್ಮಲ್ಲಿಯೂ ಕೂಡ ಸಾಕಷ್ಟು ದೋಷಗಳಿವೆ. ಸರ್ಕಾರದ ಹಸ್ತಕ್ಷೇಪ ಮಾಡಿದಾಗ ಮತ್ತು ಜನರಲ್ ಬಾಡಿಯ ಅಧಿಕಾರವನ್ನು ಕಸಿದುಕೊಂಡಂಥ ಸಂದರ್ಭದಲ್ಲಿ ಬೋರ್ಡ್‌ನವರು ಜನರಲ್ ಬಾಡಿ ತೀರ್ಮಾನವನ್ನು ಕೇಳುವುದಿಲ್ಲ. ಅವರು ವರ್ಷಕ್ಕೊಂದು ಸಾರಿ ಸಭೆ ಕರೆದು ಹೋಗುತ್ತಾರಷ್ಟೆ. ಸರ್ಕಾರದ ಹತ್ತಿರ ಬಂದು ಪರ್ಮಿಷನ್ ತೆಗೆದುಕೊಂಡು ಏನು ಬೇಕಾದರೂ ಮಾಡುತ್ತಾರೆ. ಆದರೆ, ಜನರಲ್ ಬಾಡಿಗೆ ಸಂಪೂರ್ಣವಾದ ಅಧಿಕಾರ, ಸ್ವಾಯತ್ತತೆಯನ್ನು ನಾವು ಕೊಟ್ಟರೆ ಇದು ಕಡಿಮೆಯಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಅರ್ಬನ್ ಬ್ಯಾಂಕ್‌ಗೆ ಸ್ವಾಯತ್ತತೆ ಕೊಟ್ಟಿರುವುದರಿಂದ ಇವತ್ತು ಸದರಿ ಬ್ಯಾಂಕ್‌ಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಆದರೆ, ಎಲ್ಲಿ ಸರ್ಕಾರದ ಹಸ್ತಕ್ಷೇಪ ಇದೆಯೋ ಅಂಥ ಕಡೆ ಮಾತ್ರ ಚೆನ್ನಾಗಿ ನಡೆಯುತ್ತಿಲ್ಲ. ಇಡೀ ರಾಷ್ಟ್ರದ ಮಟ್ಟದಲ್ಲಿಯೇ ಇದರ ಬಗ್ಗೆ ಚಿಂತನೆ ಮಾಡಬೇಕು. ಪುನಃ ನಾವು ಸ್ವಾಯತ್ತತೆ ಕೊಡಬೇಕೆಂಬ ದೃಷ್ಟಿಯಿಂದ ಹಳೆ ಸಹಕಾರಿಗಳು ಮತ್ತು ವಿದ್ವಾಂಸರೆಲ್ಲರೂ ಕೂಡ ಈ ತತ್ವಕ್ಕೆ ಅಂಟಿಕೊಂಡು ಇದನ್ನು ಹಂತಹಂತವಾಗಿ ಫ್ರೀಯಾಗಿ ಬಿಡಬೇಕೆಂದು ಚಿಂತನೆ ಮಾಡಿದ್ದೆವು. ಹಂತಹಂತವಾಗಿ ನಮ್ಮ ಷೇರನ್ನು ಮತ್ತು ಸಾಲವನ್ನು ವಾಪಸ್ಸು ತೆಗೆದುಕೊಂಡು ಅವರು ಸ್ವತಂತ್ರವಾಗಿ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಒಂದು ಇಚ್ಛೆಗೆ ಹೋಗಬೇಕೆಂಬುದೇ ಈ ಸಹಕಾರಿ ಉದ್ದೇಶವಾಗಿದೆ. ಈ ಒಂದು ಕಾರಣದಿಂದ ನಾವು ಹಂತಹಂತವಾಗಿ ಬಿಟ್ಟು ಕೊಡುತ್ತಾ ಹೋಗಬೇಕೇ ಹೊರತು ಹಿಡಿತ ಇಟ್ಟುಕೊಳ್ಳುತ್ತಾ ಹೋಗುವುದು ಸರಿಯಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ನಾಲ್ಕು ಕೆರೆಗೆ ಸುಮಾರು 73 ಲಕ್ಷ ಮೀನಿನ ಮರಿಗಳನ್ನು ಬಿಟ್ಟಿದ್ದಾರೆ. ಇದರಲ್ಲಿ ಸುಮಾರು 10 ಲಕ್ಷ ಮೀನಿನ ಮರಿಗಳು ಕೊನೆಗೆ ಉಳಿಯಬಹುದು. ಇದರಿಂದ ನಮಗೆ 2.5 ಕೋಟಿ ರೂಪಾಯಿಗಳು ಸಿಗುತ್ತದೆ. ಆದ್ದರಿಂದ ಸರ್ಕಾರದವರು ಇಷ್ಟು ಸಹಾಯ ಮಾಡಬೇಕೆಂದು ಒಂದು ಪ್ರಾಜೆಕ್ಟ್ ಕೊಡುತ್ತಾರೆ. ಇವತ್ತಿನ ದಿವಸ 10 ಲಕ್ಷ ಮೀನುಗಳಿಂದ ಸುಮಾರು 10076 ಟನ್ ಆಗುತ್ತದೆ. ಇದರಿಂದ ಸುಮಾರು 2.25 ಕೋಟಿ ರೂಪಾಯಿಗಳು ಬರಬಹುದು. ಆದರೆ 15 ಲಕ್ಷ

ರೂಪಾಯಿಗಳು ಇದರಿಂದ ಬಂದಿದೆ ಎಂದು ಲೆಕ್ಕ ಕೊಟ್ಟಿದ್ದಾರೆ. 1 ಕೋಟಿ 85 ಲಕ್ಷ ರೂಪಾಯಿಗಳು ಎಲ್ಲಿಗೆ ಹೋಯಿತು? ಇದು ನಮ್ಮ ಇಲಾಖೆ ಕೊಟ್ಟಿರತಕ್ಕಂಥ ವರದಿ. ಇದಕ್ಕೆ ಸಂಬಂಧಪಟ್ಟವರಿಗೆ ನಾವು ಪ್ರಶ್ನೆ ಮಾಡಬಾರದೆ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಫಿಷರೀಸ್ ಫೆಡರೇಷನ್‌ಗೆ ನಾನು ಅಧ್ಯಕ್ಷ ಆಗಿದ್ದಂಥ ಸಂದರ್ಭದಲ್ಲಿ, ಈಗ ಫ್ರೀ-ಯೂನಿವರ್ಸಿಟಿ ಡೈರೆಕ್ಟರ್ ಆಗಿರತಕ್ಕಂಥ ಶ್ರೀ ರಾಮ್‌ಪ್ರಸಾದ್‌ರವರು ಇಲ್ಲಿ ಎಂ.ಡಿ. ಆಗಿದ್ದರು. ಆಗ ಇದು ಲಾಭದಲ್ಲಿ ನಡೆಯುತ್ತಿತ್ತು. ಹಿಡಿತವಿತ್ತು, ಮೀನುಮರಿಗಳ ಉತ್ಪಾದನೆಯನ್ನು ಇಲ್ಲಿ ಮಾಡುತ್ತಿಲ್ಲ. ಹೊರ ರಾಜ್ಯದಿಂದ ತಂದು ಎಷ್ಟು ಬಿಡುತ್ತಾರೆ ಎಷ್ಟು ಬಿಟ್ಟಿಲ್ಲವೆಂಬ ಬಗ್ಗೆ ಲೆಕ್ಕವಿಲ್ಲ. ಮೀನು ಮರಿಗಳನ್ನು ತೆಗೆದುಕೊಂಡು ಹೋಗಿ ನೀರಿಗೆ ಹಾಕುತ್ತಾರೆ. ಇದನ್ನು ಲೆಕ್ಕ ಇಡದಿದ್ದರೆ ಅಲ್ಲಿ ಸರಿಯಾದ ಅಧಿಕಾರಿ ಇಲ್ಲದಿದ್ದರೆ, ಅದು ಸರ್ಕಾರದ ಹಿಡಿತದಲ್ಲಿ ಇಲ್ಲದಿದ್ದರೆ ಮಂತ್ರಿಗಳು ಏನು ಮಾಡುತ್ತಾರೆ? ಅದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕಾಗಿತ್ತು.

ಶ್ರೀ ಡಿ.ಕೆ.ಶಿವಕುಮಾರ್: ಹೀಗೆ ಮಿಸ್‌ಯೂಸ್ ಮಾಡತಕ್ಕ ಸಂಸ್ಥೆಗಳಿಗೆ ಅಧಿಕಾರಿಗಳಿಗೆ ಯಾವ ಕಾಯಿದೆಯಡಿ ಶಿಕ್ಷೆ ಮಾಡಬೇಕೆಂಬುದನ್ನು ನೀವು ಹೇಳಿ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಅದನ್ನು ನೋಡದಿದ್ದರೆ ಈ ಪರಿಸ್ಥಿತಿ ಬರುತ್ತದೆ. ಎಲ್ಲಾ ಇಲಾಖೆಗಳಲ್ಲಿ ಆಯಾಯ ಇಲಾಖೆಯ ಮಂತ್ರಿಗಳು ಹಿಡಿತದಲ್ಲಿಟ್ಟುಕೊಂಡಾಗ ಎಲ್ಲವೂ ಸರಿಯಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಎಲ್ಲವನ್ನೂ ಬೋರ್ಡ್‌ನವರು ಮಾಡುವುದಕ್ಕಾಗುವುದಿಲ್ಲ. ಅಲ್ಲಿದ್ದಂತಹ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಯಾರಿರಬೇಕೆಂದರೆ ಅಲ್ಲಿ ಅವರು ದುಡಿದು ಲಾಭ ಮಾಡಿ ಪಗಾರ ತೆಗೆದುಕೊಳ್ಳುವ ಹಾಗೆ ಇರಬೇಕು. ಅಂತಹವರು ಇದ್ದರೆ ಅವರು ದುಡಿಯುತ್ತಾರೆ. ನಾವೇನು ಮಾಡುತ್ತೇವೆ ಇಲ್ಲಿಂದ ಹಾಕುತ್ತೇವೆ, ಒಂದೆರಡು ತಿಂಗಳು ಇದ್ದು ವರ್ಗ ಮಾಡಿಸಿಕೊಂಡು ಹೋಗುತ್ತಾರೆ. ಕೆಲವರು ಒಳ್ಳೆಯವರು ಇದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಎಲ್ಲರೂ ಕೆಟ್ಟವರು ಇದ್ದಾರೆಂದು ಹೇಳುವುದಿಲ್ಲ. ಇವತ್ತು ಬಹುಸಂಖ್ಯಾತರು ಇರುವ ಕೆಲವು ಸಂಸ್ಥೆಗಳಲ್ಲಿ ಅವು ಅವರಿಂದ ಹಾಳಾಗಿವೆ. ಅವರು ಕೆಲಸವನ್ನೇ ಮಾಡುವುದಿಲ್ಲ. ಏಕೆಂದರೆ ಅವರು ಒಂದೆರಡು ವರ್ಷದಲ್ಲಿ ವರ್ಗ ಮಾಡಿಸಿಕೊಂಡು ಹೋಗಿಬಿಡುತ್ತಾರೆ. ಅದರ ಮೇಲೆ ದುಡಿದು ಬದುಕುವವ ಇದ್ದರೆ ಅವನು ಕಷ್ಟಪಡುತ್ತಾನೆ. ಈ ದೃಷ್ಟಿಯಿಂದ ನಾನು ಹೇಳಿದ್ದು ಅಷ್ಟೆ.

ಶ್ರೀ ಡಿ.ಕೆ.ಶಿವಕುಮಾರ್: ನಾನು ಬಹಳ ಕಷ್ಟಪಟ್ಟು ಎಲ್ಲವನ್ನೂ ನೋಡಿದ್ದೇನೆ. ಇದೊಂದು ಟ್ರಾಕ್‌ನಲ್ಲಿ ಇರಲಿ, ಸರ್ಕಾರ ಇದೆಯೆನ್ನುವ ಭಯ ಇರಲಿ ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ಯಾರಾದರೂ ತಪ್ಪು ದಾರಿಗೆ ಹೋದರೆ ನಮ್ಮನ್ನು ಕೇಳುವವರು ಇದ್ದಾರೆ ಎಂದು ಮಾಡಿದ್ದೇವೆ.

ನಮ್ಮ ಆಡಿಟ್‌ನವರು ಎಲ್ಲವನ್ನೂ ಮಾಡಿದ್ದಾರೆ. ಹತ್ತು ವರ್ಷದ್ದು ಅಕೌಂಟ್ಸ್ ತರಿಸಿದರೆ 2,651 ಲಕ್ಷ ರೂಪಾಯಿ ಅಂದರೆ 26 ಕೋಟಿಯಷ್ಟು ಮಿಸ್‌ಯೂಸ್ ಆಗಿದೆಯೆಂದು ಬಂದಿದೆ. ಇದು ಸುಮಾರು ಹತ್ತು ವರ್ಷಕ್ಕೆ. ಇದನ್ನು ರಿಕವರಿ ಮಾಡುವುದು ಯಾವಾಗ? ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್ ಹೀಗೆ ಪ್ರತಿಯೊಂದು ಹಂತದಲ್ಲೂ ಹೋಗಿ ಯಾರನ್ನಾದರೂ ಒಬ್ಬರನ್ನು ನಮ್ಮ ಕೋ-ಆಪರೇಟಿವ್ ಆಕ್ಟ್‌ನಲ್ಲಿ ಜೈಲಿಗೆ ಕಳುಹಿಸಿದ್ದೇವೆಯೇ? ಯಾವುದಾದರೂ ನಿಮ್ಮ ಅನುಭವದಲ್ಲಿದ್ದರೆ ಹೇಳಿ. ಇಷ್ಟೆಲ್ಲಾ ತಿಂದಿರುವವರನ್ನು ಇವರ ಕಡೆಯಿಂದ ಹಣವನ್ನು ವಾಪಸ್ಸು ಕಟ್ಟಿಸಿಕೊಳ್ಳುವುದು ಯಾವಾಗ?

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 53, 54 ವರ್ಷಗಳಾದರೂ ಕೂಡ ಸಹಕಾರ ಕ್ಷೇತ್ರದಲ್ಲಿ ಶೇಕಡ ಮೂರರಷ್ಟು ಈ ದೇಶದಲ್ಲಿ ಮಿಸ್ ಅಪ್ಲಿಕೇಶನ್ ಮಿಸ್ ಅಪ್ರೋಪ್ರಿಯೇಷನ್ ಎಂದು ನೀವೇನು ಇಷ್ಟು ದೊಡ್ಡ ಭಾಷಣ ಮಾಡುತ್ತೀರಲ್ಲಾ ಇದೆಲ್ಲಾ ಆಗಿರುವುದು ಮೂರು ಪರ್ಸೆಂಟ್. ನೀವು ಪಬ್ಲಿಕ್ ಸೆಕ್ಟಾರ್ ತೆಗೆಯಿರಿ, ನಿಮ್ಮ ಪ್ರೈವೇಟ್ ಸೆಕ್ಟಾರ್ ತೆಗೆಯಿರಿ, 70 ಸಾವಿರ ಕೋಟಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಇಲ್ಲಿ ಏಕೆ ಇಷ್ಟು ಹೇಳುವುದು? ಇಲ್ಲಿ ನಾವೆಲ್ಲರೂ ಶಾಸಕರು 225 ಜನರು ಇದ್ದೇವೆ. ಸಹಕಾರಿ ವ್ಯವಸ್ಥೆಯಲ್ಲಿ ಒಂದೋ ಎರಡೋ ತಪ್ಪು ಮಾಡುತ್ತಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ಐದು ಬೆರಳು ಒಂದೇ ಸಮ ಇರುವುದಿಲ್ಲ. ನಾವು 225 ಜನ ಸತ್ಯಹರಿಶ್ಚಂದ್ರರಾ? ನಾವು ಓಪನ್ ಆಗಿ ಮಾತನಾಡಬೇಕು. ಇಲ್ಲಿರತಕ್ಕವರು ನಾವೆಲ್ಲರೂ ಸತ್ಯ ಹರಿಶ್ಚಂದ್ರರು ಅಂದರೆ ಸಹಕಾರಿ ವ್ಯವಸ್ಥೆಯಲ್ಲಿ ನೀವು ಹಾಗೆಯೇ ಇರಬೇಕೆಂದು ಹೇಳಬಹುದು. ಇದು ವ್ಯವಸ್ಥೆಯ ರೀತಿ. ಈ ವ್ಯವಸ್ಥೆಯ ರೀತಿಯಲ್ಲಿ ಒಂದೆರಡು ತಪ್ಪುಗಳು ಆಗುತ್ತವೆ. ಅದಕ್ಕೆ ದೊಡ್ಡ ಲೇಪ ಹಾಕುವುದು ಬೇಡವೆನ್ನುವುದು ನನ್ನ ಅನಿಸಿಕೆ. ಮಾನ್ಯ ಅಧ್ಯಕ್ಷರೇ, ನೀವು ಸಹಕಾರಿಗಳಾಗಿದ್ದವರೇ. ಇಲ್ಲಿ ಏನಾಗುತ್ತದೆಂದರೆ ಇಷ್ಟಾದರೂ ಕೂಡ ಕೇವಲ 3 ಪರ್ಸೆಂಟ್ ಏಕೆ ಹಾಗಾದರೆ? ಜಾಸ್ತಿ ಏತಕ್ಕೆ ಮಿಸ್‌ಯೂಸ್ ಆಗುವುದಿಲ್ಲ? ಇಲ್ಲಿ ಏಕೆ 75 ಸಾವಿರ ಕೋಟಿ ದುರುಪಯೋಗವಾಯಿತು? ಇಲ್ಲಿರುವ ವ್ಯತ್ಯಾಸ ಇಷ್ಟೆ.

ಶ್ರೀ ಎಸ್.ಎಸ್.ಪಾಟೀಲ್: ಆ ರೀತಿಯಿಂದ ನಾವು ಉಳಿದ ಸೆಕ್ಟಾರ್ ನೋಡಿದರೆ ಖಂಡಿತವಾಗಿ ಸಹಕಾರಿ ಸೆಕ್ಟಾರ್ ಬಹಳ ಚೆನ್ನಾಗಿದೆ. ದೋಷಗಳಿವೆ ಅದು ಆಗಬಾರದು. ಮೂರು ಪರ್ಸೆಂಟ್ ಸಹ ಆಗಬಾರದು ಎನ್ನುವ ಪೈಕಿ ನಾನು. ಅದನ್ನು ತಡೆಹಿಡಿಯೋಣ. ಇಷ್ಟು ದೊಡ್ಡ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ 15-20 ಸಾವಿರ ಕೋಟಿ ವ್ಯವಹಾರ ಮಾಡುವ ಮುನ್ನ ನೂರು, ಇನ್ನೂರು ಕೋಟಿ ದುರುಪಯೋಗವಾಗಿರಬಹುದು. ನೀವು ಹೇಳಿದ ಹಾಗೆ 25, 30, 40 ಕೋಟಿ ಆಗಿರಬಹುದು, ಅದನ್ನು ಇಲ್ಲವೆನ್ನುವುದಿಲ್ಲ. ಅದು ಆಗಬಾರದು, ಆಗದಹಾಗೆ ನೋಡಿಕೊಳ್ಳಬೇಕು. ಅದನ್ನು ನೋಡಿಕೊಳ್ಳಲಿಕ್ಕೆ ಹಲವಾರು ಕಾಯಿದೆಗಳಿವೆ. ಈಗ ಯಾವರೀತಿ ಗ್ರಾಮಸಭಾಕ್ಕೆ ಅಧಿಕಾರ ಕೊಟ್ಟಿದ್ದೇವೆ, ಅದೇ ರೀತಿಯಲ್ಲಿ ಜನರಲ್

ಬಾಡಿಗಳು ಇವೆ. ಗ್ರಾಮಸಭಾದಲ್ಲಿ ಬೇರೆಯವರ ದುಡ್ಡು, ಅಲ್ಲಿ ಅವರದೇ ದುಡ್ಡು ಹಾಕಿರುತ್ತಾರೆ. ಅವರೇ ಷೇರ್ ಹಾಕಿರುತ್ತಾರೆ. ಆ ಕಾರಣದಿಂದ ಅವರಿಗೆ ಅಧಿಕಾರ ಬಿಟ್ಟುಕೊಡುವುದರಿಂದ ಹೆಚ್ಚು ದುರುಪಯೋಗವನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆನ್ನುವುದೇ ಸಹಕಾರಿ ತತ್ವದ ಉದ್ದೇಶ ಇರುವುದು.

ಶ್ರೀ ಡಿ.ಕೆ.ಶಿವಕುಮಾರ್: ಈಗ ನಮ್ಮ ಉದ್ದೇಶವೂ ಅಷ್ಟೆ. ಎರಡು ಪರ್ಸೆಂಟ್ ಮೂರು ಪರ್ಸೆಂಟ್ ಯಾವುದೋ ಸಂಸ್ಥೆಯಲ್ಲಿ ಯಾರೋ ಮಾಡುತ್ತಾರೆಂದು, ಬೇರೆ ಸೆಕ್ಟಾರ್‌ನಲ್ಲಿ ಜಾಸ್ತಿಯಿದೆ. ಈ ಸೆಕ್ಟಾರ್‌ನಲ್ಲಿ ಕಡಿಮೆಯಿದೆ ಎಂದು ಅದನ್ನು ನಾನು ಹೋಲಿಕೆ ಮಾಡುವುದಕ್ಕೆ ತಯಾರಿಲ್ಲ. ನಾನು ಸಹಕಾರ ಮಂತ್ರಿಯಾಗಿ ಮಾತನಾಡುತ್ತಿದ್ದೇನೆ. ಸಹಕಾರ ಮಂತ್ರಿಯಾಗಿ ಸರ್ಕಾರದ ಪರವಾಗಿ ಈ ತತ್ವವನ್ನು ಉಳಿಸಲಿಕ್ಕೆ ಏನು ಮಾಡಲಿಕ್ಕೆ ಸಾಧ್ಯ ಆ ದಿಕ್ಕಿನಲ್ಲಿ ಯೋಚನೆ ಮಾಡುತ್ತೇನೆ. ಬೇರೆ ಬೇರೆ ಕಡೆ ಎಕ್ಸೈಜ್, ಇಂಡಸ್ಟ್ರೀಸ್‌ನಲ್ಲಿ ಏನು ಆಗುತ್ತದೋ ಫ್ಯಾಕ್ಟರಿಗಳಲ್ಲಿ ಏನು ಆಗುತ್ತದೊ ಅದೆಲ್ಲಾ ಚರ್ಚೆ ಮಾಡುವುದಿಲ್ಲ. ಆದರೆ ನನ್ನದು ಏನು ಜವಾಬ್ದಾರಿಯಿದೆ ಅದನ್ನು ಮಾಡುವ ಮಟ್ಟದಲ್ಲಿದ್ದೇನೆ. ಒಂದು ಡಿಸಿಸಿ ಬ್ಯಾಂಕು 1995-96ರಲ್ಲಿ 35 ಕೋಟಿ ರೂಪಾಯಿಗಳನ್ನು ರೈತರಿಗೆ ಸಾಲ ಕೊಡುತ್ತದೆ. ಇವತ್ತು ನಾವು 2001ರಲ್ಲಿದ್ದೇವೆ. ಆರು ವರ್ಷಗಳಾಗಿದೆ. ಸಾಲ ತೆಗೆದುಕೊಂಡಂತಹ ರೈತರಲ್ಲಿ ಶೇಕಡ 80ರಷ್ಟು ರೈತರು ಇವತ್ತಿನವರೆಗೂ ಸಾಲವನ್ನು ಒಂದು ರೂಪಾಯಿಯಷ್ಟು ಸಹ ಕಟ್ಟಿಲ್ಲ. 1996-97ಕ್ಕೆ ಅವರಿಗೆ ಇನ್ನು 10 ಪರ್ಸೆಂಟ್ ಸೇರಿಸಿ ಸಾಲ ಕೊಡುವುದು ಅಲ್ಲಿ ಬುಕ್ ಅಡ್ಜೆಸ್ಟ್‌ಮೆಂಟ್ 1997-98ಕ್ಕೆ ಇನ್ನು 10 ಪರ್ಸೆಂಟ್, 1998-99ಕ್ಕೆ ಇನ್ನು 10 ಪರ್ಸೆಂಟ್ 1999-2000ಕ್ಕೆ ಇನ್ನು 10 ಪರ್ಸೆಂಟ್ ಹೀಗಾಗಿ 105-110 ಕೋಟಿ ಆಗಿದೆ. ಇವತ್ತು ಆ ಬ್ಯಾಂಕು ಮತ್ತು ಜಿಲ್ಲೆಯ ಪರಿಸ್ಥಿತಿ ಹೇಗಾಗಿದೆ ಅಂದರೆ ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ. ಕೊಟ್ಟ ಸಾಲವನ್ನು ಸರಿಯಾಗಿ ವಸೂಲಿ ಮಾಡಲಿಲ್ಲ. ಪಾಪ, ಆ ಜಿಲ್ಲೆಯ ರೈತರಿಗೆ ಯಾರೂ ಸಾಲ ಕೊಡಲಿಕ್ಕೆ ಮುಂದೆ ಬರುತ್ತಿಲ್ಲ. ನಬಾರ್ಡ್‌ನವರು ಸಾಲ ಕೊಡಲಿಕ್ಕೆ ಮುಂದೆ ಬರುತ್ತಿಲ್ಲ. ಅಫೆಕ್ಸ್ ಬ್ಯಾಂಕಿನವರು ಮುಂದೆ ಬರುತ್ತಿಲ್ಲ. ಇಂತಹ ಒಂದು ಪರಿಸ್ಥಿತಿಯಾಗುತ್ತಿದೆ. ಆದ್ದರಿಂದ ನಾನು ಇದರ ಬಗ್ಗೆ ಬಿಡಿಸಿ ಹೇಳಬೇಕಾಗಿಲ್ಲ. ತಾವು ಐದು ವರ್ಷ ಏನೂ ಮಾಡಲಿಕ್ಕೆ ಆಗಲಿಲ್ಲವೆಂದು ತಾವೇ ಒಪ್ಪಿಕೊಂಡಿರಿ. ನಿಜ, ತಾವೇನು ಮಾಡಿದಿರಿ ನಿಮ್ಮ ಐದು ವರ್ಷಗಳ ಪಂಚವಾರ್ಷಿಕ ಯೋಜನೆ ಏನಾಯಿತು? ಮೊದಲನೆಯ ವರ್ಷ ಹಾರ ಹಾಕಿಸಿಕೊಂಡಿರಿ, ಎರಡನೆಯ ವರ್ಷ ಉಪಹಾರವಾಯಿತು, ಮೂರನೆಯ ವರ್ಷ ಅಪಹಾರವಾಯಿತು, ನಾಲ್ಕನೆ ವರ್ಷ ಪರಿಹಾರ ಕಂಡುಹಿಡಿಯಲಿಕ್ಕೆ ಪ್ರಯತ್ನವಾಯಿತು, ಐದನೆಯ ವರ್ಷ ಈ ತಿದ್ದುಪಡಿಯನ್ನು ತಂದು ಸಂಹಾರ ಮಾಡಿದಿರಿ. ಇದು ನಿಮ್ಮ ಪಂಚವಾರ್ಷಿಕ ಯೋಜನೆ!

ಶ್ರೀ ಎಸ್.ಎಸ್.ಪಾಟೀಲ್: ನೇರವಾಗಿ ನನ್ನ ಮೇಲೆ ಆಪಾದನೆ ಮಾಡಿದಿರಿ, ನೀವು ಈಲ್ಡ್ ಆಗಲೇಬೇಕು. ನಾನು ಹೇಳುತ್ತೇನೆ, ಈ 50 ವರ್ಷಗಳಲ್ಲಿ ಹೇಗಿತ್ತು, ನನ್ನ ಅವಧಿಯಲ್ಲಿ

ಹೇಗಿತ್ತು ಎಂಬುದನ್ನು ನೋಡಲಿಕ್ಕೆ ಸದನ ಸಮಿತಿಯನ್ನು ಮಾಡಿಬಿಡಿ. ನನ್ನ ಕಾಲದಲ್ಲಿ ಅಭಿವೃದ್ಧಿಯಾಗಿದ್ದರೆ, ಈ ರಾಜ್ಯದ ರೈತ ಒಪ್ಪಿದ್ದರೆ ಸರಿ. ಇಲ್ಲದಿದ್ದರೆ ನೀವು ಹೇಳಿದ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ದಯವಿಟ್ಟು ಆ ರೀತಿಯ ಆಪಾದನೆ ಮಾಡಬೇಡಿ. ಬೇಕಾದರೆ ಒಂದು ಸದನ ಸಮಿತಿಯನ್ನು ಮಾಡಿ. ಇಡೀ ರಾಜ್ಯದಲ್ಲಿ 50 ವರ್ಷಗಳ ಇತಿಹಾಸದಲ್ಲಿ ಸಹಕಾರ ಕ್ಷೇತ್ರ ಹೇಗಿತ್ತು, ನನ್ನ ನಾಲ್ಕು ವರ್ಷಗಳ ಅವಧಿಯಲ್ಲಿ ಹೇಗಿತ್ತು ಎನ್ನುವುದರ ಬಗ್ಗೆ ಇವತ್ತು ಚರ್ಚೆಯಾಗಲಿ. ಆ ದೃಷ್ಟಿಯಿಂದ ನಾನು ಹೇಳುತ್ತೇನೆ. ನಾಳೆ ಒಂದು ಸದನ ಸಮಿತಿ ಮಾಡಿ. ಸುಮ್ಮನೆ ಹಾಗೆ ಹೇಳಬೇಡಿ. ಬಹಳ ಪ್ರಾಮಾಣಿಕವಾಗಿ ಹೆಚ್ಚು ಅಭಿವೃದ್ಧಿಯಾಗಿದೆ. ತಾವು ರೆಕಾರ್ಡ್ ತೆಗೆದು ನೋಡಿ.

(ಶ್ರೀ ಎ.ಎಸ್.ಗುರುಸ್ವಾಮಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹಿಂದೆ ಎಷ್ಟು ಡಿಪಾಸಿಟ್ ಇತ್ತು, ಈಗ ಎಷ್ಟಾಗಿದೆ, ನನ್ನ ಅವಧಿಯಲ್ಲಿ ಎಷ್ಟು ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಹಿಂದಿನ ಅವಧಿಯಲ್ಲಿ ಎಷ್ಟು ಮಿಸ್ ಅಪ್ರೋಪ್ರಿಯೇಷನ್ ಆಗಿದೆ ನೋಡೋಣ. ದೋಷಗಳು ಇರುತ್ತವೆ, ನಾನು ಇಲ್ಲವೆನ್ನುವುದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ನಾನು ಹೇಳುವುದು ಏನೆಂದರೆ, 1880 ಕೋಟಿ ರೂಪಾಯಿಗೆ ಸರ್ಕಾರ ಗ್ಯಾರಂಟಿ ಇದೆ. ಇದು ಯಾರ ಹಣ ನಿಮ್ಮ ಹಣ.

ಶ್ರೀ ಎಸ್.ಎಸ್.ಪಾಟೀಲ್: ನೀವು ಹೇಳಿದ ಹಾಗೆ ಕೆಲವು ಅಡ್ಜೆಸ್ಟ್‌ಮೆಂಟ್‌ಗಳಾಗಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಎಲ್ಲಾ ಅಲ್ಲಿ ಮಾಡುವುದು ಅದೇ ಬದುಕು ಬಹಳಷ್ಟು. ಬಹಳ ಸುಧಾರಿಸಿವೆ. ಉದಾಹರಣೆಗೆ ಹೇಳುವುದಾದರೆ, ರಾಯಚೂರು ಬ್ಯಾಂಕು ಸಂಪೂರ್ಣ ಹಾಳಾಗಿ ಹೋಗಿತ್ತು. ಇವತ್ತು ಏನಾಗಿದೆ? ಬಿಜಾಪುರ ಬ್ಯಾಂಕು ರಾಷ್ಟ್ರಮಟ್ಟದಲ್ಲಿ ಬಹುಮಾನ ತೆಗೆದುಕೊಂಡಿದೆ. ಕೆಲವು ದೋಷಗಳಾಗಿವೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ನಿಮ್ಮ ಸಹಕಾರಿ ಸಂಘಗಳು ಬ್ಯಾಂಕ್ ಮಾಡಿದ ಮೇಲೆ ಹೇಗಾಗಿವೆ ನೋಡಿ. ಈ ಕಾರಣದಿಂದ ನಾನು ಹೇಳುತ್ತಿದ್ದೇನೆ, ಇನ್ನು ಒಂದೆರಡು ವರ್ಷ ನೀವು ಕಷ್ಟಪಡಿರಿ, ನಾವು ರಾಷ್ಟ್ರದಲ್ಲಿಯೇ ಎರಡನೆಯ ಸ್ಥಾನದಲ್ಲಿ ಬರುತ್ತೇನೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಇದರ ಬಗ್ಗೆ ಬೇಕಾದರೆ ಒಂದು ಸದನ ಸಮಿತಿ ನೇಮಿಸಿ, ಇಲ್ಲ ಒಂದು ತನಿಖೆ ಮಾಡಿಸಿ. ನಾನು ಬೇಡವೆನ್ನುವುದಿಲ್ಲ. ಐದು ವರ್ಷಗಳ ಹಿಂದೆ ಹೇಗಿತ್ತು, ಐದು ವರ್ಷದ ನನ್ನ ಅವಧಿಯಲ್ಲಿ ಸಹಕಾರಿ ಕ್ಷೇತ್ರ ಎಷ್ಟು ಬೆಳೆದಿದೆ? ನಿಮ್ಮ ಅಪೆಕ್ಸ್ ಬ್ಯಾಂಕ್ ಹೇಗಿದೆ ನಿಮ್ಮ ಇನ್ನೊಂದು ಬ್ಯಾಂಕ್ ಹೇಗಿದೆ, ನಿಮ್ಮ ಡಿಸಿಸಿ ಬ್ಯಾಂಕ್ ಹೇಗಾಗಿವೆ ನಿಮ್ಮ ಅರ್ಬನ್ ಬ್ಯಾಂಕ್ ಹೇಗಿವೆ ನಿಮ್ಮ ಪ್ರೈಮರಿ ಸೊಸೈಟಿಗಳು ಹೇಗಿವೆ ಹೋಗಿ ಅಲ್ಲಿ ನೋಡಿ. ಆ ಕಾರಣದಿಂದ ಹೇಳುತ್ತಿದ್ದೇನೆ. ಹೆಚ್ಚು ಹಿಡಿತ ಇಟ್ಟುಕೊಂಡಷ್ಟು ಕೆಡಿಸುತ್ತೇವೆ. ಫ್ರೀಬಿಟ್ಟು ಅವರನ್ನೇ ಮಾಡಿರಿ ಅನ್ನಿ, ಚೆನ್ನಾಗಿ ಆಗುತ್ತವೆ. ಈ ಕಾರಣದಿಂದ ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಆ ದೃಷ್ಟಿಯಿಂದ ನೀವು ನಂಬಿ. ನೀವೇ ಹೇಳಿದಿರಲ್ಲಾ ನಂಬಿ

ಕೆಟ್ಟವರಿಲ್ಲವೆಂದು. ನಂಬಿಕೆಯೇ ದೊಡ್ಡ ದೇವರು ಎಂದು. ನೀವು ಸಹಕಾರಿಗಳನ್ನು ನಂಬಿ. ಹೇಗೆ ಚೆನ್ನಾಗಿ ನಡೆಸುತ್ತಾರೆ ನೋಡಿ. ಉದಾಹರಣೆಗಾಗಿ ನಿಮಗೆ ಹೇಳುತ್ತೇನೆ, ರೈತರ ಕಷ್ಟದಲ್ಲಿ ಸರ್ಕಾರ ಹೋಗಲಿಕ್ಕೆ ಆಗಿಲ್ಲ. ಕಷ್ಟವಿದೆ, ನಮ್ಮ ಸರ್ಕಾರವಿದ್ದರೂ ಅಷ್ಟೆ. ನಿಮ್ಮ ಸರ್ಕಾರವಿದ್ದರೂ ಅಷ್ಟೆ. ಎಲ್ಲಿದೆ ದುಡ್ಡು? ಆದರೆ ಅದೇ ಒಂದು ಇನ್ಸೂರೆನ್ಸ್ ಸೊಸೈಟಿ ಮಾಡಲಿಕ್ಕೆ ಹೊರಟಿದ್ದೆ. ಅಗ್ರಿಕಲ್ಚರ್ ಇನ್ಸೂರೆನ್ಸ್ ಮಾಡಬೇಕೆಂದು. ಆದರೆ ಅವೊತ್ತು ಕಾಯಿದೆಯೊಳಗೆ ಅವಕಾಶವಿರಲಿಲ್ಲ. ಇವತ್ತು ಮಾಡಿ ನೋಡಿ ಚೆನ್ನಾಗಿ ನಡೆಯುತ್ತಿದೆಯೋ ಇಲ್ಲವೋ. ಇವತ್ತು ನೀವೇ ಎಲ್ಲವನ್ನೂ ಸಹಕಾರಿಗಳ ಕೈಯಲ್ಲಿ ಕೊಡಲಿಕ್ಕೆ ಹೊರಟಿದ್ದೀರಿ. ನೀರಾವರಿ ಕೂಡ ಕೊಟ್ಟಿದ್ದೀರಿ. ಅಧಿಕಾರಿಗೆ ಕೊಟ್ಟು ಸರಿಯಾಗಲಿಲ್ಲವೆಂದು ಹಾಗೆ ಮಾಡಿದ್ದೀರಿ. ಸೊಸೈಟಿಗಳನ್ನು ಮಾಡಲಿಕ್ಕೆ ಹೊರಟಿದ್ದೀರಿ. ಈ ಕಾರಣದಿಂದ ಇವತ್ತು ನಾನು ನಿಮಗೆ ಹೇಳುತ್ತೇನೆ, ದಯವಿಟ್ಟು ಅದನ್ನು ನೀವು ಹೆಚ್ಚು ಫ್ರೀಯಾಗಿ ಬಿಡಿ. ಏನೊಂದು ತತ್ವದ ಹಿನ್ನೆಲೆಯಿದೆ ಅದನ್ನು ಬಿಟ್ಟು ನೋಡಿ. ಹೇಗಾಗುತ್ತದೆ ನೋಡೋಣ.

ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ಚೆನ್ನಾಗಿ ಕೆಲವು ಸೊಸೈಟಿಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಏನು ದೋಷವಿದೆಯೆಂದು ಹೇಳಿದಿರಿ ನಿಮಗೆ ನಮ್ಮ ಐದು ಕೋಟಿ ಜನರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮುಂದೆ ಸೇರುವ ಅಧಿವೇಶನದೊಳಗಡೆ ಯಾರು ಅಧಿಕಾರಗಳ ಮೇಲೆ ಸಹಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡು ಬಿಟ್ಟರೆ, ನಿಮಗೆ ಎಲ್ಲರ ಪರವಾಗಿ ಗಂಧದಹಾರ ತಂದು ಹಾಕಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಬರೀ ಭಾಷಣವಾಗಬಾರದು, ಇದು ಆಗಬೇಕು. ಮೊನ್ನೆ ಖಾದಿ ಗ್ರಾಮೋದ್ಯೋಗದಲ್ಲಿ ಒಂದು ಅವ್ಯವಹಾರವಾಗಿದೆಯೆಂದು ನಾನು ಅರ್ಜಿ ಕೊಟ್ಟು ಅದರ ಬಗ್ಗೆ ತನಿಖೆ ಮಾಡಿ ಆ ಸಂಘವನ್ನು ವಜಾ ಮಾಡಿ ಎನ್‌ಕ್ವೈಯರಿ ಮಾಡಿ, ರಿಕವರಿಗೆ 37 ಲಕ್ಷ ರೂ.ಗೆ ಕಳುಹಿಸಿದರೆ ಅಧಿಕಾರಿ ಅದನ್ನು ಪೆಂಡಿಂಗ್ ಇಟ್ಟುಕೊಂಡು ಕ್ಯಾನ್ಸಲ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಇಂತಹ ಅವ್ಯವಹಾರ ನಡೆಯತಕ್ಕಂಥ ಸಂದರ್ಭದಲ್ಲಿ ನೀವು ಇಷ್ಟೆಲ್ಲಾ ಬೆಳಕು ಚೆಲ್ಲುತ್ತಿದ್ದೀರಲ್ಲಾ ಇದು ಕ್ರಮ ಆಗಬೇಕು. ಆಗ ಅದು ಸಾರ್ಥಕವಾಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ):ತಾವು ಬುಕ್ ಅಡ್ಜಸ್ಟ್‌ಮೆಂಟ್ ಎಂದು ಹೇಳಿದಾಗ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಲು ಇಷ್ಟಪಡುತ್ತೇನೆ. ಕೆಲವು ಸಹಕಾರ ಸಂಘಗಳ ಪದಾಧಿಕಾರಿಗಳಾಗಿರುವವರು ಅವರದೇ ಆದ ಫೈನಾನ್ಸ್ ಕಾರ್ಪೊರೇಷನ್ ಮಾಡಿಕೊಂಡಿರುತ್ತಾರೆ. ಈ ಫೈನಾನ್ಸ್ ಕಾರ್ಪೊರೇಷನ್‌ನಿಂದ ಕೊಟ್ಟ ಸಾಲ ರಿಕವರಿ ಆಗದಿದ್ದಾಗ, ಸಹಕಾರ ಸಂಘಗಳಿಂದ ಸಾಲ ಕೊಟ್ಟು ಅಡ್ಜಸ್ಟ್‌ಮೆಂಟ್ ಮಾಡಿಸುತ್ತಾರೆ. ಇದರ ಬಗ್ಗೆ ತನಿಖೆ ಮಾಡಿಸಬೇಕಾಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ನಾವೇನು ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ, ಇದರ ಬಗ್ಗೆ ಅವರ ಹತ್ತಿರ ಚರ್ಚೆ ಮಾಡಿ, ಬೇಕಾದಷ್ಟು ಡಿಲೀಟ್ ಮಾಡಿದ್ದೇವೆ. ಅವರ ಮನಸ್ಸನ್ನು

ನೋಯಿಸಬಾರದು, ನೇರವಾಗಿ ಸೂಪರ್‌ಸೀಡ್ ಮಾಡಬಾರದು ಎಂಬ ಅನೇಕ ಕ್ಲಾಸ್‌ಗಳು ಏನೇನಿತ್ತು, ಅವುಗಳನ್ನೆಲ್ಲಾ ನಾವು ಬಿಟ್ಟಿದ್ದೇವೆ. ಈ ಸಂದರ್ಭದಲ್ಲಿ ಕೊನೆಗೆ ಒಂದೇ ಒಂದು ಮಾತು ಹೇಳುತ್ತೇನೆ. ಚಾಣುಕ್ಯ ಒಂದು ಮಾತು ಹೇಳುತ್ತಾನೆ.

''ಏಕಂ ವಿಷರಸೋ ಹಂತಿ, ಏಕೋ ಶಸ್ತ್ರೇನ ವಿದ್ಯತೇ,
ಸರಾಷ್ಟ್ರಂ ಸತ್ಪ್ರಜಂ ಹಂತಿ, ರಾಜಾ ಮಂತ್ರಿ ವಿಪ್ಲವ''

ಅಂದರೆ, ಯಾರಿಗಾದರೊಬ್ಬರಿಗೆ ವಿಷ ಹಾಕಿದರೆ ಒಬ್ಬ ಸತ್ತು ಹೋಗುತ್ತಾನಂತೆ. ಅದೇ ಚಾಕು ಹಾಕಿದರೆ ಇಬ್ಬರು ಸತ್ತು ಹೋಗುತ್ತಾರಂತೆ. ಹಾಗೆಯೇ ಮಾಸ್ಟರ್ ಪ್ಲಾನ್ ಮಾಡಿ ಕಾಯಿದೆ ಮಾಡಲಿಲ್ಲವೆಂದರೆ ಇಡೀ ರಾಜ್ಯ ಮತ್ತು ರಾಷ್ಟ್ರ ಸಮೇತ ನಾಶವಾಗುತ್ತದೆ. ನೀವು ಮಾಡಿದಂತಹ ಕಾಯಿದೆ ರಾಷ್ಟ್ರ, ರಾಜ್ಯ ಎರಡೂ ನಾಶ, ಈ ಕಾಯಿದೆಯೇ ನಾಶವಾಗುತ್ತದೆ. ಆದ್ದರಿಂದ, ಈ ಕಾಯಿದೆಯನ್ನು ಉಳಿಸುವುದಕ್ಕೋಸ್ಕರ ನಾನು ಈ ವಿಚಾರವನ್ನು ತಂದಿದ್ದೇನೆ. ದಯವಿಟ್ಟು ಸಮ್ಮತಿ ಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ಈಗಾಗಲೇ ತಮ್ಮ ಮನವಿಯಂತೆ ತಿದ್ದುಪಡಿ ತಂದು ಕ್ಲಾಸ್-10ನ್ನು ಸಬ್‌ಸ್ಟಿಟ್ಯೂಟ್ ಮಾಡಿದ್ದೇನೆ. ಕ್ಲಾಸ್-13ರಲ್ಲಿ ಒಮಿಟ್ ಮಾಡಿದ್ದೇವೆ. ಕ್ಲಾಸ್-16ನ್ನು ಒಮಿಟ್ ಮಾಡಿದ್ದೇವೆ. ಕ್ಲಾಸ್-23ನ್ನು ರೀ-ನಂಬರ್ ಮಾಡಿದ್ದೇವೆ. ಕ್ಲಾಸ್-25 ಮತ್ತು 26ನ್ನು ಒಮಿಟ್ ಮಾಡಿದ್ದೇವೆ. ಮತ್ತೆ ಇನ್ನೊಂದು ಕ್ಲಾಸ್-14, 15, 17, 24 ಇಟ್ಟುಕೊಂಡು 14, 15, 17, 18, 19, 20, 21, 22, 23 ಮತ್ತು 24ನ್ನು ರೀನಂಬರ್ಡ್ ಮಾಡಿ 13, 14, 15, 16, 17, 18, 19, 20, 21, 22 ಎಂದು ಮಾಡಿದ್ದೇವೆ.

ಶ್ರೀ ಕೆ.ಬಿ.ಕೋಳಿವಾಡ(ರಾಣೆಬೆನ್ನೂರು): ಸಾಲ ಕೊಡತಕ್ಕ ಸಂಸ್ಥೆಗಳು ಯಾವುವಿವೆ, ಆ ಸಂಸ್ಥೆಯವರು ಬೇರೆ ಫರ್ಮ್‌ನ್ನು ಮಾಡಿಕೊಂಡು, ಕೋಟ್ಯಾಂತರ ರೂಪಾಯಿಗಳ ಸಾಲ ಕೊಟ್ಟು, ಆ ಫರ್ಮ್ ಮುಳುಗುವ ಪೂರ್ವದಲ್ಲೇ ಮೆಂಬರ್‌ಷಿಪ್‌ನ್ನು ಕಳೆದು, ಯಾರೋ ಇನ್ನೋಸೆಂಟ್ ಪರ್ಸನ್‌ನ್ನು, ಬಡವರನ್ನು ಮೆಂಬರ್ ಮಾಡಿ, ಪಾರ್ಟನರ್‌ಷಿಪ್ ಆಕ್ಟ್‌ನಿಂದ ಹಿಡಿತವನ್ನು ತಪ್ಪಿಸಿಕೊಂಡು ಆ ಸಂಸ್ಥೆಗೆ ಕೊಟ್ಟಂಥ ಕೋಟ್ಯಾಂತರ ರೂಪಾಯಿಗಳು ಹಾಳಾಯಿತಲ್ಲಾ ಇಂಥವರಿಗೆ ನಿಮ್ಮ ಕಾನೂನಿನಲ್ಲಿ ಏನು ತಂದಿದ್ದೀರಿ. ಇದರೊಳಗೆ ಏನಾದರೂ ಹಿಡಿಯುವುದಕ್ಕಾಗುತ್ತದೆಯೇ? ದಯಮಾಡಿ ಮಂತ್ರಿಗಳು ಹೇಳಬೇಕು.

ಶ್ರೀ ಡಿ.ಕೆ.ಶಿವಕುಮಾರ್: ಈಗಾಗಲೇ ಈ ವಿಚಾರದಲ್ಲಿ ಪ್ರಶ್ನೆ ಹಾಕಿದ್ದರಿ, ನಾನು ಉತ್ತರವನ್ನು ಕೊಟ್ಟಿದ್ದೇನೆ. ಕೆಲವು ವಿಚಾರಗಳಲ್ಲಿ ನಾನು ಇಂಡಿವಿಜ್ಯುಯಲ್ ಆಗಿ ಹೋಗುವುದಕ್ಕೆ ತಯಾರಿಲ್ಲ. ಕೆಲವು ತಪ್ಪುಗಳು ಆಗಿದೆ. ಆ ತಪ್ಪುಗಳನ್ನು ಸರಿ ಮಾಡಬೇಕೆಂದೇ ಇಂತಹ ಕಾನೂನು, ಕಾಯಿದೆಗಳನ್ನು ತರುತ್ತಾ ಇದ್ದೇವೆ. ಅದು ಬಹುಶಃ ಅವರಿಗೂ ಅರ್ಥವಾಗಿದೆ. ಹಿಂದೆ ತಪ್ಪು ಮಾಡಿದ್ದೆವು, ಮುಂದಕ್ಕಾದರೂ ತಿದ್ದಿಕೊಳ್ಳಲಿ ಎಂದು ನಾನು

ಪ್ರಷರ್ ಬಿಲ್ಡಪ್ ಮಾಡುತ್ತಿದ್ದೇನೆಯೇ ಹೊರತು ಬೇರೆ ಯಾವುದೇ ಉದ್ದೇಶ ಇಲ್ಲ. ಬಹುಶಃ ಈ ನಿಟ್ಟಿನಲ್ಲಿ ಎಲ್ಲಾ ಸಹಕಾರಿಗಳು ಸಹಕಾರ ಕೊಡಬೇಕು. ಏಕೆಂದರೆ, ಸಹಕಾರಿಗಳು ಇದಕ್ಕೆ ಸಹಕಾರ ಕೊಡಲಿಲ್ಲವೆಂದರೆ, ಈ ಒಂದು ಇಲಾಖೆ ಇರಲಿಕ್ಕೆ ಸಾಧ್ಯವಿಲ್ಲ. ನಾನು ಇಲ್ಲಿಗೆ ಬರಬೇಕಾದರೂ ಕಾಲು ಸಹಕಾರ ಕೊಡಬೇಕು, ನಿಮ್ಮ ಹತ್ತಿರ ಮಾತನಾಡಬೇಕಾದರೂ ನನ್ನ ಬಾಯಿ ಸಹಕಾರ ಕೊಡಬೇಕು. ನಾನು ಹೇಳಿದ್ದನ್ನು ಕೇಳಬೇಕಾದರೂ ನಿಮ್ಮ ಕಿವಿ ಸಹಕಾರ ಕೊಡಬೇಕು. ನನ್ನ ನೋಡುವುದಕ್ಕೆ ನಿಮ್ಮ ಕಣ್ಣು ಸಹಕಾರ ಕೊಡಬೇಕು. ಆದ್ದರಿಂದ ಪ್ರತಿ ಹಂತದಲ್ಲೂ ಮನುಷ್ಯನ ಜೀವನದಲ್ಲಿ ಸಹಕಾರ ಬಹಳ ಅವಶ್ಯಕತೆ ಇದೆ. ಅದರಂತೆ, ನಿಮ್ಮ ಸಹಕಾರ ನಮ್ಮ ಈ ಕಾಯಿದೆಗೆ ಇರಲಿ ಎಂದು ಹೇಳುತ್ತಾ, ತಾವು ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ನೆರವು ಪಡೆದ ಸಂಘದೊಳಗೆ ಲೋನ್ ಮತ್ತು ಷೇರು ಈ ಎರಡೇ ಉಳಿಸಿ, ಉಳಿದುದ್ದನ್ನು ತೆಗೆಯಿರಿ.

ಶ್ರೀ ಡಿ.ಕೆ.ಶಿವಕುಮಾರ್: ಅಸಿಸ್ಟೆನ್ಸ್ ಸೊಸೈಟಿ ಎಂದರೆ ಷೇರು ಒಂದು ಸಾವಿರ ರೂಪಾಯಿಗಳು ಇರುತ್ತದೆ, ಸರ್ಕಾರ 10 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತದೆ. ಇನ್ನೊಂದು ಕಡೆ ಒಂದು ಕೋಟಿ ರೂಪಾಯಿ ಸಾಲಕ್ಕೆ ಗ್ಯಾರಂಟಿಯಾಗಿರುತ್ತದೆ. ಹಾಗಾದರೆ ಬರೀ ಒಂದು ಸಾವಿರ ರೂಪಾಯಿ ಷೇರು ಇದೆಯೆಂದು ನಾವು ಅವರ ಮೇಲೆ ಏನೂ ಮಾತನಾಡದೇ ಹೋದರೆ ಹೇಗೆ? ಇದು ಸರ್ಕಾರದ ದುಡ್ಡು ಪ್ರತಿ ಹಂತದಲ್ಲೂ ಕೂಡ ಅಕೌಂಟಬಿಲಿಟಿ ಇರಬೇಕು. ಆ ಅಕೌಂಟಬಿಲಿಟಿ ಇರಲಿ ಎನ್ನುವ ದೃಷ್ಟಿಯಿಂದ ನಾವು ಇದನ್ನು ತಂದಿದ್ದೇವೆಯೇ ಹೊರತು ಬೇರೆ ಇನ್ನೇನೂ ಇಲ್ಲ.

ಶ್ರೀ ಎ.ಎಸ್.ಗುರುಸ್ವಾಮಿ(ಚೇರ್ಮನ್): ಪ್ರಸ್ತಾವ ಏನೆಂದರೆ, ''2000ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು:

ಖಂಡ 2 ರಿಂದ 9ರ ವರೆಗೆ:

ಚೇರ್ಮನ್: ಖಂಡ 2 ರಿಂದ 9ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9ರ ವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 10ಕ್ಕೆ ತಿದ್ದುಪಡಿ:

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 10ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

''10. 28ಎ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 28ಎ ಪ್ರಕರಣದಲ್ಲಿ

(1) (2)ನೇ ಉಪ ಪ್ರಕರಣದಲ್ಲಿ-

(ಎ) (1)ನೇ ಖಂಡದಲ್ಲಿ (ಸಿ) ಉಪ ಖಂಡದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:

''ಪರಂತು, ಒಂದು ಜಿಲ್ಲೆಯನ್ನು ಮೀರದ ಪ್ರವರ್ತನಾ ಪ್ರದೇಶವನ್ನು ಹೊಂದಿರುವ ನಗರ ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ ಗರಿಷ್ಠ ಸಂಖ್ಯೆಯು ಹದಿನೈದು ಸದಸ್ಯರನ್ನು ಮೀರತಕ್ಕದ್ದಲ್ಲ''

(ಬಿ) (3)ನೇ ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

''(3) ಅಪೆಕ್ಸ್ ಸಂಘದ ಸಂದರ್ಭದಲ್ಲಿ, ಮೂವತ್ತೆರಡು ಸದಸ್ಯರು''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಚೇರ್ಮನ್: ಪ್ರಸ್ತಾವ ಏನೆಂದರೆ,

10.28ಎ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 28ಎ ಪ್ರಕರಣದಲ್ಲಿ-

(1) (2)ನೇ ಉಪ ಪ್ರಕರಣದಲ್ಲಿ-

(ಎ) (1)ನೇ ಖಂಡದಲ್ಲಿ (ಸಿ) ಉಪ ಖಂಡದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:

''ಪರಂತು, ಒಂದು ಜಿಲ್ಲೆಯನ್ನು ಮೀರದ ಪ್ರವರ್ತನಾ ಪ್ರದೇಶವನ್ನು ಹೊಂದಿರುವ ನಗರ ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ ಗರಿಷ್ಠ ಸಂಖ್ಯೆಯು

ಹದಿನೈದು ಸದಸ್ಯರನ್ನು ಮೀರತಕ್ಕದ್ದಲ್ಲ''

(ಬಿ) (3)ನೇ ಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ

(3) ಅಪೆಕ್ಸ್ ಸಂಘದ ಸಂದರ್ಭದಲ್ಲಿ ಮೂವತ್ತೆರಡು ಸದಸ್ಯರು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಚೇರ್ಮನ್: ಪ್ರಸ್ತಾವ ಏನೆಂದರೆ,

''ಖಂಡ 10 ತಿದ್ದುಪಡಿಯಾದ ರೀತಿಯಲ್ಲಿ, ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 10ಕ್ಕೆ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 11 ಮತ್ತು 12:

ಪ್ರಸ್ತಾವ ಏನೆಂದರೆ,-

ಚೇರ್ಮನ್:''ಖಂಡ 11 ಮತ್ತು 12 ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 11 ಮತ್ತು 12 ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 13ಕ್ಕೆ ತಿದ್ದುಪಡಿ:

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಖಂಡ 13ನ್ನು ವಿಧೇಯಕದಿಂದ ತೆಗೆದುಹಾಕುವ ತಿದ್ದುಪಡಿಯನ್ನು ಮಂಡಿಸುತ್ತೇನೆ.

''ಖಂಡ 13ನ್ನು ವಿಧೇಯಕದಿಂದ ತೆಗೆದು ಹಾಕುವುದು''

ಪ್ರಸ್ತಾವ ಮಂಡಿಸಲ್ಪಟ್ಟಿತು

ಚೇರ್ಮನ್: ಪ್ರಸ್ತಾವ ಏನೆಂದರೆ,-

''ಖಂಡ 13ನ್ನು ವಿಧೇಯಕದಿಂದ ತೆಗೆದು ಹಾಕುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 13ನ್ನು ವಿಧೇಯಕದಿಂದ ತೆಗೆದು

ಹಾಕಲಾಯಿತು.

ಖಂಡ 14 ಮತ್ತು 15:

ಚೇರ್ಮನ್: ಪ್ರಸ್ತಾವ ಏನೆಂದರೆ,

''ಖಂಡ 14 ಮತ್ತು 15 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತಗೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 14 ಮತ್ತು 15 ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 16ಕ್ಕೆ ತಿದ್ದುಪಡಿ:

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 16ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

''ಖಂಡ 16ನ್ನು ವಿಧೇಯಕದಿಂದ ತೆಗೆದು ಹಾಕುವುದು''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಚೇರ್ಮನ್: ಪ್ರಸ್ತಾವ ಏನೆಂದರೆ,-

''ಖಂಡ 16ನ್ನು ವಿಧೇಯಕದಿಂದ ತೆಗೆಯುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 16ನ್ನು ವಿಧೇಯಕದಿಂದ ತೆಗೆಯಲಾಯಿತು.

ಖಂಡ: 17 ರಿಂದ 22 ರವರೆಗೆ

ಚೇರ್‌ಮನ್: ಪ್ರಸ್ತಾಪ ಏನೆಂದರೆ: ''ಖಂಡ 17 ರಿಂದ 22ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 23ಕ್ಕೆ ತಿದ್ದುಪಡಿ:

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಖಂಡ 23ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"that in clause 23 (Renumbered as 21), in section 121

sought to be inserted, the words "except Section 30A" shall be Omitted."

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಚೇರ್‌ಮನ್: ಪ್ರಸ್ತಾವ ಏನೆಂದರೆ: "That in clause 23(Renumbered as 21), in Section 121 sought to be inserted, the words "except Section 30A shall be omitted."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ 23, ತಿದ್ದುಪಡಿಯಾದ ರೀತಿಯಲ್ಲಿ:

ಚೇರ್‌ಮನ್: ಪ್ರಸ್ತಾವ ಏನೆಂದರೆ, ''ಖಂಡ 23, ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ 23, ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ: 24

ಚೇರ್‌ಮನ್: ಪ್ರಸ್ತಾವ ಏನೆಂದರೆ: ''ಖಂಡ 24 ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 24ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 25 ಮತ್ತು 26ಕ್ಕೆ ತಿದ್ದುಪಡಿ:

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): **ಖಂಡ** 25 **ಮತ್ತು** 26**ಕ್ಕೆ ಈ ಕೆಳಕಂಡ** ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"That clause 25 and 26 shall be Omitted"

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಚೇರ್‌ಮನ್: ಪ್ರಸ್ತಾವ ಏನೆಂದರೆ: "That clause 25 and 26 shall be Omitted"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಹಾಗೂ ಖಂಡ 25 ಮತ್ತು 26 ಅನ್ನು ಈ ವಿಧೇಯಕದಿಂದ ತೆಗೆದುಹಾಕಲಾಯಿತು.

ಖಂಡ 14, 15 ಮತ್ತು 17 ರಿಂದ 24ರವರೆಗೆ ಮರುಸಂಖ್ಯೆಗೊಳಿಸುವುದು:

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

''ಖಂಡ 14, 15, 17, 18, 19, 20, 21, 22, 23 ಮತು 24ಗಳನ್ನು 13, 14, 15, 16, 17, 18, 19, 20, 21 ಮತ್ತು 22 ಎಂದು ಮರುಸಂಖ್ಯೆಗೊಳಿಸುವುದು''

ಪ್ರಸ್ತಾವ ಮಂಡಿಸಲ್ಪಟ್ಟಿತು

ಚೇರ್‌ಮನ್: ಪ್ರಸ್ತಾವ ಏನೆಂದರೆ:

''ಖಂಡ 14, 15, 17, 18, 19, 20, 21, 22, 23 ಮತು 24ಗಳನ್ನು 13, 14, 15, 16, 17, 18, 19, 20, 21 ಮತ್ತು 22 ಎಂದು ಮರುಸಂಖ್ಯೆಗೊಳಿಸುವುದು''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮೇಲ್ಕಂಡ ಖಂಡಗಳನ್ನು ಮರುಸಂಖ್ಯೆಗೊಳಿಸಲಾಯಿತು ಹಾಗೂ ಇವು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಚೇರ್‌ಮನ್: ಪ್ರಸ್ತಾವ ಏನೆಂದರೆ-

''ಮೊದಲನೆಯ ಖಂಡ, ದೀರ್ಘ ಶಿರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಮಂತ್ರಿ): ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ, 2000 ವಿಧೇಯಕವನ್ನು ತಿದ್ದುಪಡಿಯಾದ

ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಚೇರ್‌ಮನ್: ಪ್ರಸ್ತಾವ ಏನೆಂದರೆ -

''ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ, 2000ವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು